
# ಶ್ರೀಹರಿಚರಿತೆ

# ಪು.ತಿ.ನ. ರಸದರ್ಶನ

ಎಲ್.ವಿ. ಶಾಂತಕುಮಾರಿ



# ಶ್ರೀಹರಿಚರಿತೆ
# ಪು.ತಿ.ನ. ರಸದರ್ಶನ

ಎಲ್. ವಿ. ಶಾಂತಕುಮಾರಿ

**ಪು.ತಿ.ನ. ಟ್ರಸ್ಟ್**
ನಂ. ೩೦, 'ಸಂಕಲ್ಪ', ಪುಷ್ಪಗಿರಿನಗರ
ಬನಶಂಕರಿ ಮೂರನೇ ಹಂತ
ಬೆಂಗಳೂರು – ೫೬೦ ೦೮೫

**SHREEHARICHARITE - PUTINA RASADARSHANA:**
by **L. V. Shanthakumari**

Published by
**Dr.P.T.N. Trust.Re.** (Govt of Karnataka); 30, Sankalpa,
Pushpagirinagara, Banashankari 3rd Stage, Bengaluru-560085

First Edition: 2016

Pages: 80

Price : Rs. 60/-

ಹಕ್ಕುಗಳು: ಲೇಖಕರು

ಮೊದಲ ಮುದ್ರಣ: ೨೦೧೬

ಪ್ರಕಾಶಕರು
**ಪು.ತಿ.ನ. ಟ್ರಸ್ಟ್**
ನಂ. ೩೦, 'ಸಂಕಲ್ಪ', ಪುಷ್ಪಗಿರಿನಗರ
ಬನಶಂಕರಿ ಮೂರನೇ ಹಂತ
ಬೆಂಗಳೂರು – ೫೬೦ ೦೮೫

ಮುಖಪುಟ ವಿನ್ಯಾಸ:

ಅಕ್ಷರ ಜೋಡಣೆ: ಶ್ರೀಧರ್ ಆರ್. ಎಸ್.
ಕರಡು ತಿದ್ದುವಿಕೆ: ಡಾ. ಎಚ್. ಎಸ್. ಸತ್ಯನಾರಾಯಣ

ಮುದ್ರಕರು

# ಅರಿಕೆ

ಪು.ತಿ.ನ ಅವರ 'ಶ್ರೀಹರಿಚರಿತೆ'ಯನ್ನು ಓದಬೇಕೆಂದಿದ್ದ ಬಹುದಿನದ ಅಭಿಲಾಷೆ ಇತ್ತೀಚೆಗೆ ಕೈಗೂಡಿತು. ಈ ಮಹಾಕಾವ್ಯದ ರಸಪ್ರಪಂಚ ನನ್ನ ಮನಸ್ಸನ್ನು ಆವರಿಸಿಕೊಂಡುಬಿಟ್ಟಿತು. ಅದರ ಪರಿಣಾಮವಾಗಿ ರೂಪುಗೊಂಡ ಕೆಲವು ಅನಿಸಿಕೆಗಳನ್ನು ಇಲ್ಲಿ ದಾಖಲಿಸಿದ್ದೇನೆ.

ಕನ್ನಡ ಕಾವ್ಯ ಕ್ಷೇತ್ರದಲ್ಲಿ, ಕಾವ್ಯರಚನೆಯ ಬಗೆಗೆ ಇರುವ ಛಂದಸ್ಸು ಮಾತ್ರೆ, ಗಣ, ಮುಂತಾದವುಗಳ ಬಗೆಗೆ ನನಗೆ ಯಾವುದೇ ಹೆಚ್ಚಿನ ಜ್ಞಾನವಿಲ್ಲ. ಹಾಗೆಯೇ ಪು.ತಿ.ನ. ಅವರ ವಿದ್ವತ್ತನ್ನೂ, ಅವರ ರಸಪ್ರಜ್ಞೆಯ ಪರಿಕಲ್ಪನೆಯನ್ನೂ ಸಮರ್ಪಕವಾಗಿ ಅರ್ಥಮಾಡಿಕೊಳ್ಳುವ ಪಾಂಡಿತ್ಯವೂ ನನ್ನಲ್ಲಿ ಇಲ್ಲವೆಂಬ ಅರಿವು ನನಗಿದೆ. ಆದರೆ, 'ಶ್ರೀಹರಿಚರಿತೆ'ಯಲ್ಲಿ ಅಭಿವ್ಯಕ್ತಗೊಂಡು ಪ್ರವಹಿಸಿರುವ ಮಧುರಭಕ್ತಿರಸ, ವೈಚಾರಿಕತೆ, ಹೊಸತು ಹಳತರ ಸುಂದರ ಸಮನ್ವಯ, ಕೃಷ್ಣನ ಅನನ್ಯ ವ್ಯಕ್ತಿತ್ವಗಳು ನನ್ನ ಭಾವಬುದ್ಧಿಗಳನ್ನು ಸೂರೆಗೊಂಡು, ನಾನು ಅನುಭವಿಸಿದ್ದನ್ನು ಸಮಾನ ಮನಸ್ಕರೊಂದಿಗೆ ಹಂಚಿಕೊಳ್ಳುವ ಕಿರು ಪ್ರಯತ್ನ ಮಾತ್ರ ಈ ಬರಹ.

**ಎಲ್. ವಿ. ಶಾಂತಕುಮಾರಿ**

**ಡಾ. ಪು.ತಿ.ನ. ಟ್ರಸ್ಟ್ ರಿ.**
(ಕರ್ನಾಟಕ ಸರ್ಕಾರ)
ಬೆಂಗಳೂರು

ಅಧ್ಯಕ್ಷರು
**ಡಾ। ಎಚ್. ಎಸ್. ವೆಂಕಟೇಶಮೂರ್ತಿ**

ಕಾರ್ಯದರ್ಶಿಗಳು
**ಖಾದ್ರಿ ಎಸ್. ಅಚ್ಯುತನ್**

ಸದಸ್ಯರು
**ಡಾ. ಪ್ರಭುಶಂಕರ**
**ಡಾ. ಶ್ರೀರಾಮಭಟ್ಟ**
**ಶ್ರೀ ವೈ. ಕೆ. ಮುದ್ದುಕೃಷ್ಣ**
**ಡಾ. ಬಿ. ವಿ. ರಾಜಾರಾಮ್**
**ಶ್ರೀ ಡಿ. ಬಾಲಕೃಷ್ಣ**
**ಶ್ರೀ ಎನ್. ಎಸ್. ಶ್ರೀನಾಥ್**
**ಶ್ರೀ ಎಚ್. ವಿ. ರವೀಶ್**

ಪದನಿಮಿತ್ತ ಸದಸ್ಯರು:
**ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.**
**ಜಿಲ್ಲಾಧಿಕಾರಿಗಳು, ಮಂಡ್ಯ.**

# ಪರಿವಿಡಿ


| | | |
|---|---|---|
| ೧. | ಪ್ರಸ್ತಾವನೆ | ೭ |
| ೨. | ಶ್ರೀಹರಿಚರಿತೆ ಮತ್ತು ಪು.ತಿ.ನ. ಅವರ ಜೀವನದರ್ಶನ | ೧೩ |
| ೩. | ಶ್ರೀಹರಿಚರಿತೆ | ೧೫ |
| ೪. | ಭೂದೇವಿಗೆ ಅಭಯ ಪ್ರದಾನ | ೧೮ |
| ೫. | ಜನನಿ ಜನಕ ವೀಕ್ಷಣಂ | ೨೧ |
| ೬. | ಜನನಿ ಜನಕ ಸಂಸ್ಕಾರಂ | ೨೫ |
| ೭. | ಸದವತಾರಂ | ೨೮ |
| ೮. | ಗೋಕುಲ ಗಮನಂ ಮತ್ತು ವ್ರಜಗಮನಂ | ೩೧ |
| ೯. | ಶೈಶವ ಲೀಲಾಲೋಕನಂ | ೩೫ |
| ೧೦. | ವಿಪನಾವಗಾಹಂ ಭಾಂಡೀರ ದರ್ಶನಂ<br>ಪರಿಸರ ಪ್ರಜ್ಞೆ–ವೃಕ್ಷ ಪ್ರಗಾಥ | ೩೮ |
| ೧೧. | ವರ್ಷಾವಗಾಹಂ | ೪೫ |
| ೧೨. | ವೇಣುಗಾನಾವತರಣಂ | ೪೭ |
| ೧೩. | ರಾಧಾ ರಸದರ್ಶನ | ೫೧ |
| ೧೪. | ಕಾಳಿಂಗ ಮರ್ದನದ ಅಂತರಾರ್ಥ | ೫೭ |
| ೧೫. | ಗೋವರ್ಧನೋದ್ಧರಣ, ಇಂದ್ರಗರ್ವಭಂಗ | ೫೯ |
| ೧೬. | ಪ್ರಲಂಭವಧಂ | ೬೬ |
| ೧೭. | ರಾಸಾರಂಭಂ–ಗೋಪಿಕಾವಿಲಾಸ–ರಾಸಕ್ರೀಡೆ | ೬೯ |
| ೧೮. | ವೇಣುತ್ಯಾಗ | ೭೧ |

# ಪ್ರಸ್ತಾವನೆ

ಹಲವು ಪ್ರಶಸ್ತಿಗಳ ಜೊತೆಗೆ, 'ಪಂಪ' ಪ್ರಶಸ್ತಿಯನ್ನೂ ಪಡೆದ ಪು.ತಿ.ನ. ಅವರ ಮಹಾಕಾವ್ಯ 'ಶ್ರೀಹರಿಚರಿತೆ', ಅವರು ಪ್ರತಿಪಾದಿಸುವ ರಸತತ್ವ, ರಸಪ್ರಜ್ಞೆ, ರಸಜಾಗರ ಸ್ಥಿತಿ ಹಾಗೂ ಕರ್ಮಯೋಗದ ಸಾರಸರ್ವಸ್ವವನ್ನು ನಿರ್ದಿಷ್ಟವಾಗಿ ವಿಶಿಷ್ಟ ದೃಷ್ಟಿಕೋನದಿಂದ ಪ್ರತಿಪಾದಿಸುವ ಅನನ್ಯ ಕೃತಿ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಭಾಗವತ ಸಂಪ್ರದಾಯಕ್ಕೆ ಸೇರಿದ ಕವಿ ಎಂದು ಹೇಳಲಾಗುವ, ಪುರೋಹಿತ ತಿರುನಾರಾಯಣ ನರಸಿಂಹಾಚಾರ್ (ಪು.ತಿ.ನ.) ಅವರಲ್ಲಿ ಕೃಷ್ಣಪ್ರಜ್ಞೆ, ರಸಪ್ರಜ್ಞೆ, ಭಕ್ತಿ ಪಾರಮ್ಯಗಳು ಪರಸ್ಪರ ಸಾಮರಸ್ಯದಿಂದ, ಸಮಪ್ರಮಾಣದಲ್ಲಿ ಸಮ್ಮಿಳಿತಗೊಂಡಿರುವುದಲ್ಲದೇ ಸಂಪ್ರದಾಯ ನಿಷ್ಠತೆ, ಪ್ರಾಚೀನ ಸಂಸ್ಕೃತಿ, ಶಾಸ್ತ್ರ ಸಂಪ್ರದಾಯಗಳ ಬಗೆಗೆ ಅಭಿಮಾನ ಜೊತೆಗೆ ಬೆಸೆದುಕೊಂಡಿರುವ, ವಿಶಾಲ ಮನೋಧರ್ಮದ ಹೊಸ ಕಾಣ್ಕೆಯೊಂದು ಅವರ ಗದ್ಯ ಬರಹಗಳು ಹಾಗೂ ಕಾವ್ಯದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಅಗಾಧ ಪಾಂಡಿತ್ಯ, ಪ್ರತಿಭೆ, ಗಾಢ ತತ್ವ ಚಿಂತನೆ ಹಾಗೂ ನಿಷ್ಕಾಮ ಭಕ್ತಿಯಿಂದಾಗಿ, ಕೃಷ್ಣಪ್ರಜ್ಞೆ–ರಸಪ್ರಜ್ಞೆಗಳನ್ನು ಸಾಕ್ಷಾತ್ಕರಿಸಿಕೊಂಡಿದ್ದ ಮಹಾಚೇತನ ಪು.ತಿ.ನ.

'ಶ್ರೀಹರಿಚರಿತೆ'ಯ ರಚನೆಗೆ ಶ್ರೀಮದ್ಭಾಗವತದ ಶ್ಲೋಕವೊಂದು ತಮಗೆ ಪ್ರೇರಣೆಯನ್ನೊದಗಿಸಿತೆಂದು ಪು.ತಿ.ನ 'ಅರಿಕೆ'ಯಲ್ಲಿ ತಿಳಿಸಿದ್ದಾರೆ. ತಮ್ಮ ಆತ್ಮಕ್ಕೆ ತುಂಬ ಹತ್ತಿರದ ದೇವರಾದವನು ಶ್ರೀಕೃಷ್ಣ. ಆ ಪುರುಷೋತ್ತಮನನ್ನು 'ಶ್ರೀ ಹರಿಚರಿತೆ' ಯಲ್ಲಿ ಅನೇಕ ಪರಿಯಲ್ಲಿ ನೆನೆದು, ಆ ಸಂತೋಷವನ್ನು ಸಹೃದಯರಿಗೆ ಹಂಚುವುದು ತಮ್ಮ ಈ ಕಾವ್ಯ ರಚನೆಯಲ್ಲಿನ ಅಭೀಪ್ಸೆಯೆಂದೂ ತಿಳಿಸಿದ್ದಾರೆ. ಪು.ತಿ.ನ ಅವರ ಹಲವು ಆಶಯಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುವ 'ಶ್ರೀಹರಿಚರಿತೆ'ಯನ್ನು ಹಲವು ನೆಲೆಗಳಿಂದ ಪರಿಶೀಲಿಸಬಹುದು. ಈ ಭಕ್ತ ಕವಿಯು ತಮ್ಮ ರಸಜಾಗರದ ಸ್ಥಿತಿಯಲ್ಲಿ ಸಾಕ್ಷಾತ್ಕರಿಸಿ–ಕೊಂಡಿರುವ ಶ್ರೀಕೃಷ್ಣಪ್ರಜ್ಞೆಯು ಮಧುರಭಕ್ತಿಭಾವವಾಗಿ, ಕೃತಿಯ ತುಂಬ ಪ್ರವಹಿಸಿರುವುದು ಈ ಕಾವ್ಯದ ಮುಖ್ಯ ಎಳೆ. "ಭವದ ಮಾಯೆಯನ್ನಡಗಿಸಿ, ಅಹಂಕಾರವನ್ನು ಅಳಿಸಿ",

ದಿವಕ್ಕೆ ಕೊಂಡೊಯ್ಯುವ ಆ ಗೋಪಾಲನ ವೇಣುಗಾನದ ಮಹಿಮೆಯ ಮೂಲಕ, ಸಂಗೀತ ಮೂಡಿಸುವ ರಸಾನಂದ ಹಾಗೂ ಮನೋ ವಿಕಾಸಗಳು ಆತ್ಮಸಾಕ್ಷಾತ್ಕಾರಕ್ಕೆ ದಾರಿಮಾಡುವುದೆಂಬ ನಂಬಿಕೆ, ರಾಧ, ಕೃಷ್ಣ, ಗೋಪಿಯರ, ಸ್ನೇಹ, ಪ್ರೇಮ ಬಾಂಧವ್ಯ, ಸೆಳೆತಗಳ ವಿಶ್ಲೇಷಣೆಯ ಮೂಲಕ ಜೀವಿಗಳು ಜೀವಕಾಮ–ಆತ್ಮಕಾಮ–ದಿವ್ಯಕಾಮರಾಗಿ ಕಡೆಗೆ ಶೂನ್ಯ ಕಾಮರಾಗುವ ವಿವಿಧ ಹಂತಗಳ ಹಾಗೂ ಕಾಮದ ಇತ್ಯಾತ್ಮಕ ಗುಣ ವಿಶೇಷಗಳ ಅನಾವರಣ ಈ ಕೃತಿಯ ಮತ್ತೊಂದು ಮುಖ್ಯ ಎಳೆ.

ಯೋಗೀಶ್ವರ ಕೃಷ್ಣನು 'ಭಗವದ್ಗೀತೆ'ಯಲ್ಲಿ ಬೋಧಿಸಿರುವ "ಕರ್ಮಣ್ಯೇವಾಧಿಕಾರಸ್ತೆ ಮಾಫಲೇಷು ಕದಾಚನ". "ಈಶ್ವರ; ಸರ್ವಭೂತಾನಾಂ, ಹೃದ್ದೇಶೇರ್ಜುನ ತಿಷ್ಠತಿ", "ನಮೇದ್ವೇಷೋಸ್ತಿ ನ ಪ್ರಿಯ" – ಮುಂತಾದ ಹಲವು ವಾಕ್ಯಗಳನ್ನು ಪ್ರಸ್ತುತ ಕಾಲಘಟ್ಟದ ಸಾಮಾಜಿಕ ಹಾಗೂ ಸಮಷ್ಟಿತತ್ವದ ನೆಲೆಯಿಂದ ವಿಶ್ಲೇಷಿಸಿ, ಕರ್ಮಯೋಗದ ಸಾರಸರ್ವಸ್ವವನ್ನೂ, ಅದರ ಸಾರ್ವತ್ರಿಕತೆ, ಸಾರ್ವಕಾಲಿಕತೆಗಳನ್ನು ವಿವರಿಸುವುದು ಮತ್ತೊಂದು ಎಳೆ. ಈ ಎಲ್ಲವುಗಳನ್ನು ರಸಸೂತ್ರದಿಂದ ಪೋಣಿಸುವುದು ಬೃಂದಾವನದಲ್ಲಿನ ಕೃಷ್ಣನ ಬಾಲ್ಯ ಹಾಗೂ ಬೃಂದಾವನ ಮಥುರಾನಗರದಲ್ಲಿ ಕಂಡು ಬರುವ ಗ್ರಾಮ ಮತ್ತು ನಗರ ಜೀವನಗಳಲ್ಲಿನ ವ್ಯತ್ಯಾಸದ ಚಿತ್ರಣ. ವರ್ತಮಾನದ ಕಾಲಘಟ್ಟದಲ್ಲಿ 'ಶ್ರೀ ಹರಿಚರಿತೆ'ಯ ಅರಿವಿನ ಅವಶ್ಯಕತೆಯ ಬಗೆಗೆ ಚಿಂತನೆ, ಈ ಕೃತಿಯ ಮತ್ತೊಂದು ಎಳೆಯಾಗಿ ಮೂಡಿಬಂದಿದೆ.

'ಶ್ರೀಹರಿಚರಿತೆ'ಯ 'ಅರಿಕೆ'ಯಲ್ಲಿ ಪು.ತಿ.ನ ಬರೆದಿರುವ ಈ ಮಾತುಗಳು, ವ್ಯಕ್ತಿತ್ವ ವಿಕಸನಕ್ಕೆ ಗ್ರಾಮ ಜೀವನ, ಗ್ರಾಮೀಣ ಪರಿಸರಗಳು ಹೇಗೆ ಸಹಾಯವಾಗುತ್ತವೆಂಬುದರ ಮೇಲೆ ಬೆಳಕು ಚೆಲ್ಲುತ್ತವೆ; "ಶ್ರೀ ಕೃಷ್ಣ ಬಲರಾಮರು ತಮ್ಮ ಎಳೆತನವನ್ನು ಗೋಕುಲದಲ್ಲಿ ಹಳ್ಳಿಗರ ನಡುವೆ ಬೆಳೆದು ಕಳೆದುದು ಅವರ ಬಾಳಿನಲ್ಲೇ ಅಲ್ಲದೆ, ನಮ್ಮೀ ಭಾರತ ದೇಶದಲ್ಲೇ ಸಂಭವಿಸಿದ ಮಹತ್ತರವಾದ ಘಟನೆ ಎಂದು ನನ್ನ ಭಾವನೆ. ಶ್ರೀಹರಿಯ ಗೋಕುಲೋತ್ತರ ಚರಿತೆಯಲ್ಲಿ ಆತ ಪಡೆದ ಅರಿವು–ಪಡುಹುಗಳಿಂದ ಪ್ರಭಾವಿತವಾದದ್ದು. ಸಾಮಾನ್ಯರಾದ ಕೃಷಿಕರಲ್ಲೂ, ಕಾರ್ಮಿಕರಲ್ಲೂ, ದುರ್ಬಲರಲ್ಲೂ, ಆತನಿಗೆ ಅತಿಶಯವಾದ ಮಮತೆ, ಗೌರವ ಬುದ್ಧಿ. ಮದಿಷ್ಟರೂ ದುಷ್ಟರೂ ಆದ ಕ್ಷತ್ರಿಯರ ಗುಂಪುಗಳಲ್ಲಿ ವಿಶೇಷ ತಿರಸ್ಕಾರ. ಸಾಮಾನ್ಯ ಜನರೊಡನೆ ತನ್ನ ಸಂಪರ್ಕ ಕಡಿದು ಹೋಗುತ್ತದೆ ಎಂಬ ಭಯದಿಂದಲೇ ಆತ ತನ್ನ ಸಿಂಹಾಸನವನ್ನು ತ್ಯಜಿಸಿದನೆಂದು ನನ್ನ ಊಹೆ. ಈ ಸಂಪರ್ಕದಲ್ಲಿ ಆತ ಸಾರಸ್ವವನ್ನು, ಪ್ರೀತಿಯನ್ನೂ, ಸಂತೋಷವನ್ನೂ ಕಂಡವ. ಆತನ ನಿಷ್ಕಾಮ ಕರ್ಮಯೋಗದ ಉಪದೇಶ ತನ್ನ ಬೀಜಾಂಕುರವನ್ನು ಆತನೆಳೆತನದ ಗೋಕುಲ ಜೀವಿತದಲ್ಲಿಯೇ ಪಡೆಯಿತು. ಇದು ಸಾರ್ವಕಾಲಿಕವೂ, ಲೋಕೊತ್ತರವೂ ಆದ ಉಪದೇಶ.... ಇದನ್ನು ಕುರಿತು ನಾನು ಗ್ರಹಿಸಿರುವಂತೆ ಒಂದೆರಡು ಮಾತುಗಳನ್ನು

ಇಲ್ಲಿ ಹೇಳಬೇಕೆನಿಸುತ್ತದೆ, ಏಕೆಂದರೆ ಶ್ರೀ ಹರಿಯ ಚರಿತೆ ಪ್ರಕೃತ ಸ್ಥಿತಿಗೆ ಅನ್ವಯಿಸುವುದು ಇದರಿಂದಲೇ...." ['ಅರಿಕೆ', 'ಶ್ರೀಹರಿಚರಿತೆ' ಪುಟ–೨–೮].

'ಭಗವದ್ಗೀತೆ'ಯ ಹಲವಾರು ವಾಕ್ಯಗಳನ್ನು ವಿಶಿಷ್ಟ ರೀತಿಯಲ್ಲಿ ವಿಶ್ಲೇಷಿಸಿರುವ ಪು.ತಿ.ನ., ಕರ್ಮಯೋಗದ ರಹಸ್ಯವನ್ನು ಸಾರಸರ್ವಸ್ವವನ್ನು ಹೊಸರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ; ".....ಇಲ್ಲಿ ಎರಡು 'ಅಹಂ'ಗಳಿವೆ. ಒಂದು ನರನದು, ವ್ಯಕ್ತಿಯದು; ಮತ್ತೊಂದು ನಾರಾಯಣನದು, ಸಮಷ್ಟಿ ತತ್ವದ್ದು. ವ್ಯಕ್ತಿಗೂ, ಸಮಷ್ಟಿಗೂ ಇರಬೇಕಾದ ಅನ್ಯೋನ್ಯ ಸಂಬಂಧವನ್ನು ಕುರಿತು ಪ್ರವೃತ್ತವಾಗಿದೆ ಶ್ರೀಕೃಷ್ಣೋಪದಿಷ್ಟ ಸನಾತನ ಜಗನ್ನಿರ್ವಾಹಕ ಕರ್ಮಯೋಗ. "ಕರ್ಮಣ್ಯೇವಾಧಿಕಾರಸ್ತೆ" ಎಂಬುದರಲ್ಲಿ ವ್ಯಕ್ತಿಗಿರುವ ಕರ್ಮ ಸ್ವಾತಂತ್ರ್ಯ ಉಕ್ತವಾಗಿದೆ; "ಮಾಫಲೇಷು ಕದಾಚನ" ಎಂಬಲ್ಲಿ ವ್ಯಕ್ತಿಯ ಅಧಿಕಾರ ವ್ಯಾಪ್ತಿ ಫಲದಲ್ಲಿ ಎಂದಿಗೂ ಇಲ್ಲ ಎಂಬುದು ನಿರ್ದಿಷ್ಟವಾಗಿದೆ. ಆದರೆ ಕರ್ಮಕ್ಕೆ ಫಲ ಉಂಟೇ ಉಂಟಲ್ಲ, ಅದು ಯಾರ ಸ್ವತ್ತು? ಅದರ ವಿತರಣೆ ಹೇಗೆ? ಅದು ಸಮಷ್ಟಿಗೆ ಸೇರಿದುದು, ಅದರ ವಿತರಣೆಯೂ ಸಮಷ್ಟಿಯ ಕೆಲಸ; ಈ ಮಾತು "ಯೋಗಕ್ಷೇಮಂ ವಹಾಮ್ಯಹಂ" ಎಂಬಲ್ಲಿ ಪ್ರಕಾಶಗೊಂಡಿದೆ. ಹೀಗೆ ವ್ಯಕ್ತಿಗೂ, ಸಮಷ್ಟಿಗೂ ಇರುವ ಆದಾನ ಪ್ರದಾನ ರೂಪವಾದ ಅನ್ಯೋನ್ಯತೆ, ಪಡೆಯುವುದು ಮತ್ತು ಪಡೆದುದನ್ನು ಹಂಚುವುದು ಇದು ಕರ್ಮಯೋಗದ ಪ್ರಕ್ರಿಯೆ. ವ್ಯಕ್ತಿಗೆ ಸಮರ್ಪಣ ರೂಪವಾದ ಫಲವಿರಕ್ತಿ, ಸಮಷ್ಟಿಗೆ ವಿತರಣರೂಪವಾದ ಸಂಚಿತ ಫಲ ವಿರಕ್ತಿ, ಇಬ್ಬರಿಗೂ ಕೊಡುವುದೇ ಕರ್ತವ್ಯ, ಅದರಿಂದಲೇ ತೃಪ್ತಿ, ಸಂತೋಷ, ಪುಷ್ಟಿ....". ಫಲ ವಿರಕ್ತಿಯಿಂದ ಹಾಗೂ ವ್ಯಕ್ತಿಗೆ ಸಮಷ್ಟಿಯಲ್ಲಿರುವ ಪೂರ್ಣ ವಿಶ್ವಾಸದಿಂದ ಮನಸ್ಸು ತಣ್ಣಗೆ ನಿರಾಳವಾಗಿ ಹೆಚ್ಚು ಊರ್ಜಾವತವಾಗಿ, ಅವಧಾನವುಳ್ಳದ್ದಾಗಿ, ದಕ್ಷವಾಗಿ ತನ್ನೆಸಕದಲ್ಲಿ ಸಂತೋಷ ಪಡುವಂಥದ್ದಾಗಿರುತ್ತದೆ. "ವ್ಯಕ್ತಿಯ ಫಲವಿರಕ್ತಿ ಮತ್ತು ಸಮಷ್ಟಿಯ ಯೋಗಕ್ಷೇಮ ವಿತರಣರೂಪವಾದ ಫಲನಿಸ್ಪೃಹತೆ ಇವೆರಡೂ ವಿದ್ಯುಚ್ಛಕ್ತಿಯ ಉತ್ಪಾದನೆ–ವಿತರಣ ಕ್ರಿಯೆಯಂತೆ" ಜರುಗಬೇಕಾದ ಪ್ರಕ್ರಿಯೆಗಳು, ಎಂದು ಹೇಳಿ, ಇಂತಹ ಕರ್ಮಯೋಗವನ್ನು, "ವ್ಯಕ್ತರ್ಪಿತ ಕರ್ಮಫಲ ಪರಿಚಲನ ಯೋಗಕ್ಷೇಮ ವಿತರಣ ಚಕ್ರ ಸಂವಹನ ಕ್ರಿಯೆ" ಎಂದು, ಪು.ತಿ.ನ. ಸೂತ್ರೀಕರಿಸುತ್ತಾರೆ. "ನನಗೆ ಕರ್ಮಗಳು ಅಂಟುವುದಿಲ್ಲ ನನಗೆ ಕರ್ಮಫಲಗಳಲ್ಲಿ ಆಸೆಯಿಲ್ಲ" ಎನ್ನುವ ಶ್ರೀ ಕೃಷ್ಣನ ಗೀತಾವಾಕ್ಯವನ್ನು ಉದ್ಗರಿಸುತ್ತಾರೆ. [ಪುಟ ೧೧ ಅರಿಕೆ] ಪು.ತಿ.ನ. ಅವರು ವಿಶ್ಲೇಷಿಸಿರುವ ಕರ್ಮಯೋಗದ ಸಿದ್ಧಾಂತದ ಪ್ರಕಾರ, ವ್ಯಕ್ತಿಯ ಫಲಾಸಕ್ತಿ ಆತ ಸಮಷ್ಟಿಗೆಸಗುವ ದ್ರೋಹ; ಸಮಷ್ಟಿಯ ಫಲವಿತರಣೆಯಲ್ಲಿ ಅನ್ಯಾಯ, ಅದಕ್ಷತೆ, ಪಕ್ಷಪಾತ ತಲೆದೋರಿದರೆ ಅದು ವ್ಯಕ್ತಿಗೆಸಗುವ ದ್ರೋಹ. ಈ ದ್ರೋಹ ಬುದ್ಧಿಗಳು ಉಭಯರಿಗೂ ಲೋಭ ಪ್ರವೃತ್ತವಾದ ಫಲಾಸಕ್ತಿಯಿಂದ ಹುಟ್ಟುತ್ತದೆ, ಕಾಮಕ್ರೋಧಾದಿಗಳು ಲೋಭದ ಮುಖಗಳೇ ಎನ್ನಬಹುದು. ಇದನ್ನೇ ಶ್ರೀಕೃಷ್ಣ ಆತ್ಮನಾಶಕಗಳಾದ ಮೂರು ನರಕದ್ವಾರಗಳು ಎಂದು ಕರೆದು ಅವನ್ನು

ತೊರೆಯಬೇಕೆಂದು ತನ್ನ ಆತ್ಮ ಮಿತ್ರನಿಗೆ ಉಪದೇಶಿಸುತ್ತಾನೆ" (ಪುಟ ೯–ಅರಿಕೆ). ಕರ್ಮಯೋಗದ ಇಂತಹದೊಂದು ವ್ಯಾಖ್ಯಾನ, ವರ್ತಮಾನದ ನಮ್ಮ ಸಮಾಜದ, ಪ್ರಜಾಪ್ರಭುತ್ವ, ಸಮತಾವಾದ, ಸಮಾಜವಾದ ಮುಂತಾದ ರಾಜಕೀಯ ಸಿದ್ಧಾಂತಗಳ ಮೂಲತತ್ವಗಳ ಸಾರವನ್ನೇ ಪ್ರತಿಪಾದಿಸುತ್ತಿದ್ದು, ಇಂದು ಆ ಮೂಲತತ್ವಗಳು ತಮ್ಮ ಮೌಲಿಕ ಇತ್ಯಾತ್ಮಕತೆಗಳನ್ನು ಕಳೆದುಕೊಂಡು, ಸಮಾಜದಲ್ಲಿ ವ್ಯಕ್ತಿ, ಸಮಷ್ಟಿ ಉಭಯರೂ ಕೇವಲ ಲೋಭಪ್ರವೃತ್ತರಾಗಿ, ಕರ್ಮಯೋಗದ ಅರ್ಥವನ್ನು ಸಂಪೂರ್ಣವಾಗಿ ಮರೆತಿರುವುದು ಕಂಡುಬರುತ್ತದೆ. ಕೃಷ್ಣ ಮತ್ತು ಅರ್ಜುನರ ಸಂಬಂಧದ ಬಗೆಗೆ ಪು.ತಿ.ನ. ಅವರ ಈ ಮಾತುಗಳು ಮಹತ್ವದ್ದೆನಿಸುತ್ತವೆ: "ರಾಷ್ಟ್ರನಾಯಕರಿಗೂ, ರಾಷ್ಟ್ರಕರಿಗೂ ಇರಬೇಕಾದ ಸಂಬಂಧ ಕೃಷ್ಣನಿಗೂ ಅರ್ಜುನನಿಗೂ ಇರಬೇಕಾದ ಆಪ್ತ ಸಂಬಂಧ. ಶ್ರೀಕೃಷ್ಣ ಸಮಷ್ಟಿ ತತ್ವವನ್ನೂ, ಅರ್ಜುನ ನಮ್ಮಂಥ ಮೋಹಗ್ರಸ್ತರನ್ನೂ ಪ್ರತಿನಿಧಿಸುತ್ತಾರೆಂದು ಮತ್ತೊಮ್ಮೆ ನಾನು ಒತ್ತಿ ಹೇಳಿದರೆ ಶ್ರೀಕೃಷ್ಣಚರಿತೆ ಈಗಿನ ಕಾಲಕ್ಕೆ ಎಷ್ಟು ಸುಸಂಗತವಾಗಿದೆ ಎಂಬುದು ವೇದ್ಯವಾಗುತ್ತದೆ. ವ್ಯಕ್ತಿ ಸಮಷ್ಟಿಯ ದೃಷ್ಟಿಯಿಂದ ಶ್ರೀಕೃಷ್ಣಚರಿತೆಯನ್ನು ಭಗವದ್ಗೀತೆಯನ್ನು ನೋಡಿ ಆ ಮಹಾಗ್ರಂಥಕ್ಕೆ ಬೇರೊಂದು ವ್ಯಾಖ್ಯಾನವನ್ನು ಮುಂದೆ ಬರುವ ಮಹಾತ್ಮರು ಬರೆದಾರು." ಎಂದೂ ಆಶಿಸುತ್ತಾರೆ, (ಪುಟ –೧೯) ಹಾಗೂ "ವ್ಯಕ್ತಿ ಮತ್ತು ಸಮಷ್ಟಿ ಪ್ರತಿನಿಧಿಯ ಸಂಬಂಧ ('ಶ್ರೀಹರಿಚರಿತೆಯ') ಇಲ್ಲಿಯ ಕಾಳಿಂಗ ಮರ್ದನ, ಗೋವರ್ಧನೋದ್ಧರಣ, ಶಕ್ರದಮನ, ಗೋವಿಂದ ಪಟ್ಟಾಭಿಷೇಕ, ನವಗೋಕುಲ ನಿರ್ಮಾಣ, ವೇಣುವಿಸರ್ಜನ ಮುಂತಾದ ಕಥಾಪ್ರಸಂಗಗಳಲ್ಲಿ ಸಾಂಕೇತಿಕವಾಗಿ ಹೊಳವುಗೊಂಡಿದೆ. ಸಹೃದಯರು ಈ ನೆಲೆಯಿಂದ ನೋಡಿಯಾರು" ಎಂಬುದು ಅವರ ಅಭೀಪ್ಸೆ.

ಇಪ್ಪತ್ತೇಳು ಪುಟಗಳ 'ಅರಿಕೆ', ಪು.ತಿ.ನ ಅವರ ಅಗಾಧ ಪಾಂಡಿತ್ಯ, ಸಹೃದಯತೆ, ಚಿಂತನಶೀಲ ಪ್ರತಿಭೆ, ವಿಶಾಲ ಪಕ್ಷಪಾತರಹಿತ ಮನೋಧರ್ಮ, ಅತ್ಯಂತ ಪುರಾತನ ಸೂಕ್ತಿಗಳನ್ನು ಅತ್ಯಂತ ಆಧುನಿಕ ದೃಷ್ಟಿಕೋನದಿಂದ ಪರಾಮರ್ಶಿಸುವ ಅನನ್ಯ ವಿದ್ವತ್ತಿಗೆ ಸಾಕ್ಷಿಯಾಗಿದೆ.

ಶ್ರೀಕೃಷ್ಣ ಮತ್ತು ಪು.ತಿ.ನ. ಅವರ ಸಂಬಂಧ 'ಅರಿಕೆ'ಯಲ್ಲಿ ಮನೋಜ್ಞವಾಗಿ ಅಭಿವ್ಯಕ್ತಗೊಂಡಿದೆ. ಹಾಗೆಯೇ 'ಶ್ರೀಹರಿಚರಿತೆ'ಯಲ್ಲಿ ಕೂಡ ಅದು ಮಧುರ ಭಕ್ತಿಯ ರಸವಾಗಿ ಪ್ರವಹಿಸಿದೆ. "ಶ್ರೀಕೃಷ್ಣ ನನ್ನ ಆತ್ಮಕ್ಕೆ ತುಂಬ ಹತ್ತಿರದ ದೇವರು. ನಿರಂತರವಾಗಿ ಆತನನ್ನು ನೆನೆಯುವುದು ನನಗೆ ಸ್ವಭಾವವಾಗಿ ಬಿಟ್ಟಿದೆ..." ಎನ್ನುವ ಪು.ತಿ.ನ. ಅವರ ಪ್ರಜ್ಞಾಪಾತಳಿಯಲ್ಲಿ, ಮನೋವಾಕ್ ಕಾರ್ಯಗಳಲ್ಲಿ ಶ್ರೀಕೃಷ್ಣ ಪ್ರಜ್ಞಾರಂಗಗಳು ಎಡಬಿಡದೆ ಸುತ್ತುವರಿಯುತ್ತಿರುವುದನ್ನು ಶ್ರೀಹರಿಚರಿತೆ ಅನಾವರಣಗೊಳಿಸುತ್ತದೆ. ಪು.ತಿ.ನ. ಮತ್ತು ಶ್ರೀಹರಿಯ ನಡುವಿನ, ಸಂಬಂಧ, ಸೆಳೆತಗಳ ಆಯಾಮವನ್ನು, ಜೀವ–ದೈವ , ಆತ್ಮ–

ಪರಮಾತ್ಮ, ಕೃಷ್ಣ–ಗೋಪಿಯರ ನಡುವೆ ಅಸ್ತಿತ್ವದಲ್ಲಿರುವ ಲೌಕಿಕ–ಅಲೌಕಿಕ ಛವಿಯ, ಅನಾದಿ–ವರ್ತಮಾನ–ಅನಂತ ಬಾಂಧವ್ಯವನ್ನು, ಸಾಧಕ ಹಾಗೂ ದೈವದ ನಡುವಿನ ಆಧ್ಯಾತ್ಮಿಕ ಸೆಳೆತಗಳನ್ನು ಈ ಸಾಲುಗಳು ಅತ್ಯಂತ ಸರಳವಾಗಿ, ಹೃದಯಂಗಮವಾಗಿ ಅಭಿವ್ಯಕ್ತಿಸುತ್ತವೆ:

**"ಕೃಷ್ಣ ನೀ ಹಳೆಯವನಲ್ಲ, ಇತಿಹಾಸ ಪುರುಷನುಮಲ್ಲ.**
**ನಿನ್ನನೆನ್ನಿಂ ಹಿರಿದು ನೋಡಲು ಬಯಸಿ ಕಂಗೆಡುತಿಹೆನು**
**ಎನ್ನ ನಿನ್ನೊಳು ಕೋದಿರುವ ಸೂತ್ರವರಿಯಲು ಬರುವುದೇ?**
**ಈ ಹಾಸುಹೊಕ್ಕನು ಬಿಡಿಸಿ ಎಳೆ ಎಳೆಗೈಯೆ ಮತಿಗಳವೆ?"**

ಕೃಷ್ಣ ಎಂಬ ಚೇತನ ನವನವೋನ್ಮೇಶಶಾಲಿ ರಸಚೇತನ. ಹಾಗಾಗಿ ಪು.ತಿ.ನ. ಕೃಷ್ಣನನ್ನು ನೀನು ಹಳೆಯವನಲ್ಲ, ಇತಿಹಾಸಪುರುಷನೂ ಅಲ್ಲ ಎಂದು, ಆ ಅನಾದಿ ಸನಾತನ ಪುರುಷನನ್ನು ವರ್ತಮಾನದವನನ್ನಾಗಿಸಿ ಇಂದಿಗೂ ಎಂದಿಗೂ ಪ್ರಸ್ತುತನನ್ನಾಗಿಸುತ್ತಾರೆ. ಅಂತಹ ಸನಾತನ ಹಾಗೂ ನವನವೀನ ರಸಪುರುಷನನ್ನು ಎಂದಿನಿಂದಲೋ ನೋಡಲು ಸಾಕ್ಷಾತ್ಕರಿಸಿಕೊಳ್ಳಲು ಜೀವ ಹಪಹಪಿಸುತ್ತಿರುತ್ತದೆ. ಜೀವ–ದೈವಗಳನ್ನು, ಆತ್ಮ–ಪರಮಾತ್ಮನನ್ನು (ಎನ್ನ–ನಿನ್ನೊಳು) ಪರಸ್ಪರ 'ಕೋದಿರುವ' (ಪೋಣಿಸಿರುವ) ಸೂತ್ರ ಯಾವುದೆಂದು ಅರಿಯಲಾಗಲಿ, ಈ ನೇಯ್ಗೆಯ ಹಾಸುಹೊಕ್ಕನು ಬಿಡಿಸಿ, ಎಳೆಎಳೆಯಾಗಿ ಬೇರೆ ಮಾಡುವುದಾಗಲೀ, ಬುದ್ಧಿಗೆ ಸಾಧ್ಯವೇ ಎಂಬ ಪ್ರಶ್ನೆಯಿಂದ ಅಧ್ಯಾತ್ಮ ಜಿಜ್ಞಾಸೆ ಆರಂಭವಾಗುತ್ತದೆ. ಈ ಜೀವನಿಗೂ ಆ ಪರಮಾತ್ಮನಿಗೂ ಇರುವ ಸಂಬಂಧದ ಸ್ವರೂಪವಾದರೂ ಎಂತಹುದು? ಅದು ಲೋಕದ ಸಂಬಂಧಗಳ ಹೋಲಿಕೆಯಿದ್ದು ಲೌಕಿಕ ಸಂಬಂಧಗಳ ಸ್ತರವನ್ನು ಮೀರಿದುದು ಎಂಬುದನ್ನು ತಮ್ಮ ಮತ್ತು ಶ್ರೀಹರಿಯ ಸಂಬಂಧದ ವಿವರಣೆಯ ಮೂಲಕ ಪು.ತಿ.ನ. ತಿಳಿಸುತ್ತಾರೆ. ಈ ಸಾಲುಗಳಲ್ಲಿ ಮಧುರ ಭಕ್ತಿ, ಅನನ್ಯ ಶರಣಾಗತಿ, ಮಗುವಿನ ಮುಗ್ಧತೆ, ಗಾಢನಂಬಿಕೆ, ಅಹವಾಲು ಪ್ರಶ್ನಿಸುವ ಮನೋಧರ್ಮ ಎಲ್ಲವೂ ಒಟ್ಟುಗೂಡಿ, ಹೃದಯ ಮನಸ್ಸುಗಳನ್ನು ಇವು ತಟ್ಟುತ್ತವೆ.

**"ನಿನ್ನ ನಾ ತಂದೆಯೆನೆ, ಅಕ್ಕರೆ ಬೆರೆತ ಗೌರವ ದೂರ**
**ಎನಗಿಲ್ಲ . ತಾಯೆಂಬನೇ ಕಾಡುತ ಬೇಡಿ ಗೋಳ್ಕರೆದು**
**ಸೇವೆಯಗೊಳ್ವ ಸ್ವಾರ್ಥೈಕ ಸಂಬಂಧವುಂಟೆ ಹರಿ?**
**ಪ್ರಣಯಿನಿ ಎನೆ ನೀನೆನಗೆ ಕೇವಲನೆ? ಸಕಲಾನಂದಕರ**
**ಜಗತ್ಪತಿ! ಸುತನೆನ್ನಲೇ, ನನ್ನ ಋಣ ನಿನಗಿನಿತಿಲ್ಲ.**
**ಕೆಳೆಯನೆನೆ ನಾ ಗೊಲ್ಲನೇ, ಸುದಾಮನೆ, ಧನಂಜಯನೆ?**
**ದೈವಮೆನೆ ಸಲ್ಲದೈ ಮನದೆಟುಕಿನೊಳು ನೀನಿಹ ಕತದಿ**

**ದಾಸನೆನೆ ಸದರದಿ ನಿನ್ನ ನಿರುಕಿಪ ಧಾರ್ಷ್ಟ್ಯವೆನಗುಂಟು**
**ಆಳುತನಕೊಗ್ಗದ ಸಲಿಗೆ. ನಿನ್ನೊಳಗೆ ಸಂಲಗ್ನನಾ**
**ಹಿಂದಾದೆಯಿಂದಿಲ್ಲವೆನೆ ಅಖಂಡಕಾಲಕಪಚಾರ,**
**ಇಂದಿರದ ಹಿಂದೊಂದುಂಟೆ? ಇಂದಿನೊಳೆ ಹುದುಗಿರದಿರದ**
**ಮುಂದೊಂದುಂಟೆ? ಹಿಂದನುಂಟಾಗಿಸುವ ಜೀವಜ್ಯೋತಿ**
**ಇಂದಿನದಲಾ?................................"**

ತಮ್ಮ ಮತ್ತು ಶ್ರೀಹರಿಯ ನಡುವಿನ ಸಂಬಂಧದ ಅಮೂರ್ತತೆಗೆ ಶಾಬ್ದಿಕ ಮೂರ್ತರೂಪ ಕೊಡುತ್ತಾರೆ ಪು.ತಿ.ನ., ಹಾಗೂ ಈ ಜೀವ-ದೇವ, ಆತ್ಮ -ಪರಮಾತ್ಮದ ಅಸ್ತಿತ್ವದ ಅಖಂಡತೆ, ನಿರಂತರತೆಗಳು, ವರ್ತಮಾನ, ಭೂತ, ಭವಿಷ್ಯಗಳು ಒಂದರೊಳಗೊಂದು ಅಂತರ್ಗತವಾಗಿದ್ದುಕೊಂಡು ಉಂಟಾಗುವ ಕಾಲದ ಅಖಂಡತೆ ಮತ್ತು ನಿರಂತರತೆಯಂತೆ ಎನ್ನುತ್ತಾರೆ ಅವರು. 'ಹಿಂದಾದೆಯಿಂದಿಲ್ಲವೆನೆ ಅಖಂಡಕಾಲಕಪಚಾರ'. ಏಕೆಂದರೆ, ಶ್ರೀಹರಿ ಎಂಬುದು ಅಖಂಡವಾಗಿ ನಿರಂತರವಾಗಿ 'ಇರುತ್ತಿರುವಂತಹ' ಸತ್-ಚಿತ್-ಆನಂದ ಸ್ವರೂಪ. ಈ ಸಾಲುಗಳನೋದುವಾಗ "ಹಿಂದಣ ಅನಂತವನ್ನು ಮುಂದಣ ಅನಂತವನ್ನು ಒಂದು ದಿನ ಒಳಗೊಂಡಿತ್ತು ನೋಡಾ" ಎನ್ನುವ ಅಲ್ಲಮನ ಸಾಲುಗಳು ನೆನಪಾಗುತ್ತವೆ. "ಹಿಂದನುಂಟಾಗಿಸುವ ಜೀವಜ್ಯೋತಿ ಇಂದಿನದಲಾ?" ಎನ್ನುವಾಗ, ವರ್ತಮಾನದ ಇರವಿಗೆ ವರ್ತಮಾನದಲ್ಲಿನ ಅಸ್ತಿತ್ವಕ್ಕಿರುವ ಮಹತ್ವದ ಅರಿವಾಗುತ್ತದೆ. ಇಂದಿನ ಅಸ್ತಿತ್ವ 'ಜೀವಜ್ಯೋತಿ'ಯಾಗಿದ್ದು, ಹಿಂದಿನ ಅರಿವಿಗೆ ಮತ್ತು ಮುಂದಣ ಮಾರ್ಗಕ್ಕೆ ದಾರಿ ತೋರುತ್ತದೆ. ಹೀಗೆ 'ಅರಿಕೆ'ಯಲ್ಲಿ ಪ್ರತಿಪಾದಿತಗೊಂಡಿರುವ ವಿಚಾರ, ಸಿದ್ಧಾಂತಗಳ ವಿಸ್ತೃತ ಕಾವ್ಯಮಯ ಕಥನವೇ 'ಶ್ರೀಹರಿಚರಿತೆ'. ಭೃಂಗಿನಡೆಯ ಭಾಮಿನಿ ವಾರ್ಧಕವೆಂದು ಕರೆಯಬಹುದಾದ ಛಂದಸ್ಸು ಈ ಮಹಾಕಾವ್ಯದ್ದು ಎಂದಿದ್ದಾರೆ ಪು.ತಿ.ನ.

# ‘ಶ್ರೀಹರಿಚರಿತೆ’ ಮತ್ತು
# ಪು.ತಿ.ನ. ಅವರ ಜೀವನದರ್ಶನ

‘ಶ್ರೀಹರಿಚರಿತೆ’ಯನ್ನು ಅಧ್ಯಯನ ಹಾಗೂ ಅರ್ಥಮಾಡಿಕೊಳ್ಳುವ ಮುನ್ನ ಪು.ತಿ.ನ. ಅವರ ಜೀವನದರ್ಶನ, ತಾತ್ವಿಕ ನೆಲೆಯನ್ನು ಅರಿಯುವುದು ಅವಶ್ಯವೆನಿಸುತ್ತದೆ. ‘ಋತ–ಸತ್ಯ–ರಸ’ ಎಂಬ ಲೇಖನದಲ್ಲಿ ಪು.ತಿ.ನ. ತಮ್ಮ ಜೀವನ ತತ್ವಮಿಮಾಂಸೆಯನ್ನು ವಿಸ್ತಾರವಾಗಿ ವಿವರಿಸಿ ಒಳಿತು ಕೆಡುಕಿನ ಬಗೆಗೆ ತಮ್ಮ ಅಭಿಪ್ರಾಯವನ್ನು ಈ ರೀತಿ ತಿಳಿಸುತ್ತಾರೆ: “...ಈ ಕತ್ತಲೂ ಈ ಬೆಳಕಿನ ಮಿರುಗೂ, ಆಯಾ ತೆರೆಗಳಿಗೆ ಪ್ರಾಪ್ತವಾಗುವುದು ತೆರೆಗಳ ಒತ್ತಡದಿಂದ, ಕತ್ತಲು ಬೆಳಕೆಂಬ ಬೆಲೆ ಯಾವ ಅಲೆಗೂ ಸ್ಥಿರವಾಗಿ ತಗಲಿಕೊಳ್ಳುವುದಿಲ್ಲ. ಹಾಗೆಯೇ, ಭವ ಪ್ರವಾಹದ ವಿಷಯದಲ್ಲಿಯೂ ಕೂಡಾ. ಇದೊಂದು ದಿವ್ಯ ಚೈತ್ಯನ್ಯ ಲೀಲೆ ಎಂದ ಮೇಲೆ ಈ ಲೀಲೆಯಲ್ಲಿ ಲೇಸಾವುದು ಕೇಡಾವುದು?” ಒಳಿತು ಕೆಡುಕಿನ ಬಿಡಿಸಲಾಗದ ದ್ವಂದ್ವ ಈ ಜಗತ್ತಿನಲ್ಲಿ ಹಾಸುಹೊಕ್ಕಾಗಿರುವುದನ್ನು ಪು.ತಿ.ನ. ತಮ್ಮ ಕವನ ಒಂದರಲ್ಲಿ ಸ್ಪಷ್ಟವಾಗಿ ವಿವರಿಸಿದ್ದು, ಆ ಕವನದ ಕಡೆಯ ಪದ್ಯ ಹೀಗಿದೆ.

**“ಮೇಧ್ಯಾಮೇಧ್ಯದ ನಡುಗಡೆ ನಡೆಯುತ್ತಿದೆ ಪ್ರಾಣ**
**ಚಿಂತ್ಯಾಚಿಂತ್ಯದ ಮಧ್ಯದೊಳಾಡುತ್ತಿದೆ ಜ್ಞಾನ**
**ಸಹ್ಯಾಸಹ್ಯಗಳೊಳಗೆಯೆ ರಸದುಗಮಸ್ಥಾನ**
**ಧರ್ಮಾಧರ್ಮಗಳಂತರದೊಳೆ ಕ್ಷೇಮೋತ್ಥಾನ.”**

(‘ಋತ–ಸತ್ಯ–ರಸ’ ಪು.ತಿ.ನ. ಸಮಗ್ರ ಗದ್ಯ. ಸಂಪುಟ, ಪುಟ–೪೮೩)

ಒಳಿತು ಕೆಡಕುಗಳ ನಡುವೆಯೇ ಪ್ರಾಣ, ಸಹ್ಯಾಸಹ್ಯಗಳೊಳಗೆಯೆ ರಸದುಗಮ ಸ್ಥಾನ ಎಂದು ಹೇಳುವುದರ ಮೂಲಕ ರಸದ ನೆಲೆ ಯಾವುದೆಂಬುದನ್ನು ಪು.ತಿ.ನ. ಸ್ಪಷ್ಟಪಡಿಸುತ್ತಾರೆ. ಪ್ರಾಣಿಗಳಲ್ಲಿ ಎರಡು ಹಂತ ಮುಟ್ಟುತ್ತದೆ ಪ್ರಾಣ; ನಿದ್ರೆ ಮತ್ತು ಜಾಗರ. ಮನುಷ್ಯರಲ್ಲಿ ಅದು ಐದು ನೆಲೆಗಳಿಗೇರಬಲ್ಲದು. ನಿದ್ರೆ, ಸ್ವಪ್ನ, ಜಾಗೃತಿ, ಕಲೆ

ಮತ್ತು ರಸ ಇವು ಆ ನೆಲೆಗಳು. ನಿದ್ರೆಯಲ್ಲಿ ಅದು ಜಡ. ಸ್ವಪ್ನದಲ್ಲಿ ಋತ ಶೂನ್ಯ ಲೋಕವಿಹಾರ ಅದಕ್ಕೆ. ಜಾಗ್ರದವಸ್ಥೆಯಲ್ಲಿ ಋತಬದ್ಧವಾದ ಜಗತ್ತಿನಲ್ಲಿ ಅದು ವ್ಯವಹರಿಸುತ್ತದೆ. ಕಲೆಯ ಪ್ರಪಂಚದಲ್ಲಿ ಈ ಋತದ ಜಗತ್ತು ಮಂದವಾಗಿ ಭಾವ ಪ್ರಚುರವಾದ ಲೋಕದಲ್ಲಿ ಸತ್ಯವೆಂಬ ಹೊಸ ಸೂತ್ರವೊಂದಕ್ಕೆ ಆ ಚೇತನ ಅಳವಟ್ಟು ತನ್ನ ಇರುವಿಕೆಯನ್ನು ನಡೆಗೊಳಿಸುತ್ತದೆ. ಸ್ವರ್ಗಾದಿ ಲೋಕಗಳು, ಇಂದ್ರಾಗ್ನಿ ವರುಣಾದಿ ದೇವತೆಗಳು ಮೊದಲಾದ ಭಾವಸತ್ಯಗಳಿಗೆ ಈ ಅವಸ್ಥಾ ವಿಶೇಷ ಆಕರವಾಗುತ್ತದೆ. ಇದನ್ನು ಉಪಾಸನಾದಿ ಸಾಧನಗಳು ತಲುಪುವ ನೆಲೆ, ರಸದೆನೆಲೆ...." (ಅದೇ ಲೇಖನ ಪುಟ–೪೯೧).

ಹೀಗೆ ಸಮರ್ಪಕ ಸಾಧನೆಯಿಂದ ರಸದ ನೆಲೆಯನ್ನು ತಲುಪಿದ "ಸಮರ್ಥರಾದ ಸಂತರಿಂದಲೂ, ಅಷ್ಟು ಸಮರ್ಥರಲ್ಲದ ಸಂತರಿಂದಲೂ, ಅಷ್ಟು ಸಮರ್ಥರಲ್ಲದ ಧರ್ಮಿಷ್ಠರಿಂದಲೂ ರಸಾಸ್ತಿಕ್ಯ ಒಂದು ಜನಪದ ಸಂಪ್ರಜ್ಞೆಯಲ್ಲಿ ಜಾಗೃತವಾಗಿರುತ್ತದೆ" ಎನ್ನುತ್ತಾರೆ ಪು.ತಿ.ನ. ಅಂದರೆ ರಸಾಸ್ತಿಕ್ಯ ಜನಪದ ಸಂಪ್ರಜ್ಞೆಯಲ್ಲಿ (ಸಮೂಹ ಪ್ರಜ್ಞೆ?) ಜಾಗೃತವಾಗಿರಲು ಎಲ್ಲ ವರ್ಗದ ಎಲ್ಲ ವಿಧದ ವ್ಯಕ್ತಿಗಳಲ್ಲಿಯೂ ರಸದನೆಲೆ ವಿವಿಧಸ್ತರಗಳಲ್ಲಿ, ಸ್ವಲ್ಪಮಟ್ಟಿಗಾದರೂ ಜಾಗೃತವಾಗಿದ್ದು, ಎಲ್ಲರ ಕೊಡುಗೆಯ ಸಮಷ್ಟಿಯ ಕೊಡುಗೆಯ ಅವಶ್ಯಕತೆಯಿದೆ ಎನ್ನುವ ಅಭಿಪ್ರಾಯ ಮೂಡುತ್ತದೆ. ಮುಂದುವರೆದು ಪು.ತಿ.ನ. ಹೇಳುತ್ತಾರೆ. ಈ ರಸಾಸ್ತಿಕ್ಯಕ್ಕೆ ಧಕ್ಕೆ ಬಂದಾಗ ಮನುಷ್ಯ ನರಳುತ್ತಾನೆ, ಕೆರಳುತ್ತಾನೆ. ಇದು ತೀರಾ ಮಸುಳಿಸಿದಾಗ ಧರ್ಮಗ್ಲಾನಿಯುಂಟಾಗಿ ಭಗವದವತಾರಕ್ಕೆ ತಿರೆ ಮೊರೆಯಿಡುತ್ತದೆ. ಅಂಥ ಅವತಾರದಲ್ಲಿ ಜಡಜಾಗೃತಾವಸ್ಥೆಗಳನ್ನು ಸಮಗ್ರವಾಗಿ ಆಕ್ರಮಿಸಿ ನಿಂತಿರುವ ಪುರುಷೋತ್ತಮನ ದರ್ಶನ ಜಗಕ್ಕೆ ದೊರೆಯುತ್ತದೆ. ಆತ ಈ ಜಡಾವಸ್ಥೆಯಿಂದ ಋತಕ್ಕೆ, ಋತದಿಂದ ಸತ್ಯಕ್ಕೆ, ಸತ್ಯದಿಂದ ರಸಕ್ಕೆ ಎಲ್ಲ ಚೈತ್ಯನ್ಯವನ್ನೂ ಕೊಂಡೊಯ್ಯಲು ಸಮರ್ಥನಾಗಿ ಸರ್ವಪ್ರಿಯನಾಗುತ್ತಾನೆ....." (ಅದೇ ಲೇಖನ ಪುಟ–೪೯೧) ಪು.ತಿ.ನ. ಅವರ ಪರಿಕಲ್ಪನೆಯಲ್ಲಿ ಕೃಷ್ಣ ಅಂತಹ ಪುರುಷೋತ್ತಮನ ಅವತಾರವಾಗಿದ್ದು, ಎಲ್ಲವನ್ನು ಎಲ್ಲರನ್ನೂ ಋತ–ಸತ್ಯಗಳಿಂದ ರಸದೆಡೆಗೆ ಕೊಂಡೊಯ್ಯುವ, ಸಮರಸದಿಂದ ಬಂಧಿಸುವ ರಸಚೇತನ. ಔದ್ಯೋಗಿಕ ಯಂತ್ರಾರಣ್ಯದಲ್ಲಿ ಬದುಕುತ್ತಿರುವ ಇಂದಿನ ಮಾನವ ಹಿಂದಿನ ಗುಹಾವಾಸಿ ವಿಪಿನವಾಸಿಗಳಿಗಿಂತ ಅಭದ್ರ ಸ್ಥಿತಿಯಲ್ಲಿದ್ದಾನೆ. ಪರಧರ್ಮಗಳ ವಿಷಯದಲ್ಲಿ ನಾವು ತುಂಬ ಎಚ್ಚರಿಕೆಯಿಂದ ಇರುವುದು ಅಗತ್ಯ. ಭಾರತದ ಅಗಾಧವಾದ ಜನಸ್ತೋಮ ಕಾರ್ಯಶೀಲವಾಗುವಂತೆ ಮಾಡಿದರೆ ಮಾತ್ರ ನಾಡು ಶ್ರೀಮಂತವಾಗುವುದು ಸಾಧ್ಯ ಎನ್ನುವ ಪು.ತಿ.ನ. ಅವರ ನುಡಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಅರಿತು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾಗಿದೆ.

❍

# ಶ್ರೀಹರಿಚರಿತೆ

'ಶ್ರೀಹರಿಚರಿತೆ' ಮೂವತ್ತುಮೂರು ಉಲ್ಲಾಸಗಳಲ್ಲಿ ವಿಭಜಿತಗೊಂಡಿದ್ದು, 'ಪ್ರಣಾಮಂ' ಎಂಬ ಉಲ್ಲಾಸದಿಂದ ಆರಂಭಗೊಂಡು 'ನಿವೇದನಂ'ನಲ್ಲಿ ಮುಕ್ತಾಯಗೊಳ್ಳುತ್ತದೆ. ತಮ್ಮ ಮಹಾಕಾವ್ಯವನ್ನು ಪು.ತಿ.ನ. ಪರ್ವ, ಸರ್ಗ, ಅಧ್ಯಾಯ ಮುಂತಾಗಿ ವಿಭಜಿಸದೆ 'ಉಲ್ಲಾಸಂ' ಎಂಬ ಹೆಸರಿನಲ್ಲಿ ವಿಭಜಿಸಿರುವುದು ಅರ್ಥಪೂರ್ಣವಾಗಿದ್ದು ಶ್ರೀಹರಿಚರಿತೆಯಲ್ಲಿ ಓತಪ್ರೋತವಾಗಿ ಪ್ರವಹಿಸುತ್ತಿರುವ ರಸೋಲ್ಲಾಸವನ್ನು ಸಂಕೇತಿಸುತ್ತದೆ. ಹಲವು ಪುರಾಣಗಳಲ್ಲಿರುವಂತೆ, ಭೂದೇವಿ, ಭೂಭಾರವನ್ನು ತಡೆಯಲಾರದೆ ಬ್ರಹ್ಮಾದಿದೇವತೆಗಳ ಬಳಿ ಹೋಗಿ, ಕಡೆಗೆ ಶ್ರೀ ಮಹಾವಿಷ್ಣುವನ್ನು ಪ್ರಾರ್ಥಿಸಿ, ಅವನಿಂದ ಅಭಯ ಪಡೆಯುವ ಘಟನೆಯಿಂದಾರಂಭಿಸಿ ಕೃಷ್ಣಾವತಾರ ಹಾಗೂ ಗೋಕುಲದಲ್ಲಿನ ಅವನ ಬಾಲ್ಯ ಮತ್ತು ಅಕ್ರೂರನ ಜೊತೆಯಲ್ಲಿ ಕೃಷ್ಣಬಲರಾಮರು ಮಥುರೆಗೆ ಹೊರಡುವ ತನಕದ ಕಥಾ ಭಾಗವನ್ನು 'ಶ್ರೀಹರಿಚರಿತೆ' ಚಿತ್ರಿಸುತ್ತದೆಯಾದರೂ ಶ್ರೀಕೃಷ್ಣನ ಪರಿಪೂರ್ಣ ವ್ಯಕ್ತಿತ್ವ ಅವನ ಗೀತೋಪದೇಶದ ಸಾರಸರ್ವಸ್ವವನ್ನೂ ಒಳಗೊಂಡಿದೆ. ಪು.ತಿ.ನ. ಅವರಲ್ಲಿ ಪ್ರಧಾನವಾಗಿ ಕಂಡುಬರುವ ಮಧುರ ಭಕ್ತಿಭಾವ, ಪ್ರಗಾಢ ಆಧ್ಯಾತ್ಮಿಕ ಚಿಂತನ, ಹಳತನ್ನು ಹೊಸ ದೃಷ್ಟಿಕೋನದಿಂದ ವಿಶ್ಲೇಷಣೆ, ಅದರ ಪ್ರಸ್ತುತತೆಯನ್ನು ಪ್ರತಿಪಾದಿಸುವ ವೈಚಾರಿಕತೆಗಳು ಮುಪ್ಪುರಿಗೊಂಡು ರಸಜಾಗರಗೊಂಡ ಪು.ತಿ.ನ. ಅವರ ಪ್ರತಿಭೆಯಿಂದ ಕೃಷ್ಣಚರಿತೆ ಸುಂದರ ಶಿಲ್ಪವಾಗಿ ಮೂಡಿಬಂದಿದೆ.

ಶ್ರೀಹರಿಚರಿತೆಯ ಮೊದಲ ಉಲ್ಲಾಸ 'ಪ್ರಣಾಮಂ'ನಲ್ಲಿ ಕೃಷ್ಣನ ಲೋಕೋತ್ತರ ವ್ಯಕ್ತಿತ್ವವನ್ನು ಚಿತ್ರಿಸಿ, ಎರಡನೆಯ ಉಲ್ಲಾಸ 'ಅಭಯ ಪ್ರದಾನಂ'ನಲ್ಲಿ ಭೂಭಾರದಿಂದ ಬಸವಳಿದ ತಿರೆಯ ಹೊರೆಯನ್ನು, ವೈಕುಂಠಪತಿಯು ಆಲಿಸಿ, ಅವಳ ಹೊರೆಯನ್ನು ಕಳೆವ ಭರವಸೆ ನೀಡುವುದನ್ನು ಪು.ತಿ.ನ. ಕಥಿಸುತ್ತಾರೆ. ಪ್ರಣಾಮದಲ್ಲಿನ ಕೃಷ್ಣ "ಶ್ರೀ ಪುರುಷನನುಪಮನುದಾರನಖಿಲಾರ್ತಿ ಪ್ರಶಮನಂ । ರಸಮೂರ್ಜಸ್ವಿ ತೇಜೋಮಯಂ

ಓಂ ತತ್ ಸತ್ ವಾಚ್ಯಂ । ಪ್ರಾಚ್ಯಂ ಸೃಷ್ಟ್ಯಾದಿ ಮೂಲಂ ಸ್ಥಿತಿಭರಣಾದಿಲೀಲಂ।ಸ್ವಸ್ಥಂ ಶಿವಂ ಸುಂದರಂ ಸರ್ವಾಂತರ ಬಹಿಶ್ಚರಂ।" ಮುಂತಾಗಿ ಅತ್ಯಂತ ಉನ್ನತಗುಣಗಳಿಗೆ ಪಾತ್ರನಾದವನಾಗಿ ಸ್ತುತಿಸಲ್ಪಟ್ಟಿದ್ದಾನೆ. ಆ ದೇವದೇವನ ಇರವನ್ನು ಪು.ತಿ.ನ. ಹಲವಾರು ಸುಂದರ ಉಪಮೆಗಳಿಂದ ವರ್ಣಿಸುತ್ತಾರೆ: "...ದೂರನಿವ ದೂರಾದ್ದೂರ.... ಆದೊಡಿವ ಸನಿಯದವ ಮಲೆಯನು ಕವಿದ ಬಾನಂತೆ, ಹೆಮ್ಮರದ ಜಟೆಯೊಳಗೆಸೆಯುವ ಶಶಿಕಲೆಯಂತೆ, ಮೋಡದೊಳಗಾಡುತಿಹ ಭಾಸ್ಕರನಂತೆ, ಗುಡಿಗೋಪುರದ ತುದಿಯ ನಕ್ಷತ್ರದಂತೆ..." ಈ ಎಲ್ಲ ಉಪಮೆಗಳೂ ಔನ್ನತ್ಯ, ಶ್ರೇಷ್ಠತೆ, ಕಪ್ಪು ಬೆಳಕಿನ, ನೆಳಲು ಬೆಳಕಿನ ಸಂಗಮವಾಗಿ ದ್ವಂದ್ವ ಸೂಚಕವಾಗಿದ್ದು, ಮೂಲಚೈತನ್ಯದ ಸ್ವರೂಪಕ್ಕೆ ಕನ್ನಡಿ ಹಿಡಿಯುತ್ತದೆ. ಆ ಮಹತ್ ಚೇತನವಾದ ಗೋಪಾಲನ ಪದವಿಡಿದು; ಆ ಚೇತನಕ್ಕೆ ತಮ್ಮನ್ನು ಒಪ್ಪಿಸಿಕೊಂಡು, ತಮ್ಮ ಕಾವ್ಯದಲ್ಲಿ ಮಥುರೆಯ ಸೆರೆಮನೆ, ಯಮುನಾ ನದಿಯ ಪಕ್ಕದ ಗೊಲ್ಲವಾಡಿಯ ಬನ, ಕಡಲು, ದ್ವಾರಕೆ ಕೋಲಾಹಲದ ಭಾರತದ ಹಳವು, ಹಳವುಗಳಲ್ಲಿ 'ಭಕ್ತಿರರ್ತಿಯ ಸರಸಸೂಕ್ತಿಯ ಬೆಂಬಲದಿಂದ' ತಾವು ಸಂಚರಿಸುವುದಾಗಿ ಪು.ತಿ.ನ. ಹೇಳುತ್ತಾರೆ. ನಾರಣಪ್ಪನ ಕವಿಚೇತನದಂತೆಯೇ, ಪರಮಪುರುಷ ಶ್ರೀಕೃಷ್ಣನನ್ನು ಹಾಡಿಹೊಗಳಿದಷ್ಟೂ ತಣಿಯದು ಪು.ತಿ.ನ. ಅವರ ರಸಚೇತನ. ಆ ದಿವ್ಯ ಘನನನ್ನು ಹೇಗೆ ಭಾವಿಸಬೇಕೆಂಬುದೇ ಅರಿಯದೆನ್ನುತ್ತಾರೆ: '...ಮನುಜನೆನೆ ಮನವೊಲ್ಲದೈ। ಆ ಮಿತಿಗೆ ಈತನನಳವಡಿಸಿಭಾವಿಸಲು. ದೇವನೆ । ಆಧುನಿಕ ಬುದ್ಧಿಪ್ರಚುರನೇಮಾದೀ ಯುಗದಿ ನಡೆಯಂ ಕೆಡವು । ದದ್ಭುತ ಚರಿತ ಕಥನಂ, ಕಾರ್ಯಂ, ಕಾರಣಂ, ಕಾತರಂ । ತತ್ತ್ವಂ ತರ್ಕ ನಿಷ್ಪೇಷ್ಟಿತಂ: ಮಿಕ್ಕೆಲ್ಲವಜ್ಜಿಕತೆ। ಲೇಸಾವುದಿದರಿಂದೆಂಬರನುಮಿತಿ ಪರಾಯಣರ್ । ಆದ್ಯಕನಚಿತ್ತವಾತಾವರಣದೊಳು ರಸಕಲ್ಪತರು । ವಿಜ್ಞಾನ ದೋಹಳವ ಬಯಪುದು. ಕರಣ ವಾಮನನಲ್ಲ। ಈತ್ರಿವಿಕ್ರಮಗಮೇಯಂ ದುರ್ಲಭಂ. ಹೆಜ್ಜೆಗೆ ವಸ್ತು । ಹೆಜ್ಜೆಗೆ ಮನಂ ಮತ್ತೊಂದು ಹೆಜ್ಜೆಗದೆ ಎಂಬೀ ಪರಿಗೆ । ಸರ್ವಾಕ್ರಮಣ ಸಂತೃಷ್ಣಮೀ ಮನುಜನೆಚ್ಚರದರಿವು....।" ಪು.ತಿ.ನ ರಂತಹ ಭಕ್ತ ಚೇತನಕ್ಕೆ ಪರಮಚೈತನ್ಯನಾದ ಶ್ರೀ ಕೃಷ್ಣನನ್ನು ಕೇವಲ ಪುರುಷರೂಪಿ ಮಾನವನೆಂದು ಒಪ್ಪಲು ಅಸಾಧ್ಯವಾಗಬಹುದು. ಆದರೆ ಕಾರ್ಯ, ಕಾರಣ ತರ್ಕ ನಿಬದ್ಧ ಆಧುನಿಕ ಬುದ್ಧಿ ಪ್ರಚುರಮಾದೀ ಯುಗಕ್ಕೆ, ಆಧುನಿಕ ಅನುಮತಿ ಪಾರಾಯಣರಿಗೆ, ಕಾರ್ಯ, ಕಾರಣ, ತರ್ಕಕ್ಕೆ ಸಿಗದುದೆಲ್ಲವು 'ಅಜ್ಜಿಕತೆ' ಎನಿಸುತ್ತದೆ. ಹಾಗಾಗಿ 'ಆದ್ಯತನಚಿತ್ತ', ಪುರಾತನ ಮನೋಧರ್ಮವೆನಿಸುವ ವಾತಾವರಣದಲ್ಲಿ 'ರಸಕಲ್ಪತರುವಿಗೆ ವಿಜ್ಞಾನದ 'ದೋಹದ'ವಾದಾಗ ಆ ಕಲ್ಪತರುವಿನಲ್ಲಿ ರಸಪುಷ್ಪಗಳು ಅರಳುವುವು ಎಂದು ಪು.ತಿ.ನ. ಭಾವಿಸುತ್ತಾರೆ. ಪುರಾತನವಾದುದನ್ನು ಆಧುನಿಕ ಕಣ್ಣುಗಳಿಂದ ಆಧುನಿಕ ಎಂಬುದನ್ನು ಪುರಾತನ ನೆಲೆಗಟ್ಟಿನಿಂದ ಪರಿಶೀಲಿಸಿ, ವಿಶ್ಲೇಷಿಸಿದಾಗ, ಸಾಮರಸ್ಯ ಸಿದ್ಧಿಸುತ್ತದೆಂದು ಅವರು ಹೇಳುತ್ತಾರೆ. ಪ್ರಾಕೃತಿಕ ಸ್ತರದಲ್ಲಿ, ಸಸ್ಯಪ್ರಪಂಚದಲ್ಲಿ ನಡೆಯುವುದೆಂದು

ಪ್ರತೀಕವಾಗಿರುವ ದೋಹದ ಕ್ರಿಯೆಯ ಉಪಮೆಯಿಂದಾಗಿ, ಮಾನವನಿಗೂ ಪ್ರಕೃತಿಗೂ ಇರುವ ಪರಸ್ಪರ ಬಾಂಧವ್ಯದಂತೆ, ಹಳತಿಗೂ ಹೊಸತಿಗೂ ನಡುವೆ ಈ ರಸಬಂಧವಾಗಬೇಕಾಗಿದೆಯೆನ್ನುತ್ತಾರೆ. ವಾಮನ–ಬಲಿಯ ಪೌರಾಣಿಕ ಮಿಥಕವನ್ನು ಆಧುನಿಕ ಮಾನವನ ಎಚ್ಚರದರಿವಿನ ನೆಲೆಯಿಂದ ವಿಶ್ಲೇಷಿಸುತ್ತಾರೆ. ಮೂಲಕಾರಣನೆನಿಸಿದ ಆ ಅವತಾರಿ ವಾಮನನು ಈ ತ್ರಿವಿಕ್ರಮನಿಗೆ ಅಮೇಯ ದುರ್ಲಭವೆನಿಸುವುದಿಲ್ಲ. ಈ 'ಮನುಜನೆಚ್ಚರದರಿವು', ಆ ತ್ರಿವಿಕ್ರಮನಂತೆ 'ಹೆಜ್ಜೆಗೆ ವಸ್ತು', 'ಹೆಜ್ಜೆಗೆಮನಂ', ಮತ್ತೊಂದು ಹೆಜ್ಜೆಗೆದೆ ಎಂಬಂತೆ "ಸರ್ವಾಕ್ರಮಣ ಸಂತೃಪ್ತ"ವಾದುದು. ಪುರಾತನ ತ್ರಿವಿಕ್ರಮ ಭೂಮಿಯ ಮೇಲೊಂದಡಿ, ಆಕಾಶದಲ್ಲೊಂದಡಿ, ಬಲಿಯು ತಲೆಯಮೇಲೆ ಮತ್ತೊಂದಡಿ ಇಟ್ಟಂತೆಯೇ, ಮನುಜ ನೆಚ್ಚರದರಿವು ವಸ್ತು ಮನಂ ಮತ್ತು ಎದೆ (ಭಾವರಸ) ಗಳನ್ನು ಒಟ್ಟಿಗೇ ಆಕ್ರಮಿಸಿ, ವಶಪಡಿಸಿಕೊಳ್ಳುವ ಸಾಮರ್ಥ್ಯವಿರುವಂತಹುದು. ಆದರೆ ಅದು ಎಚ್ಚರದರಿವಾಗಬೇಕು ಮಾತ್ರ. ಅಂತಹ ಎಚ್ಚರದರಿವಿಗೆ ಶರಣೆಂದು, ಅದನ್ನೇ ಕಾಪಿರಿಸಿ, ಕ್ಷೇಮದಿಂದ 'ನಡೆಗೊಳುವ ಭಕ್ತ ಬಲಿ ಭಾಗವತ ಮಾರ್ಗವೆ' ಆಧುನಿಕ ಭಾಗವತ ಮಾರ್ಗವೆನ್ನುತ್ತಾರೆ ಪು.ತಿ.ನ. ಖಂಡದೃಷ್ಟಿಯಿಂದ ಪರಿವೀಕ್ಷಿಸಿದಾಗ ಈ ಪುರುಷೋತ್ತಮ ಕೃಷ್ಣ 'ಮನುಜೋತ್ತಂಸ' ನೆನಿಸಿದರೆ, 'ಹೃದಯ ರಸನಿವಿಷ್ಟಾಖಂಡ ದೃಷ್ಟಿ'ಗೆ ಚರಾಚರದಲ್ಲಿ, ವ್ಯಕ್ತಾವ್ಯಕ್ತವಾಗಿ, ಸೃಷ್ಟಿಯನು ಧರಿಸಿ, ಪೊರೆಯುತಿಹ ಮಹಾಚೈತನ್ಯ ಶಿವಸತ್ತ್ವವೇ ಅವನೆಂಬ ಅರಿವಾಗೆ, ಆ ಅರಿವು ಮಾನವ ಚೇತನವನ್ನು ತುರೀಯಾವಸ್ಥೆಗೇರಿಸುತ್ತದೆ. ಇಂತಹದೊಂದು ರಸಜಾಗರದ ಸ್ಥಿತಿಯಲ್ಲಿ 'ಶ್ರೀಹರಿಚರಿತೆ'ಯ 'ಕಥಾ ಪ್ರವಹಣ'ಕ್ಕೆ ಕವಿ ತಮ್ಮನ್ನು ತಾವು ಒಡ್ಡಿಕೊಳ್ಳುತ್ತಾರೆ. ಶ್ರೀಹರಿಕಥಾ ರಸದಂಬುವೇಗ ಸ್ಫುರಣಕನುವಾಗಿ ವ್ಯಾಖ್ಯಾನಕೌತುಕದಿ ಸಂಭ್ರಮಿಸುತ್ತದೆ ಅವರ ಮನ. 'ವೀರನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ'ನೆಂಬ ನಾರಣಪ್ಪ ಕವಿಯ ನುಡಿಗಳು ಮತ್ತೆ ಮತ್ತೆ ನೆನಪಾಗುತ್ತವೆ. 'ಪ್ರಣಾಮಂ'ನ ಪ್ರತಿಸಾಲಿನಲ್ಲಿಯೂ ಶ್ರೀಕೃಷ್ಣನಂತಹ 'ಗುಣಗಣ ಸಮನ್ವಯ ಈ ನೆಲದೊಳಿನ್ನೊಬ್ಬನಿಲ್ಲ' ಎಂಬ ಪು.ತಿ.ನ. ಅವರ ದೃಢಭಕ್ತಿ, ನಂಬಿಕೆಗಳು ಪ್ರವಹಿಸುತ್ತವೆ.

❍

# ಭೂದೇವಿಗೆ ಅಭಯ ಪ್ರದಾನ

'ಅಭಯ ಪ್ರದಾನಂ' ಎಂಬ ಎರಡನೆಯ 'ಉಲ್ಲಾಸ', ಭೂದೇವಿಯು ತನ್ನ ಮೇಲಿರುವ ದುಷ್ಟರ ಭಾರವನ್ನು ತಾಳಲಾರದೇ ಗೋಳಿಡುತ್ತಾ ಬ್ರಹ್ಮದೇವನ ಬಳಿಗೆ ಬಂದು, ನಂತರ ಶೇಷಶಾಯಿ ಮಹಾವಿಷ್ಣುವಿನ ಪಾದಸ್ಪರ್ಶ ಮಾಡಿ, ಅವನಿಂದ ಅಭಯ ಪಡೆಯುವ ಪ್ರಸಂಗವನ್ನೊಳಗೊಂಡಿದೆ. ಹಲವು 'ಉಲ್ಲಾಸ'ಗಳ ಆರಂಭದಲ್ಲಿ ತಾತ್ವಿಕ ಜಿಜ್ಞಾಸೆಯ ನಂತರ ಕಥಾ ಪ್ರಸಂಗವನ್ನು ಆರಂಭಿಸುವ ವಿನ್ಯಾಸವನ್ನು ಪು.ತಿ.ನ. ಅಳವಡಿಸಿಕೊಂಡಿದ್ದಾರೆ. ಮಾನವನಲ್ಲಿ 'ಅರಿವು' ಅಥವಾ 'ಪ್ರಜ್ಞೆ' ಮೂಡುವ ಮುನ್ನ ಇಹಪರಗಳು ಹೇಗಿದ್ದಿರಬಹುದು ಎಂಬ ಚಿಂತನೆಯಿಂದ 'ಅಭಯಪ್ರದಾನಂ' ಸೃಷ್ಟಿ ತತ್ವದ ಜಿಜ್ಞಾಸೆಯಲ್ಲಿ ತೊಡಗುತ್ತದೆ. "ಪ್ರಕೃತಿಯೆನೆ, ಪುರುಷನೆನೆ, ಜಡವೆನೆ, ಜಗತ್ತೆನೆ। ಸ್ಪಂದಿಸುವುದೇಕಸೂತ್ರಂ ಇದರೀ ತೆರವ ಬಲ್ಲವರಾರ್ರ್ಯೆ?" ಎಂದು ಚಿಂತಿಸುತ್ತಾ ಕವಿಯ ಮನಸ್ಸಿನಲ್ಲಿ, ಇಡಿಯ ವಿಶ್ವವೇ ಜಡದಿಂದ ಋತಕ್ಕೆ, ಋತದಿಂದ ಸತ್ಯಕ್ಕೆ, ಸತ್ಯದಿಂದ ಸಾಮರಸ್ಯದ ರಸಸ್ಥಿತಿಯ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಿರುವ ಬೃಹತ್ ಕಲ್ಪನೆಯೊಂದು ಮೈದಾಳುತ್ತದೆ; " ಆವುದು ವೇದ್ಯ। ಈ ಬ್ರಹ್ಮಾಂಡದೊಳು? ಇಲ್ಲಿ ಮೊದಲದಾವುದಾವುದು ಕೊನೆ? । ಬೇರಿನೊಳು ಬಯಲಪ್ಪ ಬೀಜಂ ಹೆಮ್ಮರದ ಶಾಖೋಪ। ಶಾಖೆಯೊಳು ನೂರ್ಮಡಿಸಿ ಕಾಂಬಕ್ಕಜಮಿದೇಂ ವೇದ್ಯಮೇ?.... ಅಳಿವ ಬೀಜಂ ಮರಳಿಯುಳಿಯಲು ದೇಶವಂ ಕಾಲವಂ। ತಚ್ಚಲಿತ ವಿಕೃತಿಯಂ ಮರದನೆವದೊಳು ಕಲ್ಪಿಪುದೇನು?। ಇಂತೆಯೆ ಜಗಂ ಪರಮಾತ್ಮನಿಗೆ? ಈ ವಿಶ್ವದೊಡಗೂಡಿ। ನೀನುಂ ನಾನುಮವನಾತ್ಮ ಸಾಕ್ಷಾತ್ಕರಣ ಸಾಧನವೆ?" ಎಂದು ಬೀಜ ಲಯವಾಗಿ ಹೆಮ್ಮರನಾಗುವ, ಮತ್ತೆ ಬೀಜವಾಗಿ ಮತ್ತೆ ಅಳಿಯುವ ಪ್ರಕ್ರಿಯೆಯಿಂದ ವೃಕ್ಷ ಸಾತತ್ಯ ಸಾಧನೆಯಾಗುವಂತೆ, ಮನುಜ ಜನಿಸಿ, ಅಳಿದು, ಜನಿಸಿ ಅಳಿದು, ಮಾನವತೆಯ ಸಾತತ್ಯ ಸಾಧಿಸುತ್ತಾನೆಯೇ ಎಂಬ ಪ್ರಶ್ನೆಯನ್ನು ಪು.ತಿ.ನ. ಮೂಡಿಸುತ್ತಾರೆ. ಈ ಇಡಿಯ ವಿಶ್ವ ತನ್ನ ಚರಾಚರಗಳೊಂದಿಗೆ ನಾನು ನೀನು ಎಲ್ಲರೂ ಎಲ್ಲವೂ ಕೇವಲ ಆ ಪರಮಾತ್ಮನ ಸಾಕ್ಷಾತ್ಕರಣ ಸಾಧನವೆ ಎಂಬ ಪ್ರಶ್ನೆಯನ್ನೆತ್ತುತ್ತಾರೆ. ಕವಿಯ ರಸಪ್ರಜ್ಞೆ ಕಂಡರಸಿಕೊಂಡ ದರ್ಶನ "ಪೃಥಃಕರಣ ಕುಶಲಂ

ಅಂತಃಕರಣ ವೃತ್ತಿ, ಅಪೃಥಕ್ ಭಾವಮೇರಸಪಥಂ" ಎಂಬುದು, ಮನುಷ್ಯನ ಕರಣಗಣಗಳ ಪ್ರವೃತ್ತಿಗಳು ಭಿನ್ನತೆಯನ್ನರಸುವುದರಲ್ಲಿ ಕುಶಲಿಗಳಾದರೆ, ರಸಪಥದ ಯಾತ್ರಿಕನ ಪ್ರವೃತ್ತಿ 'ಅಪೃಥಕ್ ಭಾವ' ಏಕತೆಯನ್ನರಸುವುದು. ಇಂತಹ ಪರಮಗುಹ್ಯ ತತ್ವವನ್ನು ಅರಿಯುವವರು ನಿಷ್ಕಿಂಚನ ಮಹಾತ್ಯಾಗಿಗಳು, ಅಂತಹ ರಸರೂಪದ ಅರಿವಿನಲ್ಲಿ ಪರಂಧಾಮ ತತ್ವ ಪ್ರತಿಫಲಿಸುತ್ತದೆ ಎಂಬುದು ಪು.ತಿ.ನ. ಅವರ ನಂಬಿಕೆ. ರಸಶಬ್ದದ ಹಲವು ಅರ್ಥಗಳನ್ನು ತಿಳಿಸುವ ಪು.ತಿ.ನ. ರಸಕ್ಕೆ ಪರಮಾತ್ಮ ಎಂಬ ಸಂಕೇತವುಂಟೆಂಬುದು ಗೋಚರಕ್ಕೆ ಬರುತ್ತದೆ ಎಂದು ಹೇಳಿ "ರಸೋ ವೈಸಹ" "ಓಂ ಆಪೋ ಜ್ಯೋತಿ ರಸೊ ಅಮೃತಂ ಬ್ರಹ್ಮ" ಎಂಬ ವಾಕ್ಯಗಳನ್ನುದ್ಧರಿಸುತ್ತಾರೆ.

"ರಸಾಸ್ತಿಕ್ಯಕ್ಕೆ ಧಕ್ಕೆ ಬಂದಾಗ ಮನುಷ್ಯ ನರಳುತ್ತಾನೆ, ಕೆರಳುತ್ತಾನೆ, ಇದು ತೀರಾ ಮಸುಳಿಸಿದಾಗ ಧರ್ಮಗ್ಲಾನಿಯುಂಟಾಗಿ ಭಗವದವತಾರಕ್ಕೆ ತಿರೆ ಮೊರೆಯಿಡುತ್ತಾಳೆ." (ಋತ–ಸತ್ಯ–ರಸ ಲೇಖನದಲ್ಲಿ ಪು.ತಿ.ನ. ಸಮಗ್ರಗದ್ಯ ಸಂಪುಟ ಪುಟ–೪೯೧) ಎಂದಿದ್ದಾರೆ ಪು.ತಿ.ನ. ಕೃಷ್ಣಾವತಾರದ ಕಾಲಘಟ್ಟದ ಹಿಂದಿನ ಪರಿಸ್ಥಿತಿ ಇಂಥದೇ ಆಗಿದ್ದಿತು. ಸೃಷ್ಟಿಯಲ್ಲಿ ಅಂತರ್ಗತವಾಗಿರುವ ಸಾಮರಸ್ಯದ ತತ್ವವನ್ನರಿಯದೆ ಮಾನವ ಋತವಿಮುಖನಾಗಿ, ಆನಂದಸಾಕ್ಷಾತ್ಕಾರ ಮಾಡಿಕೊಳ್ಳಲಾರದೇ, 'ಋತಜ್ಞಾನ–ಲುಬ್ಧಾವಾತ್ಮಾನಭಿಜ್ಞಂ' (ಋತಜ್ಞಾನ, ಆತ್ಮಜ್ಞಾನಗಳಿರದೆ) ತಾನಾಗಿ ಅನೃತದೊಳು ತೊಳಲುತ್ತ ವಿಷಮತೆ ಎಲ್ಲೆಡೆಯೂ ವ್ಯಾಪಿಸಿದಾಗ, ವಸುಂಧರೆ ನಲುಗುತ್ತಾಳೆ. ಭೂಮಿ ಅಥವಾ ವಸುಂಧರೆಗೆ ಪು.ತಿ.ನ. ಈ ವಿಶೇಷಣಗಳನ್ನು ಉಪಯೋಗಿಸುತ್ತಾರೆ. "ತಿರೆಯೆನಿಸಿ, ವಿಶ್ವಂಭರೆಯೆನಿಸಿ, ರಸೆಯೆನಿಸಿ ಸರ್ವಂಸಹಾಯೆನಿಸಿದಿಳೆ, ಮೂರ್ತಮಂಗಳೆ", ಇಂತಹ ಇಳೆ ಋತ ವಿಮುಖ, ರಸವಿಮುಖ ಲೋಕದಿಂದಾಗಿ ಗುರುದುಃಖದೊಳು ವಿಹ್ವಲೆಯಾಗಿ ಆಕ್ರಂದಿಸುತ್ತಾಳೆ, "ಎನ್ನ ಪೊರೆವರಿಹರೆ ಸುರರೊಳು । ಎನ್ನ ಹೊರೆಯನು ಕಳೆವರಿಹರೆ?" ಹೀಗೆ ಆಕ್ರಂದಿಸುತ್ತಿರುವ ಇಳೆಯನ್ನು ಕಂಡು ದೇವಲೋಕದಲ್ಲಿ ಸುರರು ಬೆಚ್ಚುತ್ತಾರೆ. ದೇವೇಂದ್ರ ಈ ಧರೆಯನ್ನು 'ರಸಪದ'ವೆಂದು ಕರೆಯುತ್ತಾನೆ ಮತ್ತು "ರಸಪದದೊಳೀ ಮೃತ್ಥ್ವತಮೇನೆಂದು" ಪ್ರಶ್ನಿಸುತ್ತಾನೆ. ಬ್ರಹ್ಮಕಣ್ತೆರೆದು ಎಂಟು ದಿಕ್ಕುಗಳತ್ತ ದೃಷ್ಟಿ ಬೀರಿ, ಕಂಸ ಮುಂತಾದ ಮದಿತರನ್ನು ಕಂಡು ವ್ಯಗ್ರನಾಗುತ್ತಾನೆ. ಪ್ರಳಯ ಸಮಯ ಸನ್ನಿಹಿತವಾಯಿತೆಂದು ರುದ್ರ ತನ್ನ ಮೊದಲೆರಡು ಕಣ್ಣುಗಳಿಂದ ಉರಿನೋಟ ಕಾರುತ್ತಾನೆ. ಆಗ ಬ್ರಹ್ಮ ಹೇಳುವ ಈ ಮಾತುಗಳು, ಪ್ರಳಯವೊಂದೇ ಎಲ್ಲಕ್ಕೂ ಪರಿಹಾರವಲ್ಲವೆಂದೂ, ಅವತಾರಕ್ಕೆ ಸಮಯ ಸನ್ನಿಹಿತವಾಗಿರುವುದನ್ನೂ ಸೂಚಿಸುತ್ತವೆ. "ಮಾಣ್ ಮಾಣೆಂದು ಲಯಮೆ ಭೇಷಜಮೆಂಬ । ರುಜೆಯುಲ್ಬಣದ ವಿಷಮತೆಗೆ ಸಂದಿಲ್ಲ.." ಸೃಷ್ಟಿಯ ಸ್ಥಿತಿ ಹದಗೆಟ್ಟಾಗ, ಪ್ರಳಯವೊಂದೇ ಔಷಧವಲ್ಲ, ಪ್ರಳಯಕ್ಕೆ ಮೊದಲು ಅವತಾರದ ಸಾಧ್ಯತೆಯನ್ನೂ, ಖಚಿತತೆಯನ್ನೂ ಸೂಚಿಸುತ್ತವೆ. ಬ್ರಹ್ಮನೊಡನೆ ವೈಕುಂಠಕ್ಕೆ ಬಂದ ಇಳೆ, ಶೇಷಶಾಯಿ ಮಹಾವಿಷ್ಣುವಿನ ಪಾದಕ್ಕೆ ತನ್ನ ತಲೆಯೊತ್ತುತ್ತಾಳೆ. ಆಗ ವಿಷ್ಣುವು

‘ಸಾಕಿನ್ನೇಳು ಹಗುರಾದೆ’ ಎಂದೆ ಅಭಯ ನೀಡುತ್ತಾನೆ ಮತ್ತು ಭೂಭಾರ ಹರಣಕ್ಕೆ ಅವಶ್ಯಕವಾದ ಕಾರ್ಯಗಳಲ್ಲಿ ತಾನು ತೊಡಗಿಕೊಳ್ಳುವುದಾಗಿ ಹೇಳಿ, ಬ್ರಹ್ಮನನ್ನೂ, ಸುರರನ್ನೂ, ಇಳೆಯನ್ನೂ ಕಳಿಸಿಕೊಡುತ್ತಾನೆ. ಶೃತಿರೂಪವಾದ ಗರುಡನನ್ನು ಪಕ್ಕದಲ್ಲಿರಿಸಿಕೊಂಡಿರುವ ಆರ್ತತ್ರಾಣ ವೈಕುಂಠ ಮೂರ್ತಿಯ ಚಿತ್ರಣವನ್ನು ಪು.ತಿ.ನ. ಅವರ ಮಾತುಗಳಲ್ಲಿಯೇ ಸವಿಯಬೇಕು, ಅನುಭವಿಸಬೇಕು. ಬ್ರಹ್ಮ–ವಿಷ್ಣು–ಮಹೇಶ್ವರರ ಮಧ್ಯದಲ್ಲಿ ಸುರಮಂಡಲದ ಚಕ್ರ ನೆಲೆಸಿರುತ್ತದೆ. “ಅರ್ಥ ಕಾಮೋದ್ಭೂತ ಭವಸಂವಾಹ। ನಿರ್ವಾಹನೊಳು ಇಂಗಡಲ ತೆರೆಕೂಗಿನೊಳು ಕಣ್ ಬೆಳೆಸುತಿಹ। ಯೋಗನಿದ್ರಾ ಭೋಗಿಯೊಳು ನಲ್ ತಿಳಿವು ಸಾಸಿರಮುಖದೊ । ಈಕ್ಷಿಸುತಿವನ ಗುಟ್ಟನರಿಯದೆ ಅಲ್ಲೆ ನೆಟ್ಟುದೊ ಎನ್ನೆ । ಮೇಲೆ ಹೆಡೆಬಿಚ್ಚಿರಲನಂತಂ ಹಾಲ್ಗಡಲು ನೀರ್ಗಡಲ । ಚೆಂದವನೆ ಮರೆವಂತೆ ನೀಲಿಮೆ ತಳೆಯೆ ತನುಕಾಂತಿಯನು । ಹರಡಿಹ ಶೇಷತಲ್ಪ ಶಾಮಸುಂದರ....” ಹೀಗೆ ಅಭಯಪ್ರದಾನಂನಲ್ಲಿ ಸೃಷ್ಟಿಯ ಈ ಭೂಮಿಯಲ್ಲಿ ರಸಪ್ರಜ್ಞೆ, ಋತಪ್ರಜ್ಞೆಗಳು ಮಸುಳಿಸಿ, ಧರೆಯಭಾರ ಹೆಚ್ಚಿ, ಕೃಷ್ಣಾವತಾರಕ್ಕೆ ಸಿದ್ಧತೆಯಾಗುವುದನ್ನೂ ಕಾಣುತ್ತೇವೆ.

❍

# ಜನನೀ ಜನಕ ವೀಕ್ಷಣಂ

ತಮ್ಮ ಈ ಕಾವ್ಯ ಸಹೃದಯರಿಂದ ದೂರ ಉಳಿಯುವುದೇ, ಎಂಬ ಶಂಕೆಯನ್ನು ವ್ಯಕ್ತಪಡಿಸುತ್ತಲೇ ಕವಿ "ಕತೆ ಹಳದು, ನಿಃಸ್ವಾದು ಎಂದದಕೆ ತಿರುಹದಿರು ಬೆನ್ನನು" ಎಂದು ಹೇಳಿ ಹಳತು ಹೊಸತರ ಅರ್ಥ ವಿಶ್ಲೇಷಣೆಯನ್ನು ವಿಶಿಷ್ಟ ರೀತಿಯಲ್ಲಿ ಮಾಡುತ್ತಾರೆ. ಅರಿಷಡ್ವರ್ಗ ಹಳೆಯದೆ? ಹಾಗೆಯೇ ಅದನ್ನು ನಿಯಂತ್ರಿಸಲು ಮಾನವನೆದೆಯಲ್ಲಿ ಬೆಳೆಯುವ ಶಿವಾನುಗ್ರಹ ಹಳೆಯದೆ? ಅಣುಸ್ಫೋಟಕ್ಕೆ, ಗ್ರಹಚಂದ್ರಗಾಮಿಯಾಸ್ಫೋಟಕ್ಕೊಳಗಾದ ಈ ಭೂಮಿ ಹಳೆಯದೆ? ಎಲ್ಲೆಲ್ಲಿ ಪ್ರತ್ಯಕ್ಷವಾಗುವ ಖೇಚರವಾಣಿ, ಭೂಮಿ, ಜಲ, ಗಗನಗಳಲ್ಲಿ ಸ್ವಯಂಚಾಲಿತವಾಗಿ ಚಲಿಸುವ ಸುಯಾನದ ವಾಹನಗಳು, ರೋಗ ನಿಯಂತ್ರಣ, ಅಪರಿಮಿತ ಸುಖ ಸಾಧನಗಳು ಮುಂತಾದ ಆಧುನಿಕ ವಿಜ್ಞಾನದ ಆವಿಷ್ಕಾರಗಳು ಮಾನವನನ್ನು ಸತ್ಪಥದಲ್ಲಿ ನಡೆಯಗೊಳಸಿಹುವೆ? ನವ್ಯವಿದು ಮನುಜಗೆ ತಹದೆ ದಿವ್ಯವನು? ಎಂದು ಪ್ರಶ್ನಿಸುವ ಪು.ತಿ.ನ. ಆಧುನಿಕ ಆವಿಷ್ಕಾರಗಳು ಮಾನವನ ಮನಸ್ಸನ್ನು, ಸತ್ ಪಥದತ್ತ ಕೊಂಡೊಯ್ದು, ಆ ಮನದಲ್ಲಿ ರಸಪ್ರಜ್ಞೆಯನ್ನು ಮೂಡಿಸುವಲ್ಲಿ ವಿಫಲವಾಗಿವೆಯೆಂದೂ, 'ಈ ಎಲ್ಲ ಸಾಧನಗಳಿಂದ ಮಾನವನಿಗೆ', 'ಶಪ್ತನೊಲವಗೆ ಖಗ ಸರೀಸೃಪ ವಾರಿಚರ ಜೀವನಂ ಸಂದಿತಲ್ಲದೆ ವರವೆ?' ಎಂದು ಪ್ರಶ್ನಿಸುತ್ತಾರೆ. ಹೊಸಹೊಸ ವಸ್ತುಗಳಿಂದ ಹೊಸಹೊಸ ರೀತಿಯ ಬಂಧನಗಳಿಗೊಳಗಾಗಿದ್ದಾನೆಯಷ್ಟೆ ಇಂದಿನ ಮಾನವ. ಈ ಸಮೃದ್ಧಿಯಿಂದ ಕೊಬ್ಬಿರುವ ಅವನನ್ನು ಭಯ ಲೋಭಗಳು ಆಕ್ರಮಿಸಿದ್ದು, ಅವನು "ಹಿಂದಿಗುಮಿಂದವಂ ಬಹುವೃದ್ಧನರಿಷಡ್ವರ್ಗದಿಂ। ಬಲು ಪೆಡಸಿಂದು ಬಿಡುಗಡೆಯ ಹಾದಿ।" ಹಿಂದಿಗಿಂತಲೂ ಹೆಚ್ಚಾಗಿ ಅವನು ಅರಿಷಡ್ವರ್ಗದಲಿ ಮುಳುಗಿ ಜಡ್ಡುಗಟ್ಟಿದಾನೆ. ಕೇವಲ ಭೌತಿಕಸುಖ ಸಮೃದ್ಧಿಯಲ್ಲಿ ಮುಳುಗಿರುವ ಅವನಿಗೆ ಈ ಹಾದಿಯಿಂದ ಬಿಡುಗಡೆ ಪಡೆದು ಸತ್ ಪಥ, ರಸಪಥ ಮುಟ್ಟುವುದು ಬಲು ಕಠಿಣ ಎನ್ನುತ್ತಾರೆ ಪು.ತಿ.ನ. ಇಂದಿನ ಜಗತ್ತಿನ, ಇಂದಿನ ಮಾನವರ ಪರಿಸ್ಥಿತಿ, ಮನೋಸ್ಥಿತಿಗಳು ಇನ್ನೂ ಹೀಗೆಯೇ ಇರುವಾಗ ಅಹಂನಿಂದ ಮದಿಸಿದ್ದ ಅಂದಿನ ಕಂಸ ಹಿಂದಿನವನೆಂದು ಹೇಗೆ ಹೇಳುವುದು ಎಂದು

ಕೇಳುತ್ತಾ ಕವಿ, ಹಿಂದಿಗೂ, ಇಂದಿಗೂ ಸೇತುವೆ ಕಟ್ಟಿ, ಯುಗ ಯುಗಗಳಲ್ಲಿಯೂ, ಕಂಸ, ಕೃಷ್ಣರ ಇರವನ್ನು ದೃಢೀಕರಿಸುತ್ತಾರೆ. ಕೃಷ್ಣತತ್ವ ಅಥವಾ ಕೃಷ್ಣಪ್ರಜ್ಞೆಯಂತೆಯೇ ಕಂಸತತ್ವ, ಕಂಸಪ್ರಜ್ಞೆಗೂ ಅಳಿವಿಲ್ಲ, ಕೃಷ್ಣತತ್ವದಂತೆ, ಕಂಸತತ್ವವೂ ಅವಿನಾಶಿಯಾಗಿದ್ದು "ಒಬ್ಬನೊಳು ಐವರೊಳು, ಶತರೊಳು" ಅದು ವ್ಯಕ್ತವಾಗುತ್ತಲೇ ಇರುತ್ತದೆ. ಆದ್ದರಿಂದ ಹಿಂದೊಮ್ಮೆ ದುಃಖದಿಂದ ನೊಂದ ಭೂದೇವಿ ಮಾಡಿದಂತೆ, ಆ ಪುರುಷೋತ್ತಮನ ಪಾದ ಹಿಡಿದು ಶರಣು ಹೋಗುವುದೇ ಶ್ರೇಯಸ್ಕರ. ಹೀಗೆ ವರ್ತಮಾನಕ್ಕೂ. ಭೂತಕ್ಕೂ, ವೈಚಾರಿಕ ಸಾಮ್ಯ, ಪರಿಸ್ಥಿತಿಯ ಸಾಮ್ಯದ ಸೇತುವೆ ಕಟ್ಟುತ್ತಾ ಪು.ತಿ.ನ. ವಸುದೇವ ದೇವಕಿಯರ ವಿವಾಹ ಸಂಭ್ರಮ, ಕಂಸನ ಸಂತಸ, ಅಶರೀರವಾಣಿಯ ಆಲಿಕೆಯಿಂದಾಗಿ ಕಂಸನಲ್ಲಿ ಉದ್ಭವವಾಗುವ ಕ್ರೌರ್ಯಗಳ ನಿರೂಪಣೆಯಿಂದ ಕಥನವನ್ನು ಮುಂದುವರೆಸುತ್ತಾರೆ.

ನವವಿವಾಹಿತರಾದ ತನ್ನ ತಂಗಿ ದೇವಕಿ, ಭಾವ ವಸುದೇವನನ್ನು ಪುರದೊಳಗೆ ಮೆರವಣಿಗೆ ಮಾಡುವ ಸಲುವಾಗಿ ಕಂಸನು ಸಿಂಗರಿಸಿದ ರಥದ ಸಾರಥಿಯಾಗಿ ತಾನೇ ಹೊರಡುತ್ತಾನೆ. ದೇವಕಿಯ ಮುಖ "ಮೊದಲೊಲುಮೆ ಕಳೆಯಿಂದ" ಹೊಳೆಯುತ್ತಿದ್ದರೆ, ವಸುದೇವ ತನ್ನ ಸತಿಯ ನಾಚಿದ ಮುಖವನ್ನು ನೋಟದಲ್ಲಿಯೇ ಮುದ್ದಿಸುತ್ತಿದ್ದನಂತೆ. ಕಂಸ ಓಡಿಸುತ್ತಿರುವ ಕುದುರೆಗಳ ವೇಗವೋ "ತಾವೋಡದೆಯೇ ಓಟದ ಬೆರಗ ತೋರುತ ಕೆನೆದೋಡುತಿರುವಂತಿಹವು". ಪರಾಕಾಷ್ಠ ಬಿಂದುವನ್ನು ತಲುಪಿದ ವೇಗವೂ ಕೂಡ ನಿಶ್ಚಲ ಬಿಂದುವನ್ನು ತೋರಿಸುತ್ತಿದೆಯೋ ಎಂಬಂತೆ. ಮರುಕ್ಷಣವೇ ಸನ್ನಿವೇಶ ಸಂಪೂರ್ಣವಾಗಿ ಬದಲಾಗಿ ಬಿಡುತ್ತದೆ. ಅತ್ಯಂತ ಹರ್ಷಚಿತ್ತನಾಗಿ ಒಲವು ತುಂಬಿದ ಹೃದಯದಿಂದ ರಥವನ್ನೋಡಿಸುತ್ತಿದ್ದ ಕಂಸನಿಗೂ ಹಾಗೂ ಅಲ್ಲಿ ನೆರೆದಿದ್ದ ಜನಸಮೂಹಕ್ಕೂ 'ಹೂಮುಡಿಯ ಹಾವಿನಂತೆ', 'ಉರುಮುದಕೆ ನಂಜೇರಿಸುವ ತೆರದಲ್ಲಿ' ಆಕಾಶವಾಣಿ ಕೇಳಿಸುತ್ತದೆ: "ಈ ಉದ್ವಾಹದಷ್ಟಮ ಫಲಂ ನಿನ್ನ ಹರಣವ ಕೊಳುವ । ನಾತನ ಹೆರುವ ಹೆಣ್ಣವಳಿಗೀ ತೆರೆದ ಮೆರವಣಿಗೆಯೇ?। ಅಹಹಾ ದಿಟ್ಟದ ವಿಲಾಸವೇ!"

ಆಕಾಶವಾಣಿಯ ಈ ಪ್ರಸಂಗದಲ್ಲಿ ಪು.ತಿ.ನ. ಕಂಸನ ಹಾಗೂ ಜನಪದದ ಪ್ರತಿಕ್ರಿಯೆಯನ್ನು, ಅವ್ಯಕ್ತ ಭಯ ಮೂಡಿಸುವ ಪರಿಣಾಮದ–ಮನೋವೈಜ್ಞಾನಿಕ ನೆಲೆಯಿಂದ ಪರಿಶೀಲಿಸುತ್ತಾರೆ. ಈ ವಾಣಿ ಯಾರದ್ದು? ಎಲ್ಲಿ ಉದಿಸಿದುದು? ಏಕೆ? ಎಂದು ಅಲ್ಲಿ ನೆರೆದಿದ್ದ ಜನ "ಎತ್ತೆತ್ತೆಲು ದಿಟ್ಟಿಯಟ್ಟುತ್ತ" ನಿಲ್ಲುತ್ತಾರೆ. ಅವರಿಗೆ ಈ ವಾಣಿ "ವಿದ್ಯುದ್ವಿಶದೋಪಹಾಸಂ ಭವಿಷ್ಯ ಪ್ರಕಾಶಂ" ಎನಿಸುತ್ತದೆ. ಭವಿಷ್ಯದ ಮುನ್ಸೂಚಿಯೆನಿಸಿ ಜನರು ಭಯಗೊಳ್ಳುತ್ತಾರೆ. ಇನ್ನು ಅರಸ ಕಂಸನಿಗೆ ಹೇಗಾಗಿರಬೇಡ? ಆ ವಾಣಿ ತನ್ನ ಭವಿಷ್ಯದ ಭಾರೀ ಕೇಡನ್ನೇ ಸೂಚಿಸುತ್ತಿರುವಾಗ! ಅದನ್ನಾಲಿಸಿದ ಕಂಸ

ಬೆವರುತ್ತಾನೆ, "ಪೆರ್ಭಯಂ ಪೊಕ್ಕುದಾತನ ಎದೆಯ", ಹೀಗೆ ಕಂಸನ ಎದೆಯನ್ನು ಹೊಕ್ಕ ಭಯವು "ಎದೆಯಿಂದೂಡಿತರ್ತಿಯನು । ರಸಹಿಂಗೆ ಮನವಾಯ್ತು ಕರ್ಕಶ.." ಎನ್ನುವ ನುಡಿಗಳಲ್ಲಿ, ಪು.ತಿ.ನ. ಮನೋವೈಜ್ಞಾನಿಕ ಸತ್ಯವೊಂದನ್ನು ತೆರೆದಿಟ್ಟಿದ್ದಾರೆ. ಪ್ರೀತಿ ಎನ್ನುವ ರಸ ಹೃದಯದಲಿ ಇಂಗಿದ ಮೇಲೆ ಮನಸ್ಸು ಕರ್ಕಶವಾಗಿ ಬಿಡುತ್ತದೆ. ಪ್ರೀತಿ ಮಾಧುರ್ಯಗಳು ಒಟ್ಟಿಗೇ ಇರುವಂತೆ, ಪ್ರೀತಿ, ಕರ್ಕಶತೆ, ಕ್ರೌರ್ಯಗಳು ಒಟ್ಟಿಗಿರಲು ಸಾಧ್ಯವಿಲ್ಲ. ಇದರೊಂದಿಗೆ, ಭಯದಿಂದ ಮನಸ್ಸಿನಲ್ಲಿ ಉಂಟಾಗುವ ಪರಿಣಾಮ ಪ್ರತಿಕ್ರಿಯೆಗಳನ್ನೂ ಪು.ತಿ.ನ. ಬಿಚ್ಚಿಟ್ಟಿದ್ದಾರೆ. ಭಯ ಮನಸ್ಸಿನ ಮೇಲೆ ಎರಡು ರೀತಿಯ ಪರಿಣಾಮವನ್ನುಂಟು ಮಾಡಬಹುದು. ಅವ್ಯಕ್ತ ಅಪಾಯದ ಭಯ, ಪ್ರೀತಿಸುತ್ತಿರುವವರ ನಡುವೆ ಪರಸ್ಪರ ಪ್ರೀತಿಯನ್ನು ವೃದ್ಧಿಸುವ ಸಾಧನವಾಗಬಹುದು, ಅದು ವ್ಯಕ್ತಿಗಳಿಬ್ಬರಲ್ಲಿಯೂ, ನಿರ್ವ್ಯಾಜ ಪ್ರೇಮವಿದ್ದು, ಇಬ್ಬರಲ್ಲಿಯೂ ಯಾವುದೇ ಅಧಿಕಾರದ ಸ್ವಾರ್ಥವಿರದಿದ್ದಾಗ. ಆದರೆ ಆ ಪ್ರೀತಿ ಸಂಪೂರ್ಣ ನಿರ್ವ್ಯಾಜವಾಗಿರದೇ, ತಾನು ಪ್ರೀತಿಸುತ್ತಿರುವವರಿಂದಾಗಿಯೇ ತನ್ನ ಅಧಿಕಾರ, ಅಂತಸ್ತು ಕಡೆಗೆ ಅಸ್ತಿತ್ವಕ್ಕೆ ಮುಳುವಾಗುತ್ತದೆ ಎಂಬುದು ದಿಢೀರನೆ ಅರಿವಾದಾಗ, ತನ್ನ ಉಳಿವಿನ ಬಗೆಗಿನ ಭಯ ಆತಂಕಗಳು ದ್ವೇಷ ಹಿಂಸೆಗಳಾಗಿ ಪರಿಣಮಿಸುತ್ತವೆ, ತನ್ನ ಅಧಿಕಾರ, ಅಸ್ತಿತ್ವದ ಉಳಿವಿಗಾಗಿ ಎಂದೋ ಬರಬಹುದಾದ ಅಪಾಯವೇ ಆದರೂ–ಅಂತಹ ವ್ಯಕ್ತಿ ಮತ್ತೆ ಮತ್ತೆ ಹಿಂಸೆಗೆ ಶರಣು ಹೋಗುತ್ತಾನೆಂಬುದಕ್ಕೆ ಕಂಸ ನಿದರ್ಶನವಾಗುತ್ತಾನೆ. ಹಿಂಸೆಯ ಮಜಲಿನಿಂದ ಕಂಸ ಕುರುಡು ಕ್ರೌರ್ಯಕ್ಕಿಳಿಯುತ್ತಾನೆ, ತನ್ನ ತಂಗಿಗೆ ಜನಿಸುವ ಹಸುಕಂದಗಳನ್ನು ಕೊಲ್ಲುವ ಮೂಲಕ. ಈ ಮನೋವ್ಯಾಪಾರವನ್ನು ಪು.ತಿ.ನ. ಕಂಸನ ಪ್ರತಿಕ್ರಿಯೆ, ಅವನ ಮೇಲಾಗುವ ಪರಿಣಾಮಗಳಿಂದ ತೆರೆದಿಟ್ಟು, ಈ ಪ್ರಕ್ರಿಯೆಯನ್ನು ಹೀಗೆ ಸಾರ್ವತ್ರೀಕರಿಸುತ್ತಾರೆ. "ವೀರನೆದೆಯನು ಹೊಗುವ ತಲ್ಲಣಮವನ । ರೌದ್ರವನೆ ಕೆರಳಿಪುದು ಸಾಜಂ". ತನ್ನ ಪ್ರಾಣದಂಜಿಕೆಯಿಂದ ಕಂಸ ಅಬಲೆಯಾದ ತನ್ನ ತಂಗಿಯನ್ನೇ ಕೊಲ್ಲಲೆಳೆಸುತ್ತಾನೆ. ವಸುದೇವನ ದೈನ್ಯ ತುಂಬಿದ ಬೇಡಿಕೆ, ಹುಟ್ಟುವ ಮಕ್ಕಳನ್ನೆಲ್ಲಾ ಕಂಸನಿಗೆ ಒಪ್ಪಿಸುವ ವಾಗ್ದಾನಗಳಿಂದಾಗಿ, ಜೀವಭಿಕ್ಷೆ ಪಡೆದ ನವದಂಪತಿ ಸೆರೆಮನೆ ಸೇರುತ್ತಾರೆ. ಪುರಾಣದ ಕಂಸನ ವ್ಯಕ್ತಿತ್ವ, ಅಧಿಕಾರ, ಪ್ರಾಣ ಉಳಿಸಿಕೊಳ್ಳಲು ಕಗ್ಗೊಲೆಗಳನ್ನು ಮಾಡಿಸಿದ ಮ್ಯಾಕ್ಬೆತ್ ಹಾಗೂ ಕ್ರಿಸ್ತಶಿಶುವನ್ನು ಹುಡುಕಿಸಿ ಕೊಲ್ಲಲು ಭಟರನ್ನು ಕಳಿಸುತ್ತಿದ್ದ ರಾಜ ಹೆರಾಡನನ್ನು ನೆನಪಿಸುತ್ತದೆ. ಹಾಗಾಗಿ "....ಇಂತಿರಲು ಹಿಂದಣವನೆಂತಪ್ಪನಾ ಕಂಸ ಮದೋದ್ಧತನಹಂಮನ್ಯ ಪ್ರಭು?" ಎಂಬ ಪು.ತಿ.ನ. ಅವರ ನುಡಿಯ ಸತ್ಯತೆಯ ಮನವರಿಕೆಯಾಗುತ್ತದೆ.

ಈ ಸನ್ನಿವೇಶದಲ್ಲಿ ಹಾಗೂ ಕಂಸನು ಹಸುಕಂದಗಳನ್ನು ಸೆರೆಮನೆಯಲ್ಲಿಯೇ ಕೊಂದುಬಿಡುವ, ನಂತರ ಸುತ್ತಮುತ್ತ ಪ್ರದೇಶಗಳಲ್ಲಿಯೂ ಮಕ್ಕಳನ್ನು ಕೊಂದು ಬರುವಂತೆ ತನ್ನ ಭಟರನ್ನು ಕಳಿಸುವ ಸಂದರ್ಭದಲ್ಲಿಯೂ, ನಾವು ಕಾಣುವುದು

ಬಲಿಷ್ಠನಾದ ಹಿಂಸಕ ವ್ಯಕ್ತಿಯ ನಿರಂಕುಶ ಪ್ರಭುತ್ವ ಹಾಗೂ ದುರ್ಬಲ ಅಸಹಾಯಕ ಪ್ರಜಾವರ್ಗ. ಅಲ್ಲಿ ಸೇರಿದ್ದ ಜನಸ್ತೋಮ ಯಾವುದೇ ರೀತಿಯಲ್ಲಿಯೂ, ಕಂಸನ ಕ್ರೌರ್ಯವನ್ನು ಎದುರಿಸಲಾಗಲೀ ಪ್ರತಿಭಟಿಸಲಾಗಲೀ, ಇದು ಅನ್ಯಾಯ ಎಂದು ಬಾಯಲ್ಲಿ ಹೇಳುವುದಕ್ಕೆ ಕೂಡಾ ಶಕ್ತರಲ್ಲ. ಬರಿದೆ ಕಳವಳಗೊಳ್ಳುವುದಷ್ಟೇ ಪುರಜನರ ಪಾಲಿಗೆ ಉಳಿದಿರುವುದು. ವ್ಯಷ್ಟಿಯಲ್ಲಿಯೂ, ಸಮಷ್ಟಿಯಲ್ಲಿಯೂ, ಋತ–ಸತ್ಯ–ರಸಗಳು ಸಂಪೂರ್ಣವಾಗಿ ಮಸಳಿಸಿರುವ ಸ್ಥಿತಿ ಇದು. ಅಂದಿನ ಸೂರ್ಯಾಸ್ತವನ್ನು ಪು.ತಿ.ನ. ಹೀಗೆ ವರ್ಣಿಸಿದ್ದಾರೆ; "ತೆರಳಿದನಹಸ್ಕರಂ, ಸಮ್ಮುದ ತಸ್ಕರನೆಂಬ ನಾಣಿಂ" ನವವಧೂವರರ ಸಮ್ಮುದವನ್ನು ತಾನು ಕಳವು ಮಾಡಿದೆನೆಂಬ ನಾಚಿಕೆಯಿಂದ ಸೂರ್ಯ ತೆರಳಿದನಂತೆ.

❍

# ಜನನೀ ಜನಕ ಸಂಸ್ಕಾರಂ

'ಜನನೀ ಜನಕ ಸಂಸ್ಕಾರಂ' ಎಂಬ ನಾಲ್ಕನೆಯ "ಉಲ್ಲಾಸ", ಸೆರೆಮನೆಯಲ್ಲಿರುವ ದೇವಕಿ ವಸುದೇವರ ನವದಾಂಪತ್ಯದ ಒಲವು, ದೇವಕಿಯ ಗರ್ಭಧಾರಣೆ, ಆ ಗರ್ಭವು ತಂದೆ ತಾಯಿಗೆ ತರುವ ನೋವು, ನಲಿವು, ದೇವಕಿಯ ಪ್ರಸವ, ಕಂಸನ ಕ್ರೌರ್ಯಗಳನ್ನು ಮನಮುಟ್ಟುವಂತೆ ಚಿತ್ರಿಸುತ್ತದೆ.

ಮದುವೆಯ ಮೆರವಣಿಗೆಯೇನೋ ದಂಪತಿ ಸೆರೆಮನೆಗೆ ಸೇರುವುದರೊಂದಿಗೆ ಮುಕ್ತಾಯಗೊಂಡಿತು. ಆದರೂ ಪ್ರೇಮಿಗಳಿಗೆ ಅರಮನೆ, ಸೆರೆಮನೆಗಳೆರಡೂ ಒಂದೇ ಎನ್ನುತ್ತಾರೆ ಪು.ತಿ.ನ. (ಇಬ್ಬರೂ ಒಟ್ಟಿಗೆ ಇರುವುದಾದರೆ) "ಕಾದಲರ ಕಾಡುವುದೆ ಕಾರಾಗಾರ?" ಏಕೆಂದರೆ ಕಾರಾಗಾರದಲ್ಲಿ ಪ್ರೇಮಿಗಳಿಗೆ ಎಲ್ಲ ಸಮಯವೂ ಏಕಾಂತ ಸಮಯವೇ. ಅಲ್ಲದೆ ಪು.ತಿ.ನ. ಮತ್ತೊಂದು ಸಂಗತಿಯನ್ನು ಗಮನಿಸುತ್ತಾರೆ. ಮನೆಗಳಲ್ಲಿರುವ ಯಾವುದೇ ನಿಯಮವೂ, ಅಡ್ಡಿಯೂ ಅವರನ್ನು ಬಾಧಿಸದು. "ನಲ್ಲರನ್ನಗಲಿಸುವ ಮಲೆಬಯಲಲ್ಲವದು ಕುಲಜರ ಗೃಹದ ನಿಷ್ಠುರ ಸಮರ್ಯಾದ ಸಮಯ ಕಾರುಣ್ಯವನು ಬೇಡದದು..." ಈ ಮಾತುಗಳು ನಿರ್ದಿಷ್ಟ ಕಾಲಘಟ್ಟದಲ್ಲಿ ಸಂಪ್ರದಾಯಸ್ಥ ಕುಟುಂಬಗಳಲ್ಲಿ, ಪದ್ಧತಿಯಲ್ಲಿ ದಂಪತಿಗಳು ಜೊತೆಗೂಡುವುದಕ್ಕೆ ಇದ್ದ ನಿಯಮಗಳ ಬಗೆಗೆ ಬೆಳಕು ಚೆಲ್ಲುತ್ತವೆ. ಕಂಸ ನಿಜಕ್ಕೂ ಕರುಣಿ, ದಂಪತಿಯನ್ನು ಒಂದೇ ಬಂಧೀಖಾನೆಯಲ್ಲಿರಿಸಿದ. ಹಾಗಾಗಿ ಅವರು "ಆದಿಮರ್, ಪ್ರಕೃತಿ ಪುರುಷರ್ ಪರಸ್ಪರ ಮಗ್ನರೆಂತಾತೆರಮೊಲುಮೆಯೊಸಗೆಯೊಳಿನಿಯರುಮಿತರಶೂನ್ಯರ್" ಎನ್ನುತ್ತಾರೆ ಪು.ತಿ.ನ. ಉಳಿದ ಪ್ರಪಂಚಕ್ಕೆ ಇಲ್ಲವಾಗಿ ಕಂತುವಶರಾದ ಅವರು 'ಇಂದ್ರಿಯ ಗ್ರಾಮವನು', ಪ್ರೇಮಪ್ರಥಮ ಪದಾರ್ಪಣಕ್ಕೊಪ್ಪಿಸಿದರು" ಎನ್ನುತ್ತಾರೆ ಕವಿ. ದೇವಕಿ ತಳೆದ ಗರ್ಭವು "ಸರ್ವಂಸಹಾದೇವ ಕಂಸವ್ರಣವನುಲ್ಬಣಿಸುವ ಬಸುರಾ"ಗುತ್ತದೆ. ಸಾಮಾನ್ಯ ಹೆಣ್ಣಿಗೂ ಗರ್ಭವತಿಯಾದಾಗ ಸಲ್ಲುವ ಪುಂಸವನ, ಸೀಮಂತೋನ್ನಯನ, ಮಂಗಳ ಸಂಸ್ಕಾರಗಳಿಂದ ವಂಚಿತಳಾಗುವ ದೇವಕಿಯ ಬಗೆಗೆ ಮರುಗುತ್ತಾರೆ. ದೇವಕಿ ಗರ್ಭ ತಳೆದ ಸುದ್ದಿ ಕೇಳಿದ ಕಂಸ "ನುಡಿಸಿಡಿಲ್ ಬಡಿದಂತೆ ವ್ಯಾಕುಲನಾಗುತ್ತಾನೆ." "ಅವನ

ಅಹಂಕಾರವು ಆಕಾಶವಾಣಿಯ ಹೆಬ್ಬಾವಿನ ಹಿಡಿತದಲ್ಲಿ ಮಿಲಮಿಲನೆ ಮಿಡುಕಾಡು ತಿರ್ದುದು" ಎನ್ನುತ್ತಾರೆ. ಕಂಸನಂತಹ ನಿರಂಕುಶಪ್ರಭು ಅಥವಾ ಯಾವುದೇ ಬಲಶಾಲಿ ಕ್ರೂರ ಮನುಷ್ಯನಾಗಬಹುದು– ತನ್ನ ಜೀವಭಯದಿಂದಾಗಿ, ತನ್ನ ಅಧಿಕಾರದ ಉಳಿವಿಗಾಗಿ ಎಂಥ ಕ್ರೂರಕೃತ್ಯಕ್ಕೆಳಸಿದರೂ, ಪ್ರಜಾಸಮೂಹ ಮುಂದೇನುಗತಿ ಎಂಬ ಶಂಕೆಯಿಂದ ಭಯದಿಂದ ತಲ್ಲಣಿಸುತ್ತದೆಯೇ ಹೊರತು, ಅಂತಹ ನಿರಂಕುಶರನ್ನು ಪ್ರತಿಭಟಿಸುವುದಿಲ್ಲ. ಆ ಪ್ರತಿಭಟನೆಯ ಸಾಮರ್ಥ್ಯವನ್ನೇ ಅವರು ಕಳೆದುಕೊಂಡಿರುತ್ತಾರೆನ್ನುವುದನ್ನು ಪು.ತಿ.ನ. ಮತ್ತೆ ಮತ್ತೆ ಪ್ರಸ್ತಾಪಿಸಿ, ಸಮಷ್ಟಿಯಲ್ಲಿ ಉಂಟಾಗಬೇಕಾಗಿರುವ ಋತ–ಸತ್ಯ–ರಸ ಜಾಗೃತಿಯ ಬಗೆಗೆ ಎಚ್ಚರಿಸುತ್ತಾರೆ. ಪರಿಜನ ಸೆರೆಮನೆಯಲ್ಲಿದ್ದ ಹೊಲೆಮನೆಯತ್ತ ನಡೆಯುತ್ತದೆ. ಸಮಷ್ಟಿಯ ಪ್ರತಿನಿಧಿಯಾದ ರಾಜ ಕಂಸ ನಿರಂಕುಶನಾಗಿ ಕ್ರೌರ್ಯದಿಂದ, ಕೂಸಿನ "ಮೈಯ ಮಾಸಂ ತೊಳೆವ ಮುನ್ನವೆ" ಆ "ಪ್ರಾಣದ ಪಿಂಡವಂ ಕಸದೊಳೆಸೆ" ದರೂ, ನಿಸ್ಸಹಾಯಕರಾಗಿ, ಕೆಡುಕಿಗೆ ಕೇವಲ ಸಾಕ್ಷಿಗಳಾಗಿದ್ದು ನೋಡಬೇಕಾದ ಪರಿಸ್ಥಿತಿ ಪ್ರಜಾಸಮಷ್ಟಿಗೆ, ಕಂಸನ ಈ ಕೃತ್ಯದ ಪರಿಣಾಮ? "....ಬೀರರ್ ಮುಸುಕನಿಡೆ ಮೊಗಕೆ, ಗುರುಜನರು ಜುಗುಪ್ಸಿತಮಾಗೆ, ನೃಪಗೌರವಂ ಪರಿಜನರ ಮನದಿ ಲಾಘವಿಸೆ, ಮಂದಿಗಳ ಕೊರಲೊಲು ಬಿಗಿಯೆ ಬಿರುದಾವಳಿಗಳುಗ್ಗಡಣ......ದುರ್ಭರವಲ್ತೆ ನಿರ್ಬಲ ಬಲಂ?" ಎನ್ನುವ ಪು.ತಿ.ನ.ರ ಮಾತುಗಳಲ್ಲಿ ವ್ಯಕ್ತಗೊಳ್ಳುತ್ತದೆ, ಮತ್ತು ಎಲ್ಲ ಕಾಲ, ಎಲ್ಲ ದೇಶಗಳಲ್ಲಿಯೂ, ಸಂಖ್ಯಾಬಲ, ಸಂಖ್ಯಾಬಾಹುಳ್ಯವುಳ್ಳ ನಿರ್ಬಲ ಪ್ರಜೆಗಳ ದುರ್ಭರತೆಗೆ ಕನ್ನಡಿ ಹಿಡಿಯುತ್ತವೆ. "ಮೌನವೆ ಮದ್ದು ಮನವುಳ್ಳರಳಲಿಗೆ", "ಕಾಲಂ ತಾನೆತಹುದು ತಾನೆ ಕೊಂಡೊಯ್ಯುವುದು" ಎನ್ನುವ ಗಾದೆ ಮಾತುಗಳಂತಹ ಉಕ್ತಿಗಳು, ದೇವಕಿ ವಸುದೇವರ ದುಃಖ ಮಾಗುವುದನ್ನು ಸೂಚಿಸುತ್ತವೆ. ಹಾಗೆಯೇ "ಕಾವ್ಯಸ್ಫುರಣದೊಳುಕ್ಕಿ ಬಹ ಮೊಲೆಹಾಲ ಮಣ್ಣಿಗೆ ಹಿಳಿದು ಪತಿಯಾಸರೆಯ ಬಯಸುವ" ಹಸಿಬಾಣಂತಿ ದೇವಕಿಯ ಚಿತ್ರಣ ನಮ್ಮ ಮನಸ್ಸಿನಲ್ಲಿ ಕರುಣೆ, ಕ್ರೋಧಗಳನ್ನು ಮಿಡಿಸುತ್ತದೆ. ಸೆರೆಮನೆಯಲ್ಲಿದ್ದು ತಾವು ಪಡೆದ ಮಕ್ಕಳೆಲ್ಲವೂ ಕಂಸನಿಗೆ ಬಲಿಯಾಗುವುದೆಂದು ತಿಳಿದೂ ವಸುದೇವ ದೇವಕಿಯರೇಕೆ ಒಂದರನಂತರ ಒಂದರಂತೆ ಎಂಟು ಮಕ್ಕಳಿಗೆ ಜನ್ಮ ನೀಡಿದರು ಎಂಬ ಸಹಜ ಪ್ರಶ್ನೆಯೊಂದು ಮನಸ್ಸಿನಲ್ಲಿ ಮೂಡುತ್ತದೆ. ಪು.ತಿ.ನ. ತಮ್ಮದೇ ಆದ, ಒಪ್ಪಬಹುದಾದ ಕಾರಣ ಕೊಡುತ್ತಾರೆ: ಸಂತಾನ ನಾಶವಾದ ದುಃಖದ ಜೊತೆಗೂ "ಪ್ರಾಣದಮೃತಸ್ಪಂದವೀವಾ," ಯೌವ್ವನ ತರುವ "ರತಿಮದಮುದ" ಮೃತ್ಯುವಿನ ಆರ್ತಭಾವವೀವ ಪ್ರಸವರುಜೆಯನ್ನು ಮೀರಿ, ದಂಪತಿ ಸುಖಿಸುವಂತೆ ಮಾಡಿದ್ದವು. ಅಲ್ಲದೆ, ಕಂಸ ಮನಕರಗಿ ಈ ಬಾರಿ ಮಗುವನ್ನು ಉಳಿಸಬಹುದೇನೋ ಎಂಬ ಆಸೆ ಅವರ ಮನದಲ್ಲಿ ಹಣುಕುತ್ತಿದ್ದಿರಬಹುದು, ಹೀಗೆ ಕಂಸನ ಕರ್ಕಶ ಕ್ರೌರ್ಯಕ್ಕೆ ದೇವಕಿಯ "ಆರು ಸೂಳೆಡಿಯಾಡಿ ಹೋದರು", ಏಳನೆಯ ಬಾರಿ ದೇವಕಿಗಾದ ಗರ್ಭಪಾತವನ್ನು ಅದು ಅನಂತಾಂಶವೆಂದು, ನಂದಗೋಪನ ರಕ್ಷಣೆಯಲ್ಲಿದ್ದ, ವಸುದೇವನ ಪತ್ನಿ

ರೋಹಿಣಿಯ ಗರ್ಭದಲ್ಲಿಟ್ಟರು ಎನ್ನುತ್ತಾರೆ ಪು.ತಿ.ನ. ಇದು ಹರಿಮಾಯೆ ಹರಿಯಾಜ್ಞೆ, ಇದೇ ಬಲರಾಮನ ಅವತಾರ.

ದೇವಕಿಯು ತನ್ನ ಅಷ್ಟಮ ಗರ್ಭದಲ್ಲಿ ಶ್ರಿ ಕೃಷ್ಣನ ದಿವ್ಯಚೈತನ್ಯವನ್ನೂ ಧರಿಸಿದಾಗ, ಕೃಷ್ಣ ಜನಿಸಿದಾಗ, ಇಡಿಯ ಪೃಥ್ವಿ "ಸೌಂದರ್ಯ ಸಮೃದ್ಧಿಗಳ ಬೀಡಾಗುತ್ತದೆ". ಪು.ತಿ.ನ. ಆ ಸಮೃದ್ಧಿ ಸೌಂದರ್ಯಗಳನ್ನು ಹೀಗೆ ಬಣ್ಣಿಸುತ್ತಾರೆ; "ಹೊಳೆಗಾಗೆ ನೀಲಜಲದುಕೂಲ ಧಾರಣ ವಿಲಾಸ। ಮಲೆಗಾಗೆ ನೀಲಾವಕಾಶಾಚ್ಛಾದನಂ, ಮಡುಗೊಳೆ ನೀಲಿಮೆ । ಅವಿಕೃತನಭದಿ ತನ್ನಂತಾನೆ ಹೋಗುತದು ತುರೀಯದಿ ನಿಂದವೊಲು। ನಿಶಾಕಾಂತನಾಹ್ಲಾದ ಚಾತುರ್ಯವಂ ಹಿಮವಂತನ ಸಂಗದೊಳು । ಕಲಿಯುತಿರೆ ರವಿ । ಧಾರಿಣಿ ಧರಿಸೆ ಪೀತಾಂಬರವ, ಕೊಟ್ಟುದನು ಸಾ । ಸಿರ್ಮಡಿಸಿ ತೆನೆ ತೆನೆಯ ಕೊಡುಗೈಯುತ್ತಿರೆ ಪೊಲಂ ನಾಚಿರೆ ಗದ್ದೆ । ತನ್ನ ಕೊಡುಗೆಯ ಪ್ರಕಾಶನಕೆ... ಘನಶ್ಯಾಮನವತರಿಸಿದಂ ತಂಪನೆರೆದಾ ಸಂತೃಪ್ತ ಗರ್ಭಕೆ...।" ಪು.ತಿ.ನ. ಅವರ ರಸಪ್ರಜ್ಞೆಯು, ರಸಚೇತನ ಶ್ರೀಕೃಷ್ಣ ಅವತರಿಸಿದಾಗ, ಪೃಥ್ವಿ ರಸಾವಿಷ್ಠೆಯಾಗಿ, ವಿವಿಧ ವರ್ಣವೈಭವದಿಂದ ಸಂಭ್ರಮಿಸುತ್ತಾ ನಳನಳಿಸುತ್ತಿರುವ ಶಬ್ದ ಚಿತ್ರಗಳನ್ನು ಸೊಗಸಾಗಿ ಕಟ್ಟಿಕೊಡುತ್ತದೆ, ಹಾಗೆಯೇ ದಿವ್ಯ ಚೇತನವನ್ನು ತನ್ನ ಗರ್ಭದಲ್ಲಿ ತಳೆದಿದ್ದ ದೇವಕಿ ಕೂಡಾ ಅಸಾಧಾರಣ ಸೌಂದರ್ಯದಿಂದ "ಭವ್ಯಪರಿವರ್ತನ" ಹೊಂದಿ, ಆ ಗಂಭೀರ ಸೌಂದರ್ಯದಿಂದ ವಸುದೇವನಿಗೇ ಆಶ್ಚರ್ಯವಾಯಿತಂತೆ: "...ತಣಿವೆರೆವ ಮೌನವೀಧ್ಯಾನವೀ ಗಾಂಭೀರ್ಯವೀ ಪ್ರಸನ್ನತೆಗ। ಳೆಲ್ಲಿಂ ಸಂದವೆಂದಾ ಕ್ಷೀರೋದಕಲ್ಪೆಯನು ಸಂಭಾವಿಸುತ। ಆ ಕಲ್ಯಾಣ ಗರ್ಭೆಯೊಳು ಭವಸಂತರಣನುದಯವನು...." ಊಹಿಸಿದನಂತೆ ವಸುದೇವ. ಕ್ಷೀರೋದಕಲ್ಪೆ, ಕಲ್ಯಾಣಗರ್ಭೆ, ಭವಸಂತರಣ, ಈ ಪದಪುಂಜಗಳಲ್ಲಿ ಅದೆಷ್ಟು ವಿಶಾಲ ಅರ್ಥವನ್ನಡಗಿಸಿದ್ದಾರೆ ಪು.ತಿ.ನ.!

ಶ್ರೀಕೃಷ್ಣನ ಅವತಾರದ ಹಿನ್ನೆಲೆಯಾಗಿ, ಭೂಮಿಗಿಳಿಯುವ ಆ ಚೈತನ್ಯವನ್ನು ಸ್ವಾಗತಿಸಲೆಂಬಂತೆ, ಪೃಥ್ವಿಯ ಸೌಂದರ್ಯ ಸಮೃದ್ಧಿಗಳು ಇಮ್ಮಡಿಸುವುದನ್ನು ಚಿತ್ರಿಸಿದಂತೆಯೇ. ಪು.ತಿ.ನ. ಕಂಸನಂತಹ ನಿರಂಕುಶ ಪ್ರಭುಗಳ ಕ್ರೌರ್ಯವೂ, ಅದನ್ನು ಸಹಿಸುತ್ತಿರುವ ಪ್ರಜಾಸಮಷ್ಟಿಯ ಅಸಹಾಯಕತೆ, ಹೇಡಿತನಗಳು ಗರಿಷ್ಠಮಿತಿಯನ್ನು ಮುಟ್ಟಿರುವುದನ್ನೂ ಚಿತ್ರಿಸುತ್ತಾರೆ, ಪು.ತಿ.ನ ಅವರ ದೃಷ್ಟಿಯಲ್ಲಿ, ಭಗವದವತಾರಕ್ಕೆ ಇದು ಸೂಕ್ತ ಸಮಯ. ಹಿಂದೆಯೇ ತಿಳಿಸಿರುವಂತೆ "...ರಸಾಸ್ತಿಕ್ಯಕ್ಕೆ ಧಕ್ಕೆ ಬಂದಾಗ, ಮನುಷ್ಯ ನರಳುತ್ತಾನೆ, ಕೆರಳುತ್ತಾನೆ. ಇದು ತೀರಾ ಮಸುಳಿಸಿದಾಗ ಧರ್ಮಗ್ಲಾನಿ ಯುಂಟಾಗಿ ತಿರೆ ಮೊರೆಯಿಡುತ್ತದೆ. ಅಂಥ ಅವತಾರದಲ್ಲಿ ಜಡಜಾಗ್ರದ್ರಸಾವಸ್ಥೆಗಳನ್ನು ಸಮಗ್ರವಾಗಿ ಆಕ್ರಮಿಸಿ ನಿಂತಿರುವ ಪುರುಷೋತ್ತಮನ ದರ್ಶನ ಜಗಕ್ಕೆ ದೊರೆಯುತ್ತದೆ..." ({ಋತ-ಸತ್ಯ-ರಸ} ಲೇಖನದಲ್ಲಿ ಪು.ತಿ.ನ ಪುಟ.೪೯೧ ಪು.ತಿ.ನ ಸಮಗ್ರ ಗದ್ಯ) ... ಶ್ರೀಕೃಷ್ಣ ಅಂತಹ ಅವತಾರ ತಳೆದ ಪುರುಷೋತ್ತಮ ಎಂಬುದು ಅವರ ಚಿಂತನೆ.

# ಸದವತಾರಂ

ಯಶೋದಾಮಾತೆ ಆಡಿಸಿ ಬೆಳೆಸಿದ, ಜಗದೋದ್ಧಾರ, ಜಗತ್ಕಾರಣನನ್ನು ತನ್ನ ಗರ್ಭದೊಳಗೆ ಬೆಳೆಸಿದ ದೇವಕಿ ಮಾತೆಯನ್ನು, ಮುನಿಗಣಗಳು, ದೇವಗಣಗಳು, ಹಗಲಿರುಳು ಸ್ತುತಿಸುತ್ತಿರುವುದನ್ನು ವಿವರಿಸಿ, ಪು.ತಿ.ನ. ಆ ಸ್ತುತಿಯಲ್ಲಿ ತಮ್ಮ ನಮನಗಳನ್ನೂ ಸಲ್ಲಿಸುತ್ತಾರೆ. ಇಂತಹ ಸದವತಾರನಾದ ಕೃಷ್ಣೋದಯದ ಹರ್ಷವನ್ನು ಈ ವಿಭಾವರಿ, ಹೇಗೆ ತಳೆದಳೆಂಬುದನ್ನು ಸೂರ್ಯೋದಯ, ಪ್ರತ್ಯಕ್ ಸಂಧ್ಯೋದಯ, ಚಂದ್ರೋದಯ ಮುಂತಾದ ಪ್ರಾಕೃತಿಕ ವಿದ್ಯಮಾನಗಳ ವರ್ಣಚಿತ್ರದಂತಹ ವಿವರಗಳು ಮನಸೂರೆಗೊಳ್ಳುವಂತೆಯೇ, ಮಂತ್ರಮುಗ್ಧರನ್ನಾಗಿಸುತ್ತವೆ: "ಹಕ್ಕಿಗಳ ಕೊರಲಸೆರೆಯಿಂಬಿಡಿಸಿ ತೆರತೆರದಿಂಚರದ ಪುಷ್ಪಾಂಜಲಿಯ ಕೊಳ್ಳುತ ರಾಗದಿಂ । ದೈತರುವ ಪೂರ್ವ ಸಂಧ್ಯೋದಯ; ನೀಲಾಕಾಶದೊಳು ತಮಂ।ತಂಗುತ ತಿಳಿಯೆ, ರೂಪಂ ತಳೆಯೆ ಜಗದಿವೆಲ್ಲವು, ಸ್ವಾಪಭ್ರೂಣ । ಸ್ವಪ್ನಶೈಶವ ಮನಂ ಜಾಗ್ರತ್ತಾರುಣ್ಯ ವಿಷಯ ಗಾರ್ಹಸ್ಥ್ಯ । ವಂ ಪೊಂದುವೊಲಾಗೆ ಕರುಣಿಸುತ, ಮಲೆಯಿಂದ ಮಂಜಿನ ಪಾದ್ಯವಂ । ತರುವೀವರ್ಘ್ಯವಂ ಶಾದ್ವಲದ ಪುಲ್ಮೊನೆ ಹನಿಗಳಾಚಮನೀಯ । ವಂ ವನಗಳ ಗಂಧವಂ ಸರಸಿಗಳ ತೆರೆನಗೆಯ ನೀರಾಜನಗಳಂ । ಸ್ವೀಕರಿಸುತಂ ಭೋಜಗಳನರಳಿಸುತ ಸುವರ್ಣಾಭಿಷೇಕದಿಂ । ಚರಾಚರವಂ ಪ್ರತಿಪೂಜಿಸುತ ಬಿಜಯಂಗೈವ ಸೂರ್ಯೋದಯಂ...." ಪೂರ್ವ ಸಂಧ್ಯೋದಯದಲ್ಲಿ ಹಕ್ಕಿಗಳ ಕೊರಲಸೆರೆ ಬಿಡಿಸುತ್ತ ರಾಗದಿಂದ ಬರುವ ಸೂರ್ಯ ಹೊತ್ತೇರಿದಂತೆ, ಗೃಹಸ್ಥನಾದನೆಂಬಂತೆ, ಭುವಿಗಿಳಿದು ಬರುತ್ತಿರುವ ಭವ್ಯ ಅತಿಥಿಯಂತೆ ಪ್ರಕೃತಿಯಿಂದ ಪೂಜಿಸಲ್ಪಡುತ್ತಾನೆ. ಬೆಟ್ಟಗಳ ಮಂಜಿನ ಪಾದ್ಯ , ಮರಗಳ ಅರ್ಘ್ಯ, ಹುಲ್ಲುಮೊನೆಯ ಮೇಲಿನ ಮುತ್ತಿನ ಹನಿಗಳ ಆಚಮನೀಯ, ವನಗಳ ಗಂಧ, ಸರೋವರಗಳ ತೆರೆಗಳ ನಗೆ ನೀರಾಜನಗಳನ್ನು ಸ್ವೀಕರಿಸುತ್ತಾ ಬರುವ ಈ ಭವ್ಯ ಅತಿಥಿ ಸೂರ್ಯದೇವ ತಾನೂ ಬರಿಗೈಲಿ ಬರುವುದಿಲ್ಲವಂತೆ! ತನ್ನ ಹೊನ್ನ ಬೆಳಕಿನ ಅಭಿಷೇಕದಿಂದ ಚರಾಚರವನ್ನು "ಪ್ರತಿಪೂಜಿಸುತ್ತ ಬಿಜಯಂಗೈಯ್ಯು" ತ್ತಾನಂತೆ. ಈ ಭವ್ಯ ಕಲ್ಪನೆಯಲ್ಲಿ, ಸೃಷ್ಟಿಯಲ್ಲಿ ಅಂತರ್ಗತವಾಗಿರುವ, ಕೊಡುಕೊಳ್ಳುವಿಕೆ–

ಯಿಂದ, ಸಾಧಿತವಾಗಿರುವ ಸಾಮರಸ್ಯದ ಮಹತ್ತಿನ ಅರಿವಾಗುತ್ತದೆ. ಆ ಸೂರ್ಯದೇವ ಈ ಚರಾಚರದಿಂದ ಪೂಜಿತನಾದರೂ, ಪೃಥ್ವಿಯ ವಸ್ತು ವಿಶೇಷಗಳ ಬಗೆಗೆ ಒಂದಿಷ್ಟೂ ಅಲ್ಪ ಭಾವನೆಯಿಲ್ಲ, ಬದಲಿಗೆ "ಪ್ರತಿಪೂಜಿಸುತ್ತಾ" ಬರುತ್ತಾನೆ. ಚರಾಚರವನ್ನು ತನ್ನ ಸುವರ್ಣಾಭಿಷೇಕದಿಂದ ಪ್ರತಿಪೂಜಿಸುತ್ತ ಬರುವ ಕಲ್ಪನೆ ರೋಮಾಂಚನಗೊಳಿಸುತ್ತದೆ. ಬೇರೆ ಎಲ್ಲಿಯೂ ಈ ಕಲ್ಪನೆಯನ್ನು ಓದಿರುವ ನೆನಪಿಲ್ಲ ನನಗೆ. "ಲಸ್ಟ್ ಫಾರ್ ಲೈಫ್" (ಇರ್ವಿಂಗ್ ಸ್ಟೋನ್) ನಲ್ಲಿ ಬರುವ ಈ ಪದಗುಚ್ಛವನ್ನು ನೆನಪಿಸುತ್ತದೆ ಈ ಕಲ್ಪನೆ, "ರೆಸಿಪ್ರೋಕಲ್ ಹಾರ್ಮೋನಿ ಆಫ್ ದಿ ಯೂನಿವರ್ಸ್." ಪು.ತಿ.ನ. ಅವರ ವರ್ಣನೆಯಲ್ಲಿ" ಪ್ರತಿ ಪೂಜಿಸುತ ಎನ್ನುವ ಪದ ಅತ್ಯಂತ ಮಹತ್ವದ್ದಾಗುತ್ತದೆ. ಪ್ರತಿನಿತ್ಯದ ಪ್ರಾಕೃತಿಕ ವಿದ್ಯಮಾನಗಳೇ ಇಷ್ಟೊಂದು ಸೌಂದರ್ಯರಸ ಸೂಸುತ್ತಿದ್ದರೆ, ಕೃಷ್ಣೋದಯದ ಇರುಳಿನ ಸೌಂದರ್ಯವನ್ನು, ರಸದ ಹರಿವನ್ನು ಹೇಗೆ ಬಣ್ಣಿಸಬಹುದು? ಆ ಜನಾರ್ದನ ಜನಿಸಿದ ಮುಹೂರ್ತ, "ಸರ್ವರ್ತು ಸಂಗಮ ಸುಭಗವಾದುದು". ಆ ಗೋಪಾಲ ಜನಿಸಿದಾಗ "ಗೊಟ್ಟಿಯೊಳು ಆಕಳ ಹಾಲು ಕೋಡಿವರಿದು ಪ್ರೀತಿಗಿಂಬಾಯ್ತಖಿಲ ಚಿತ್ತಂ" ಎನ್ನುತ್ತಾರೆ ಪು.ತಿ.ನ. ಆ ಕತ್ತಲ ಸೆರೆಮನೆಯ ಪರ್ಯಂಕದಲ್ಲಿ "ಜಗದೋದ್ಧಾರನಾವಿರ್ಭವಿಸಿ"ದಾಗ ಪು.ತಿ.ನ. ಅವರ ರಸಚೇತನ ಕಂಡ ಆ ದಿವ್ಯ ಶಿಶುವಿನ ಸತ್ ಸ್ವರೂಪ ಹೀಗಿದೆ: "ಕತ್ತಲೊಳು ರವಿಕಿರಣ ಸೋಂಕಿದ ದಿವ್ಯ ನೀಲದ ಮಣಿಯ ಕಾಂತಿಯ । ಕೆದರುತಲಿದ್ದಕಿದ್ದೊಲೆ ತೋರಿ ಕಂಗಳ ಕೊಳುವ ದಿವ್ಯ ಶಿಶು" ಅದು. ದಿನ ತುಂಬುವ ಮೊದಲೆ "ತಾನಳದೆ ಬಂದ ಪ್ರಿಯಾತಿಥಿ". ಆವಿರ್ಭವಿಸಿ ದೊಡನೆಯೇ ಶಂಖಚಕ್ರಗದಾಯುಧ, ಚತುರ್ಬಾಹುಗಳಿಂದೊಡಗೂಡಿ, ದಿವ್ಯಾಲಂಕಾರ ಶೋಭಿತನಾದ ಪರಮ ಮಂಗಳ ಮೂರ್ತಿಯ ದರ್ಶನ ನೀಡಿದವ ಹೆತ್ತವರಿಗೆ. ಆ ದಿವ್ಯಶಿಶುವನ್ನು ನೋಡುತ್ತಾ, ವಸುದೇವನ ಮನಸ್ಸಿನಲ್ಲಿ, ಹೇಗಾದರೂ ಮಾಡಿ ಈ ಶಿಶುವನ್ನು ಕಾಪಾಡಬೇಕೆಂಬ ಪ್ರಬಲ ಇಚ್ಛೆ ಮೂಡಿ, ಕಂಸನಿಗೆ ಕೊಟ್ಟಿದ್ದ ವಚನದ ಶೃಂಖಲೆ ಶಿಥಿಲವಾಗುತ್ತದೆ. ವರುಣನ ವರ್ಷಾಧಾರೆಯೇ ದೈವಸಂಕಲ್ಪದ ಕೃಪೆಯಾಗುತ್ತದೆ. ವಸುದೇವ ಶಿಶುವನ್ನು ನಂದಗೋಪನ ಮನೆಗೆ ಬಿಟ್ಟುಬರಲು ನಿಶ್ಚಯಿಸುತ್ತಾನೆ.

ಸೆರೆಯಿಂದ ವಸುದೇವ ಹೊರಕ್ಕೆ ಬಂದುದು ಹೇಗೆ? ಸೆರೆಯ ಬಾಗಿಲುಗಳು ತಂತಾನೆ ತೆರೆದುಕೊಂಡವು ಎಂಬ ಐತಿಹ್ಯವನ್ನು ಪು.ತಿ.ನ. ಉಪಯೋಗಿಸಿಕೊಂಡಿಲ್ಲ. ಮಳೆಯಿಂದಾಗಿ ಜೀವನವೆಲ್ಲಾ "ಬಾಹ್ಯಶೂನ್ಯಂ, ಗೃಹಶರಣ್ಯಂ, ನಿದ್ರಾಜಡಂ" ಆಗಿರಲು, "ಒಲವೀವ ಚಾತುರಿಯೊಳೆಂತೆಯೊ ಸೆರೆಗಳೆದು ಹೊರ" ಬರುತ್ತಾನೆ ವಸುದೇವ. ಯಮುನಾನದಿ ವಸುದೇವನ ನಡೆಗೆ ಸಹಕರಿಸುತ್ತಾಳೆ. ಮಳೆಯಲ್ಲಿ ಶಿಶು ತೊಯ್ಯುವುದೆಂದು, ಆದಿಶೇಷ ಹೆಡೆಬಿಚ್ಚಿಕೊಡೆ ಹಿಡಿಯುತ್ತಾನೆ. ಶಿಶುವನ್ನು ಹೊತ್ತುನಡೆಯುತ್ತಿರುವ ವಸುದೇವನನ್ನು, "ನಡೆದನಾಗಮ ಶಾಸ್ತ್ರ ರಕ್ಷೆಯಾಳಧ್ಯಾತ್ಮ ನಡೆವಂತೆ ವಸುದೇವ" ಎಂದು ಬಣ್ಣಿಸುತ್ತಾರೆ ಪು.ತಿ.ನ., ಗೋಕುಲಕ್ಕೆ ಬಂದ ವಸುದೇವ,

ನಂದಗೋಪನ ಪತ್ನಿ ಯಶೋದೆ ಆಗತಾನೇ ಹಡೆದಿದ್ದ ಹೆಣ್ಣು ಶಿಶುವಿನ ಜಾಗದಲ್ಲಿ, ತನ್ನ ಶಿಶುವನ್ನು ಮಲಗಿಸಿ, ಆ ಹೆಣ್ಣು ಕೂಸನ್ನು ತಂದು ದೇವಕಿಯ ಪಕ್ಕದಲ್ಲಿ ಮಲಗಿಸುತ್ತಾನೆ, ವಸುದೇವನ ಮನದಲ್ಲಿ ತನ್ನ ಮಗುವನ್ನು ಉಳಿಸಿಕೊಳ್ಳುವ ಇಚ್ಛೆ ಮಾತ್ರವಿತ್ತೆ ಅಥವಾ ಹೆಣ್ಣು ಶಿಶುವಾದರೆ ಕಂಸ ದಯೆ ತೋರಬಹುದೆಂಬ ಆಸೆಯಿದ್ದೀತೆ? ತನ್ನ ಹೆಣ್ಣು ಕೂಸನ್ನಾದರೂ ಕೊಲ್ಲದಿರುವಂತೆ ಬೇಡಿದ ದೇವಕಿಯ ಆಕ್ರಂದನಕ್ಕೆ, ಪ್ರಾಣಭಯ ಪೀಡಿತನಾದ ಕಂಸನದೊಂದೇ ಪ್ರತಿಕ್ರಿಯೆ. "ದೇವಕಿಯ ತೆಕ್ಕೆಯಿಂ ಸೆಳೆದಗಸ ವಸ್ತ್ರವನೊಗೆವತೆರ" ಶಿಶುವನ್ನು ಹಿಡಿದು ಅಪ್ಪಳಿಸಲು ಹವಣಿಸುತ್ತಾನೆ. ಆದರೆ ಆ ಮಾಯಾಶಿಶು, ಅವನ ಕೈಯಿಂದ ನುಸುಳಿಕೊಂಡು, ಬಾನಿಗೆ ನೆಗೆದು, ಮಿಂಚು ಮೈಯನ್ನು ತೋರುತ್ತ ಆಗಸದಿಂದ ನುಡಿಯುತ್ತದೆ. ಈ ಪ್ರತ್ಯಕ್ಷ ಆಕಾಶವಾಣಿ ಕಂಸನ ಮನಸ್ಸಿನ ಭಯ ತಳಮಳಗಳನ್ನು ಮತ್ತಷ್ಟು ಹೆಚ್ಚಿಸುತ್ತದೆ ಹಾಗೂ ಅವನ ಕ್ರೌರ್ಯ, ಸೆರೆಮನೆಯ ಆಚೆಗೂ ಹಬ್ಬುವುದಕ್ಕೆ ಪ್ರಚೋದನೆ ನೀಡುತ್ತದೆ. "ಬಳೆಯುತಿಹನೆತ್ತಲೋ ನಿನ್ನಂತಕಂ, ಬರಿದೆಯೆ ಬಂಧುಗಳ ಬಲು ಬಳಲಿಸಿದೆ." ಕಂಸ ದಿಗ್ಭ್ರಾಂತನಾಗುತ್ತಾನೆ. ದೇವಕಿ–ವಸುದೇವರ ಕ್ಷಮೆ ಕೇಳಿ ಅವರನ್ನು ಸೆರೆಯಿಂದ ವಿಮುಕ್ತಿಗೊಳಿಸುತ್ತಾನೆ ನಿಜ. ಆದರೆ ಅದರ ಪರಿಣಾಮ? ಇದೆ 'ಉಲ್ಲಾಸಂ'ನ ಕಡೆಯ ಎರಡು ಸಾಲುಗಳಲ್ಲಿ, ಕಂಸನ ಕ್ರೌರ್ಯ, ಭಯಗಳು ವೈಯಕ್ತಿಕ ಪರಿಧಿಯನ್ನು ಸೆರೆಮನೆಯಲ್ಲಿದ್ದ ವಸುದೇವ ದೇವಕಿಯರ ಶಿಶುಗಳಿಗೆ ಮಾತ್ರ ಸಿಮೀತವಾಗಿದ್ದ ಹಂತವನ್ನು ದಾಟಿ ಸರ್ವತ್ರ ಹರಡಿ ಹರಿದುದನ್ನು ತಿಳಿಸುತ್ತಾರೆ, "ಅಂದವನ ಭಯ ಕಾರಾವಾಸವನು ತೊರೆದು ನಾಡಾಡಿಯಾದುದು। ಕ್ರೌರ್ಯವವನದು ತೇಜದೊಳೆಸೆವ ಹಸುಳೆಗಳ ಬಳಿಯರಸೆ ಹೋದುದು" ಇದುವರೆಗೂ ಕಂಸನಿಗೆ ತನ್ನ ಮರಣಕ್ಕೆ ಕಾರಣವಾಗಬಹುದಾದ ಶಿಶುವಿನ ಹುಟ್ಟಿನ ಬಗೆಗೆ ಖಚಿತ ಮಾಹಿತಿಯಿತ್ತು. ಹಾಗಾಗಿ ಅವನ ಭಯ ಕ್ರೌರ್ಯಗಳು ಸೆರೆಮನೆಯಲ್ಲಿ ಜನಿಸುವ ತನ್ನ ತಂಗಿಯ ಮಕ್ಕಳ ಬಗೆಗೆ ಮಾತ್ರ ಕೇಂದ್ರೀಕರಿಸಿದ್ದವು, ಆದರೆ ಅವನ ಮರಣಕ್ಕೆ ಕಾರಣವಾಗುವ ಶಿಶುವು ಬೇರೆಕಡೆ ಬೆಳೆಯುತ್ತಿದೆಯೆಂಬ ಮಾಹಿತಿಯೂ, ಆ ಮಾಹಿತಿ ನೀಡಿದ್ದ ಹೆಣ್ಣುಶಿಶು ಕಾರಣಿಕ ಶಿಶುವಿನಂತೆ ಭವಿಷ್ಯ ಹೇಳಿ, ಗಗನದಲ್ಲಿ ಮಾಯಾವಾಗುವುದೂ ಕಂಸನನ್ನು ಭಯಭೀತನನ್ನಾಗಿಸುತ್ತದೆ. ಈ ಭೀತಿಗೆ ಕಾರಣ ತನಗೆ ಕಾದಿರುವ ಅಪಾಯದ ಅವ್ಯಕ್ತತೆ, ಅನಿರ್ದಿಷ್ಟತೆ, ಭಯಕಾರಣದ ಶಿಶು, ಬೇರೆಡೆ ಎಲ್ಲೋ ಬೆಳೆಯುತ್ತದೆ, ಎಲ್ಲಿ ಯಾರ ಬಳಿ, ಹೇಗೆ ಎಂಬುದರ ಅರಿವಿಲ್ಲ. ಇದು ಕಂಸನ ಕ್ರೌರ್ಯವು ಸುತ್ತಮುತ್ತಲ ಎಲ್ಲ ಶಿಶುಗಳ ಮೇಲೂ ಹರಿಹಾಯುವಂತೆ ಮಾಡಿ ಅದನ್ನು ಸರ್ವವ್ಯಾಪಿಯಾಗಿಸುತ್ತದೆ. ಆ ಕ್ರೌರ್ಯ ನಾಡಾಡಿಯಾಗುತ್ತದೆ. ತೇಜಸ್ವಿ ಹಸುಳೆಗಳನ್ನೆಲ್ಲಾ ಅವನ ಕ್ರೌರ್ಯ ಅರಸಿ ಹೋಗುತ್ತದೆ ಎಂದು, ಹಸುಳೆಗಳನ್ನು ಕೊಲ್ಲಲು, ಪೂತನಿ, ಶಕಟ, ಮುಷ್ಟಿ ಮುಂತಾದ ರಕ್ಕಸರನ್ನು ಕಳಿಸುವ ಕಂಸನ ಮನಸ್ಸನ್ನು ಪು.ತಿ.ನ. ವಿಶ್ಲೇಷಿಸುತ್ತಾರೆ.

# ಗೋಕುಲ ಗಮನಂ ಮತ್ತು ವ್ರಜ ಗಮನಂ

ಸೆರೆಯಿಂದ ಬಿಡುಗಡೆ ಹೊಂದಿದ ವಸುದೇವ ತನ್ನ ಗೆಳೆಯ ನಂದಗೋಪನಿರುವ ಗೋಕುಲಕ್ಕೆ ಹೋಗಿ, ಅಲ್ಲಿ ನಂದಗೋಪನ ಮನೆಯಲ್ಲಿ, ತನ್ನ ಮಗುವಿಗೆ ನಡೆಯುತ್ತಿರುವ ಉತ್ಸವದ ಸಂಭ್ರಮವನ್ನು ಕಂಡು ಹರ್ಷಿಸುತ್ತಾನೆ. ನಂದಗೋಪನಿಗೆ ಗಂಡುಮಗು ಜನಿಸಿರುವ ಸಂಗತಿಯು ಕಂಸನ ಕುತೂಹಲವನ್ನು ಕೆರಳಿಸುವ ಮುನ್ನವೇ ಅವರು ಗೋಕುಲವನ್ನು ಬಿಟ್ಟು ಬೇರೆಕಡೆಗೆ ಹೋಗುವುದು ಕ್ಷೇಮವೆಂದು ವಸುದೇವ ನಂದಗೋಪನನ್ನು ಎಚ್ಚರಿಸಿ ಬರುವ ಸನ್ನಿವೇಶ 'ಗೋಕುಲ ಗಮನಂ'ನಲ್ಲಿ ವಿವರಿಸಲ್ಪಟ್ಟಿದೆ. ನಂದಗೋಪ ಮೊದಲಾದ ಗೋಪಾಲಕರೆಲ್ಲರೂ, ತಮ್ಮ ಗ್ರಾಮ ಗೋಕುಲವನ್ನು ತೊರೆದು ವ್ರಜದೇಶದ ಬೃಂದಾವನಕ್ಕೆ ಹೊರಡುವ ಸನ್ನಿವೇಶವನ್ನು ವ್ರಜಗಮನಂ ಚಿತ್ರಿಸುತ್ತದೆ. ಗ್ರಾಮಸ್ಥರ ನಿರ್ಧಾರಕ್ಕೆ ಹಲವು ಕಾರಣಗಳಿರುತ್ತವೆ. ಸಮರ್ಪಕವಾದ ಮೇವಿರದೆ ದನಗಳು ಬಡವಾಗುತ್ತಿದ್ದವು, ಕಟ್ಟಿಗೆ, ಸೊಪ್ಪು, ತರಕಾರಿಗಳಿಗೆಲ್ಲಾ ಬೆಲೆತೆರಬೇಕಾಗಿದ್ದು 'ಹಳ್ಳಿಗೆ ಹಳ್ಳಿಯೂ ಅಲ್ಲ, ಪಟ್ಟಣಕ್ಕೆ ಪಟ್ಟಣವೂ ಅಲ್ಲ'ವೆನ್ನುವಂತಿದ್ದ ಗೋಕುಲದ ಪರಿಸ್ಥಿತಿ ಗ್ರಾಮಸ್ಥರನ್ನು ಬೇರೆ ಹಳ್ಳಿಗೆ ವಲಸೆ ಹೋಗುವಂತೆ ಒತ್ತಾಯಿಸುತ್ತಿತ್ತು, ಆಕಳುಗಳಂತೂ ತಮ್ಮದೆ ಸಗಣಿ, ತಮ್ಮದೆ ಗಂಜಲದ ರಸದೊಳಗೆ ಬೆಳೆದ ಕಾಳುಕಡ್ಡಿಗಳುಂಡು ಹದಗೆಟ್ಟು ಹೋಗಿರುತ್ತವೆ. ಇದರ ಜೊತೆಗೆ ತೋಳಗಳ ಕಾಟದಿಂದಾಗಿ ದನಕರುಗಳ ರಕ್ಷಣೆ ಕಷ್ಟವಾಗುತ್ತದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಕ್ರೂರಿ ಕಂಸನ ಪ್ರಭುತ್ವದ ಮಧುರೆಯ ಸಾಮೀಪ್ಯ ಗ್ರಾಮಸ್ಥರ ಮನಸ್ಸಿನಲ್ಲಿ ಭಯ ಆತಂಕಗಳ ಬೀಜಗಳನ್ನು ಬಿತ್ತುತ್ತವೆ, ಇದರ ಜೊತೆಗೆ ಬಾಲಕ ಕೃಷ್ಣನ ಮೇಲೆ ಬಂದೆರಗುತ್ತಿರುವ ಕೇಡಿನ ಸರಣಿ ಗ್ರಾಮಸ್ಥರನ್ನು ಬೆಚ್ಚಿಸುತ್ತದೆ ಹಾಗೂ ಅವರನ್ನು ತಮ್ಮ ವಾಸಸ್ಥಾನವನ್ನು ಬದಲಿಸುವಂತೆ ಪ್ರಚೋದಿಸುತ್ತದೆ.

ಗೋಕುಲದಲ್ಲಿ ಅಂದು ನಡೆಯಿತೆನ್ನಲಾದ ಗ್ರಾಮಸ್ಥರ ವಾಸಸ್ಥಳ ಬದಲಾವಣೆ ಮತ್ತದರ ಕಾರಣಗಳು ವಿವಿಧ ದೇಶ, ಕಾಲಗಳಲ್ಲಿ ಇಂದೂ ಪ್ರಸ್ತುತವಾಗುತ್ತದೆ, ಹಾಗೆ

ಗೋಕುಲದಿಂದ ಬೃಂದಾವನಕ್ಕೆ ಗ್ರಾಮಸ್ಥರ ವಲಸೆ, ಬೃಂದಾವನದಿಂದ ಕೃಷ್ಣ ಬಲರಾಮರು ಮಧುರೆಗೆ ಹೋಗುವುದು, ಮಧುರೆಯಲ್ಲಿ ಜನಿಸಿದ ಅರಸು ಕುವರ ಕೃಷ್ಣ, ಗೋಕುಲದ ಗೋಪಾಲಕರ ಮನೆಯಲ್ಲಿ ಬೆಳೆಯುವುದು, ಕಾಡುಮೇಡುಗಳಲ್ಲಿ, ಕೊಳಲೂದುತ್ತಾ, ದನಕಾಯುತ್ತಾ ಗೆಳೆಯರೊಡನೆ, ಗೋಪಿಯರೊಡನೆ ಹರ್ಷಚಿತ್ತನಾಗಿರುವುದು ಇಂತಹ ಹಲವಾರು ಘಟನೆಗಳು ಶ್ರೀಕೃಷ್ಣಚರಿತೆಯಲ್ಲಿದ್ದು ಇವು ನಗರ ನಾಗರೀಕತೆ ಸಂಸ್ಕೃತಿಗಳು, ಗ್ರಾಮೀಣ ನಾಗರೀಕತೆ ಸಂಸ್ಕೃತಿಗಳು ಪರಸ್ಪರ ಪ್ರತಿಕ್ರಿಯಿಸುವ ಪ್ರಭಾವಿಸುವ ಪ್ರಕ್ರಿಯೆಯ ಮೇಲೆ ಬೆಳಕು ಚೆಲ್ಲುತ್ತವೆ.

ಯಶೋದೆಯ ಕಂದನೆನಿಸಿದ ಶ್ರೀಕೃಷ್ಣನ ಲೀಲಾವಿನೋದಗಳ ಹಾಗೂ ಆ ಶಿಶುವನ್ನು ಸಂಹರಿಸಲು ಕಂಸ ಕಳುಹಿಸಿದ್ದ ದುಷ್ಟ ಶಕ್ತಿಗಳನ್ನು ಕೃಷ್ಣ ನಾಶಮಾಡಿದ ಘಟನೆಗಳ ಚಿತ್ರಣಕ್ಕೆ 'ವ್ರಜಗಮನಂ' ಮೀಸಲಾಗಿದೆ.

ಕೃಷ್ಣನ ಲೀಲಾವಿನೋದವನ್ನು ಆನಂದಿಸಿ ಅನುಭವಿಸುವಲ್ಲಿ, ಗೋಪಿಯರ ಇಡಿಯ ಸಮೂಹವೇ ಒಂದಾಗಿ ನಿಲ್ಲುವ ಚಿತ್ರವನ್ನಿಲ್ಲಿ ಕಾಣುತ್ತೇವೆ. ಪು.ತಿ.ನ. ಅವರ ದೃಷ್ಟಿಯಲ್ಲಿ ಕೃಷ್ಣನು ತಾನು ಅವತರಿಸಿದಂದಿನಿಂದ ಭಾರತದ ಸಮಸ್ತ ಶಿಶುಗಳಿಗೆ ದಿವ್ಯಕಳೆ ದೈವಭಾವಗಳನ್ನು ನೀಡಿದ ಚೇತನ... "ಗೋಕುಲದೊಳಗೆ ತನ್ನ ಲೀಲಾ । ಚೇಷ್ಟಿತಗಳಿಂದನ್ನಿಂ ಮುನ್ನ ಭಾರತದ ಶಿಶುಗಳ್ಗೊಡಗೆ ದಿವ್ಯಕಳೆ ದೈವಭಾವಂ?।" ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ಬಾಲಕೃಷ್ಣನ ತುಂಟ, ಮುಗ್ಧ, ಲೀಲಾವಿನೋದಗಳು ಅಂದಿಗೂ, ಇಂದಿಗೂ ಜನಮಾನಸದ ಮನಸೂರೆಗೊಂಡು, ಇಂದು ಕೂಡಾ ಮನೆಮನೆಯಲ್ಲಿಯೂ ಮಕ್ಕಳ ಚೆಲುವಿನಲ್ಲಿ, ಮುಗ್ಧತೆಯಲ್ಲಿ, ತುಂಟಾಟದಲ್ಲಿ, ಕೃಷ್ಣನನ್ನು ಕಂಡು ಆನಂದಿಸುತ್ತಾರೆ. ಮಕ್ಕಳಿಗೆ ಅವನು ಧರಿಸಿದ್ದನೆಂದು ಹೇಳುವ ವೇಷತೊಡಿಸಿ, ನವಿಲುಗರಿಯನ್ನು ಮುಡಿಗೆ ಸಿಕ್ಕಿಸಿ ಕೈಗೆ ಕೊಳಲು ಕೊಟ್ಟು ನಲಿಯುತ್ತಾರೆ. ಬಾಲಕೃಷ್ಣನ ಲೀಲೆಯನ್ನು, ಪವಾಡಗಳನ್ನು ಕಥೆ ಕಟ್ಟಿ ಹಾಡುತ್ತಾರೆ, ನರ್ತಿಸುತ್ತಾರೆ. ಇಂತಹ ಕೃಷ್ಣ ಲೀಲೆಗಳನ್ನು ಅವನ ಪವಾಡ ಸದೃಶ ಸಾಹಸಗಳನ್ನು, ವರ್ಣಿಸುವಾಗ ಪು.ತಿ.ನ. ಅವರ ಮನಸ್ಸಿನಲ್ಲಿ ಮಾತೆಯ ಮಮತೆ, ಭಕ್ತನ ಅನನ್ಯ ಮಧುರಭಕ್ತಿ, ಆ ಶಿಶು ಸಾಹಸದ ಬಗೆಗೆ ಅಚ್ಚರಿ, ಆ ಶಿಶು ಪರಮಾತ್ಮನಲ್ಲದೆ ಬೇರೆಯಲ್ಲವೆಂಬ ಅಚಲ ನಂಬಿಕೆಗಳು ದಿವ್ಯವಾಗಿ ಹೊರಹೊಮ್ಮುತ್ತವೆ. ಚೇಷ್ಟೆ ಮಾಡುತ್ತಿದ್ದ ತುಂಟ ಶಿಶುವನ್ನು ಯಶೋದೆ ಒರಳು ಕಲ್ಲಿಗೆ ಕಟ್ಟಿ ಹಾಕಿದಾಗ ಆ ಶಿಶು ಒರಳುಕಲ್ಲನ್ನು ಹೀಗೆ ಎಳೆಯುತ್ತಿತ್ತಂತೆ "ಮಿಥ್ಯಾರೋದನದ ಪಲ್ಲವಿಗೆ ಕಾಲ್ಗೆಜ್ಜೆ, ನಡುವಿನ ಗೆಜ್ಜೆ।ಕಿಂಕಿಣಿಸುತಿರೆ, ಹೊಳೆಗಣ್ಣ ನೀರುರುಳಿ ರೇಖಿಸಿರೆ ಕೆನ್ನೆಯ । ತನ್ನನ್ನು ಕಟ್ಟಿದೊರಳಿನ ಕಲ್ಲನ್ನು ಎಳೆದುಕೊಂಡು ಹೋಗುತ್ತಾ, ಜನರಿರುವುದನ್ನು ಕಂಡಾಗ ಅತ್ತು, ಜನಕಾಣದಿದ್ದಾಗ ಸುಮ್ಮನಿದ್ದು, ಜನರು ನೋಡಿದರೆ ನಗುತ ಮರಳಿ ಅಳುತ್ತಾ, ಚೆಂಗೈಯೂರಿ, ಮಂಡಿಗಾಲಿಡುವ" ಆ ಮಾಯಕ ಶಿಶುವನ್ನು ಕಂಡ ಯಾರ ಮನಸ್ಸು ತಾನೇ ಮರುಳಾಗುವುದಿಲ್ಲ?

ನಳಕೂಬರರನ್ನು ವೃಕ್ಷರೂಪದಿಂದ ಮತ್ತೆ ಯಕ್ಷರನ್ನಾಗಿಸಿ ಶಾಪ ವಿಮೋಚನೆ ಮಾಡಿದರೂ, ತನ್ನ ಪಾಡಿಗೆ ತಾನಿದ್ದ "ಮುದ್ದಿನ ಹಸುಳೆ ಸಂತರ ಮೂರ್ತಿ" ಆ ಶಿಶು. ಇಂತಹ ಕೃಷ್ಣನಿಗೆ ಗೋಕುಲ, ಬೃಂದಾವನಗಳ ಗೋಪಿಯರೆಲ್ಲರೂ ಮಾತೆಯರಾಗುತ್ತಾರೆ. ಹಗ್ಗವನ್ನು ಬಿಚ್ಚಿ ಮಗುವನ್ನು ಎತ್ತಿಕೊಳ್ಳುವವಳೊಬ್ಬಳು, ಲಟಿಕೆ ಮುರಿದು ದೃಷ್ಟಿ ನಿವಾಳಿಸುವವಳೊಬ್ಬಳು, ಕಣ್ಣೊರಸಿ ಮುತ್ತಿಕ್ಕುವವಳೊಬ್ಬಳು, ಮಣ್ಣನ್ನು ನಿವಾಳಿಸುವವಳೊಬ್ಬಳು. ಇನ್ನು ಆ ಯಶೋದಾ ತಾಯಿಯಂತೂ "ಬದುಕಿದೆಯಾ ಕಂದಾ" ಎಂದು ಓಡೋಡಿ ಬರುತ್ತಾಳೆ. ಈ ಮಾಯಕದ ಶಿಶುಮಾತ್ರ ಏನೂ ಅರಿಯದಂತೆ ತನ್ನ ತಾಯ ಮಡಿಲಿನಲ್ಲಿ "....ಕೆನ್ನೆಯ । ನುಬ್ಬಿಸುತ್ತ ಹನಿವಿಡಿದ ಹೊಳೆವಿನ ಕಂಗಳಿಂ ತಾಯಮೊಗವನು । ನಿರುಕಿಸುತಲೆವೆಯಿಕ್ಕಿ ನಗುತಾ ಪವಡಿಸಿರು"ತ್ತದೆ. ಚಿತ್ರಕಾರರಿಗೆ ವಸ್ತುವಾಗುವಂತಹ, ಅದೆಷ್ಟು ವರ್ಣಮಯ ಶಬ್ದ ಚಿತ್ರಗಳಿವೆಯೋ ಪು.ತಿ.ನ. ಅವರ ಈ ಭಂಡಾರದಲ್ಲಿ! ಗೋಕುಲದ ಈ ದಿವ್ಯ ಶಿಶು ಕೇವಲ ಯಶೋದೆ ನಂದಗೋಪರ ಕಂದನಾಗಿ ಮಾತ್ರವಲ್ಲ ಇಡಿಯ ಸಮುದಾಯದ, ತಾಯಂದಿರ ಸ್ವತ್ತಾಗಿ ಬೆಳೆಯುತ್ತದೆ, ಕೃಷ್ಣನ ಬಾಲ್ಯದಲ್ಲಿ ಖಾಸಗಿ ಎಂಬುದಾಗಲೀ ತನಗೆ ಸೇರಿದ್ದು ಎಂಬ ಒಡೆತನದ ಸ್ವಾರ್ಥ ಭಾವನೆಯಾಗಲೀ ಇಲ್ಲ. ಹಾಲು, ಬೆಣ್ಣೆ, ಮೊಸರು ಕದಿಯಲೆಂದು ಗೋಪಿಯರ ಮನೆಗಳಿಗೆ ಲಗ್ಗೆ ಹಾಕಿದರೂ, ತನ್ನ ಗೆಳೆಯರ ಗುಂಪಿನೊಡನೆಯೇ ಅವನ ಈ ಲಗ್ಗೆ, ಹಾಗೆಯೇ ಅಲ್ಲಿ ದೊರೆಯುವ ವಸ್ತುಗಳ ಮೇಲೆ ಎಲ್ಲರಿಗೂ ಸಮಾನ ಹಕ್ಕು, ಎಲ್ಲವನ್ನೂ ಎಲ್ಲರೊಡನೆ ಹಂಚಿ ತಿನ್ನುವುದೇ ಅವನ ಧರ್ಮ. ಇದು ಬಾಲ್ಯದಿಂದಲೇ ಕೃಷ್ಣನಲ್ಲಿ ಸಿದ್ಧಿಸಿದ್ದ ಸಮಷ್ಟಿ ತತ್ವ ಎನ್ನಬಹುದು, ಅಥವಾ ಸಮಷ್ಟಿ ಪ್ರಜ್ಞೆ ಎಂದಾದರೂ ಕರೆಯಬಹುದು. ಪು.ತಿ.ನ. ಅವರು ವ್ಯಾಖ್ಯಾನಿಸಿರುವಂತಹ, ಕೃಷ್ಣನ ಕರ್ಮಯೋಗ ಸಿದ್ಧಾಂತದ ಸಾರವೂ ಕೂಡಾ, ಬೃಂದಾವನದಲ್ಲಿ ಕೃಷ್ಣನ ಬಾಲ್ಯ ಜೀವನದಲ್ಲಿಯೇ ಅಡಗಿದ್ದಿರಬಹುದು, ಕೃಷ್ಣನೊಡನೆ ಯಾವಾಗಲೂ ಗೋಪಾಲಕ ವೃಂದ, ಬಲರಾಮ ಇದ್ದು ಅವನ ಬಾಲ್ಯ ವ್ಯಷ್ಟಿ–ಸಮಷ್ಟಿಯ ಸಮರಸಕ್ಕೆ ನಿದರ್ಶನವಾಗುತ್ತದೆ. ಬೃಂದಾವನವನ್ನು ತೊರೆದು ಅಕ್ರೂರನೊಡನೆ, ಮಥುರೆಗೆ ಹೊರಡುವವರೆಗೂ, ಕೃಷ್ಣ ತನ್ನ ಸಮುದಾಯದ ಕಷ್ಟ ಸುಖಗಳಲ್ಲಿ ಒಂದಾಗಿ ಬಾಳಿದವನು. ಗೋಪಾಲಕರನ್ನು ಅಪಾಯಗಳಿಂದ ಕಾಪಾಡಿದವನು. ಗೋಪಾಲಕರು ಮತ್ತು ಗೋಪಿಯರಂತೆ, ತನ್ನ ಸಮುದಾಯದ ಹಿರಿಯರನ್ನೂ ಸಹ, ತನ್ನ ನಯ ವಿನಯದಿಂದ, ವೈಚಾರಿಕತೆಯಿಂದ, ತನ್ನ ನಂಬಿಕೆಯ ತೆಕ್ಕೆಗೆ ತೆಗೆದುಕೊಂಡು, ತನ್ನ ಭರವಸೆ ಹುಸಿಯಲ್ಲವೆಂದು ಸಿದ್ಧಪಡಿಸಿದುದನ್ನು ಗೋವರ್ಧನೋದ್ಧರಣದ ಪ್ರಸಂಗದಲ್ಲಿ ಕಾಣುತ್ತೇವೆ. ಮಥುರೆಗೆ ಬಂದ ನಂತರ ಕಂಸನ ದುರಾಡಳಿತ, ಅವನಿಗೆ ಜೊತೆಯಾಗಿರುತ್ತಿದ್ದ ಜರಾಸಂಧ, ಶಿಶುಪಾಲರಂತಹ ಅಹಂನ ಮದವೇರಿದವರನ್ನು ಕಂಡು, ಕೃಷ್ಣನಲ್ಲಿ ಸಮಷ್ಟಿ ಪ್ರಜ್ಞೆಯ ಜೊತೆಗೇ ಮುತ್ಸದ್ದಿತನ, ರಾಜಕೀಯದ ಒಳಸುಳಿಗಳ ಗ್ರಹಿಕೆ ಸಿದ್ಧಿಸಿ, ಕೃಷ್ಣನ ವ್ಯಕ್ತಿತ್ವ ವಿಶಿಷ್ಟ ಸ್ವರೂಪ ಪಡೆಯುತ್ತದೆ.

ಈ ಸಂದರ್ಭದಲ್ಲಿ ಪು.ತಿ.ನ. ಅವರ ಮಾತುಗಳು ಗಮನಾರ್ಹ "....ಶ್ರೀಮತ್ ಭಾಗವತ, ಹರಿವಂಶ ವಿಷ್ಣುಪುರಾಣಗಳ ಗೋಪಾಲ ಕೃಷ್ಣನಿಂದ ನಮ್ಮ ಭಾರತ ದೇಶದ ಮಕ್ಕಳಿಗೆ ಒಂದು ಅಪೂರ್ವ ಲಾಭ ಸಂದಿದೆ. ಮಿಕ್ಕ ದೇಶದ ಮಕ್ಕಳಿಗೆ ಈ ಶ್ರೇಯೋ ಯೋಗವಿರುವಂತೆ ತೋರುವುದಿಲ್ಲ. ಮಕ್ಕಳನ್ನು ಹಸೆಯ ಮೇಲೆ ಕೂಡಿಸಿ ಬದರಿ (ಎಲಚಿ) ಹಣ್ಣಿನ ಸೇಸೆಯಿಕ್ಕಿ, ಹಾಡಿ ಹರಸಿ, ಆರತಿಯೆತ್ತಿ ಬಾಗಿನ ಹಂಚುವ ಸಂಭ್ರಮವೆಲ್ಲಾ ಶ್ರೀಕೃಷ್ಣನಿಂದಲೇ ಅವಕ್ಕೆ ಪ್ರಾಪ್ತವಾಗಿರುವುದು. ಉನ್ನತ ರಾಜವಂಶದಲ್ಲಿ ಹುಟ್ಟಿ ಸಾಮಾನ್ಯ ವರ್ಗದವರ ಮನೆಯಲ್ಲಿ ಬೆಳೆದುದೊಂದು ಅಪೂರ್ವ ಸುಯೋಗ. ಇದರಿಂದ ಆತನಿಗೆ 'ಸ್ನಾಬರಿ' ಎಂದು ನಾವು ಯಾವುದನ್ನು ಕರೆಯುತ್ತೇವೆಯೋ ಆ ಪ್ರತಿಷ್ಠಾ ಪೂಜೆಯ ಸೋಂಕು ತಪ್ಪಿ ಹೋಯಿತು. ಸಾಮಾನ್ಯ ಜನರ ಸರಳ ಜೀವನ, ಅವರ ಕಷ್ಟ ಕಾರ್ಪಣ್ಯಗಳು, ಅವರ ಅತಾರ್ಕಿಕ ಭಯಗಳು, ಅಲೌಕಿಕ ನಂಬುಗೆಗಳು, ಅವರ ನಿಷ್ಕಲ್ಮಶವಾದ ಪ್ರೀತಿ ಔದಾರ್ಯ ಇವುಗಳ ಗಾಢ ಪರಿಚಯ ಅವನಿಗೆ ಬೃಂದಾವನದಲ್ಲಿ ದೊರಕಿತು" ("ಶ್ರೀಕೃಷ್ಣಸ್ಮರಣೆ" ಪು.ತಿ.ನ ಸಮಗ್ರ ಗದ್ಯ ಸಂಪುಟ ಪುಟ.೫೭೭೮).

ಬೃಂದಾವನದ ಪರಿಶುದ್ಧ ವಾತಾವರಣ, ಬೆಟ್ಟ, ಗುಡ್ಡ, ದಟ್ಟ ಹಸಿರಿನ ಕಾಡು, ನದಿ ಸರೋವರಗಳ ಪ್ರಾಕೃತಿಕ ಪರಿಸರ, ಆ ಗೋವಳರ ನಿಷ್ಕಲ್ಮಶ, ಸ್ವಾರ್ಥರಹಿತ ಸ್ನೇಹ, ಪ್ರೀತಿಗಳು ಕೃಷ್ಣನ ವ್ಯಕ್ತಿತ್ವದ ಸರ್ವಾಂಗೀಣ ವಿಕಸನಕ್ಕೆ ನೆರವಾಗಿ ಬೃಂದಾವನ ಅವನ ವ್ಯಕ್ತಿತ್ವ ವಿಕಸನದ ತರಬೇತಿ ಕೇಂದ್ರವಾಗಿತ್ತೆನ್ನಬಹುದು. ಈ ಶಿಕ್ಷಣ ಮುಂದೆ ಕೃಷ್ಣನು, ನಗರ ನಾಗರೀಕತೆಯಲ್ಲಿ ಕಂಡುಬಂದ, ಅಧಿಕಾರ ದಾಹ, ದಾಯಾದಿ ಮತ್ಸರ, ಸ್ವಾರ್ಥ, ಅನ್ಯೆತಿಕತೆ ಮತ್ತು ಹಲವು ವಿಧದ ಸಂಘರ್ಷ, ಘರ್ಷಣೆಗಳನ್ನು ಪರಿಣಾಮಕಾರಿಯಾಗಿ ಎದುರಿಸಿ ನಿಯಂತ್ರಿಸಲು ಬೇಕಾಗುವ ದೇಹಬಲ, ಮನೋಬಲ, ಚಿತ್ತಸ್ವಾಸ್ಥ್ಯ, ನೈತಿಕ ಸಾಮರ್ಥ್ಯ ಮತ್ತು ನಿರ್ಲಿಪ್ತತೆಗಳನ್ನು ತಂದು ಕೊಟ್ಟವೆನಿಸುತ್ತದೆ. ಬೃಂದಾವನ–ಗೋಕುಲದ ಗೋವಳರ ನಡುವೆ ಬೆಳೆದ ಈ ಬಾಲಕ ಪ್ರಚಂಡ ಮುತ್ಸದ್ದಿಯಾಗಿ, 'ಮಹಾಭಾರತ'ದ ಮಹಾಯುದ್ಧದ ನಿಯಂತ್ರಕನಾದುದಾದರೂ ಹೇಗೆಂಬುದು ಆಶ್ಚರ್ಯಕರವೆನಿಸುತ್ತದೆ. ಈ ನಿಟ್ಟಿನಿಂದ ಕೃಷ್ಣನ ಜೀವನವನ್ನು ಪರಿಶೀಲಿಸುವಾಗ ಶೈಶವ ಹಾಗೂ ಹದಿಹರೆಯಗಳಲ್ಲಿ, ಸಹಜ ಪ್ರಾಕೃತಿಕ ಪರಿಸರ ಸರಳ ಸ್ವಾರ್ಥರಹಿತ ಜನರ ಒಡನಾಟ, ಮುಗ್ಧ ಜನರ ಸ್ನೇಹದ ಅವಶ್ಯಕತೆಯ ಮಹತ್ವ ತಿಳಿಯುತ್ತದೆ. ಇಂತಹ ಪರಿಸರ ಇಂದಿನ ನಗರದ ಮತ್ತು ಗ್ರಾಮೀಣ ಮಕ್ಕಳಿಗೆ ಅವಶ್ಯಕವೆನಿಸುತ್ತದೆ. ಇಂದಿನ ಗ್ರಾಮಗಳೂ ಹಿಂದಿನ ಗೋಕುಲದಂತಹ ಗ್ರಾಮಗಳಾಗಿ ಉಳಿದಿಲ್ಲ, ತನ್ನ ಗೆಳೆಯರ ಗುಂಪಿನಲ್ಲಿ ಎಂದೂ ವರ್ಣ, ವರ್ಗಗಳ ಭೇದ ಮಾಡದಿದ್ದ ಕೃಷ್ಣ ವರ್ಣಾಶ್ರಮವನ್ನು ಉಪದೇಶಿಸಿದ್ದು ಎಂಬುದನ್ನು ಚಿಂತಿಸಿದಾಗ, ಕೃಷ್ಣನ ಮಾತುಗಳ ಅಂತರಾರ್ಥ–ಸತ್ಯ ಅರಿವಾಗುತ್ತದೆ. ❍

# ಶೈಶವ ಲೀಲಾಲೋಕನಂ

ಬೃಂದಾವನ ಕೃಷ್ಣನ ಬಾಲ್ಯ ಜೀವನದ ರಸಾಸ್ಥಾನವೆನ್ನಬಹುದು, ಕಾಡಿನೊಳಗೆ ಗೋಪಾಲಕರ ಜೊತೆ ಆಟ, ಸಾಹಸಗಳು, ಗೋವರ್ಧನೋದ್ಧರಣ, ವೇಣುಗಾನ, ಕಾಳಿಂಗ ಮರ್ದನ, ರಾಸಲೀಲೆ ಒಂದೇ ಎರಡೇ? ಕೃಷ್ಣ ಜೀವನ, ಬೃಂದಾವನಗಳು ಪರಸ್ಪರ ಬೆಸೆದುಕೊಂಡಿವೆ. ಕೃಷ್ಣನ ರಸಚೇತನ, ಬೆಟ್ಟ, ನದಿ, ಕಾಡುಗಳಿಂದ ಚೈತನ್ಯಮಯಿಯಾದ ಪ್ರಕೃತಿ, ಬೃಂದಾವನದ ಜನಸಮುದಾಯಗಳ ನಡುವೆ ಪರಿಪೂರ್ಣವಾದ ತ್ರಿಕೋನ ಸಾಂಗತ್ಯ (ಬಂಧ) ಸಾಧಿಸಿದೆ. ಈ ಸಾಮರಸ್ಯವನ್ನು ಹೀಗೆ ಸೂಚಿಸಬಹುದು.

ಕೃಷ್ಣನ ರಸಚೇತನ (ವೇಣುಗಾನವೂ ಆಗಬಹುದು)

ಪ್ರಕೃತಿ ಬೃಂದಾವನದ ಜನಸಮುದಾಯ

ಹೀಗೆಯೇ ಕೃಷ್ಣನ ವೇಣುಗಾನ, ಪ್ರಕೃತಿ ಬೃಂದಾವನದ ಪಶುಪಕ್ಷಿ ಮತ್ತು ಜನ ಸಮುದಾಯ – ಈ ಎರಡೂ ಬಂಧದಲ್ಲಿ ಜಡದಿಂದ ಋತಕ್ಕೆ, ಋತದಿಂದ ಸತ್ಯಕ್ಕೆ ಸತ್ಯದಿಂದ ರಸಕ್ಕೆ ಏರುವ ಪ್ರಕ್ರಿಯೆಯನ್ನು ಕಾಣುತ್ತೇವೆ. ಗೋಪಿಯರೊಡನೆ ಕೃಷ್ಣನ ರಾಸದಲ್ಲಿ ಹೆಣ್ಣು ಗಂಡುಗಳ ದೇಹಭಾವವಳಿದು, ಜೀವಕಾಮ, ಆತ್ಮಕಾಮವಾಗಿ, ದೈವ ಕಾಮವಾಗುವ ದಿವ್ಯಾನುಭಾವವನ್ನು ಕಾಣುತ್ತೇವೆ.

"ಶೈಶವ ಲೀಲಾನೋಕನಂ"ನಲ್ಲಿ, ಬೃಂದಾವನದ ಹೆಂಗಳು ಕೃಷ್ಣನನ್ನರಿತಂತೆ ಬೇರೆ ಯಾರೂ "ಭಾವಿಸಲಿಲ್ಲ" ವೆನ್ನುತ್ತಾ ಪು.ತಿ.ನ. ಒಲುಮೆಯ ಲಕ್ಷಣವನ್ನೂ, ಅದು ಸೊಗವನ್ನು ಕೊಡುವ ರೀತಿಯನ್ನೂ ವಿಶ್ಲೇಷಿಸುತ್ತಾರೆ: "ಕೊಟ್ಟು ಸೊಗವನು ಪಡೆವನಾವನೊ । ಆತನೆ ಸುಕೃತಶಾಲಿ ಪ್ರೇಮಿಷ್ಠ ಅವಗಿಲ್ಲ ಕಿಂಕೃತಿ।" ಈ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ದುರ್ಯೋಧನ ಕರ್ಣರ ನಡುವೆ ನಡೆದ ಕೊಡುಕೊಳ್ಳುವಿಕೆಯ ಪರಿಣಾಮದ ಮೇಲೆಯೂ ತಮ್ಮ ವಿಚಾರದ ಕ್ಷ–ಕಿರಣ ಬೀರುತ್ತಾರೆ: "ಹಗೆದು ಕೊಡುವುದ

ಕೊಡದೆ, ಸ್ವಾರ್ಥಕಾಗಿಯೆ ಕೊಟ್ಟು ಕೆಟ್ಟಂ । ದುರ್ಯೋಧನಂ ಮಿತ್ರ ಬಾಂಧವ ಪರಿವಾರದೊಡಗೂಡಿ । ಮುಂದಿನೆಣಿಕೆಯ ಕೊಡುಗೆಯಿಂ ಲೇಸಾಗದುಭಯರಿಗುಮೆನೆ ಕರ್ಣನೆ ಸಾಕ್ಷಿ: ಎಂದುಮದು ಕೊಡುವವರ ಪಡೆವವರನ್ನೂ ಘಾತಿಸದಿರದು।" ಆದರೆ ಬೃಂದಾವನದ ಈ ಹಳ್ಳಿವೆಂಗಳು "ಕೊಡುಕೊಡುತಲೇ ಸಂತಸಪಟ್ಟವರು", "ಮರುಕೊಳಲೆಳಸದೇನುಮಂ, ಸಾನ್ನಿಧ್ಯವೊಂದನೆ" ಬಯಸಿದವರು. ಯಾವುದೇ ಮರು ನಿರೀಕ್ಷೆಯಿರದ ನಿಸ್ವಾರ್ಥದ ಸ್ನೇಹ ಪ್ರೀತಿಗಳ ಕೊಡುಗೆಯೇ ಒಲುಮೆಯ ಕುರುಹೆಂದು ಒಲುಮೆಯ ಭಾಷ್ಯ ಬರೆಯುತ್ತಾರೆ ಪು.ತಿ.ನ. ನಗರ ಸಂಸ್ಕೃತಿ ಹಾಗೂ ಗ್ರಾಮ ಸಂಸ್ಕೃತಿಗಳ ತುಲನೆಯೂ ಸೂಚ್ಯವಾಗಿ ನಡೆಯುತ್ತದೆ, ಗೋಪಿಯರ ನಡವಳಿಕೆಯ ಚಿತ್ರಣದ ಮೂಲಕ.

ಕೃಷ್ಣ ಬೃಂದಾವನದ ಎಲ್ಲ ತಾಯಂದಿರ ಸ್ವತ್ತು ಎನ್ನುವುದನ್ನು ಪು.ತಿ.ನ. ಮತ್ತೆ ಮತ್ತೆ ವಿಸ್ತರಿಸಿ ಬರೆಯುತ್ತಾರೆ. (ಶೈಶವ ಲೀಲಾಲೋಕನಂ ಪುಟ. ೨೨, ೪೧ ರಿಂದ ೮೫ ಸಾಲುಗಳು) "ಕರಿಮುಗಿಲ ಬಣ್ಣವ ಜರೆವ ಬರಿ ಮೈಯವ" 'ಕರುಗಳ ಬಾಲಹಿಡಿದೆಳೆತರುವ' ಈ ಚಿಣ್ಣ ಕೊಡುವ ಪೀಡೆಗಳೆಲ್ಲ ಆ ಗೋಪಿಯರಿಗೆ ಹಸಾದ, ಈ ಬಾಲ ಗೋವಳ ಕೊಟ್ಟಿಗೆಯಲ್ಲಿ ಕರುಗಳನ್ನು ಬಿಚ್ಚಿ ಅವುಗಳನ್ನು ಅವುಗಳ ತಾಯೆಡೆಗೆ ಕಳಿಸಿ ಗೊಲ್ಲತಿಯರಿಗೆ ಹಾಲು ಕರೆಯುವುದನ್ನೇ ತಪ್ಪಿಸುವ ತುಂಟ, ಎಲ್ಲರಿಂದಲೂ ಬಯ್ಗಳ ತಿನ್ನುವ ಪ್ರಿಯದುಷ್ಟ, ಬೆಣ್ಣೆ ಕದ್ದು ಹಾಲಿನ ಕೋಡಿ ಹರಿಸುವವ, ಮೂತಿ ಊದಿಸಿ 'ನರಸಿಂಹನ' ಮುಖವನ್ನು ಅಭಿನಯಿಸಿ ತೋರಿಸುವವ. ಇಂತಹ ಪೋರನನ್ನು ಬೃಂದಾವನದ ಮಾತೆಯರೆಲ್ಲರೂ ತಮ್ಮ ತಮ್ಮ ಮನಕ್ಕೆ ಬಂದಂತೆ ಅಲಂಕರಿಸುವರು, ರಮಿಸುವರು, ಮುದ್ದಿಸುವರು, ಆ ಪೋರನ ತುಟಿ ಸೋಂಕಿಗಾಗಿ ಗೋಗರೆಯುವರು. ಕೃಷ್ಣ ತನ್ನ ಈ ಆಟಪಾಟ ವಿನೋದಗಳಿಂದ ಎಲ್ಲರಲ್ಲಿಯೂ ಒಂದಾಗುವ ಈ ಮಾಯಕತನದ ಮೋಡಿಯಿಂದ, ರೂಢಿಯನ್ನು ಮುರಿದ"ನೆನ್ನುತ್ತಾರೆ ಪು.ತಿ.ನ. "ಈ ಪರಿಯೊಳಾ ತಾಯಂದಿರ ಸೇವೆ। ಯನು ಕೊಂಡು ರೂಢಿಯ ಕರುಕಿಡಿದ ಚೇತನಕೆ ನಿರ್ದುಷ್ಟ । ತುಂಟಾಟದೊಳು ಕಳೆಯ ಬರಿಸಿ, ಮೊಗದಿ ನಗೆಬೆಳಕಾಡೆ । ....ಬೇರೆ ಲೋಕದ ಬೆಳಕೇ" ಇಲ್ಲಿ ಶಿಶುರೂಪವನು ಪಡೆದಂತಿದ್ದವನು. ಇಂಥ ಬಾಲಕ, ತಾಯಿ ಯಶೋದೆ ಮಗನ ಜಡೆ ಜಗ್ಗಿ ಹಣಿಗೆಯಿಕ್ಕುವಾಗ "ಬಾಚಣಿಗೆಯ ಛಂದೋಗತಿಗೆ" ಕಿರುಚುತ್ತಿದ್ದನಂತೆ! ಪು.ತಿ.ನ. ಅವರ ಮನಸ್ಸು ಆ ಮಾಧವನ ಮಗುತನದ "ಪ್ರೇಮಾಯಾ । ತನದ ಪರಮೋದಾರ ಭಾವದಿಂಹಾವದಿಂ" ಮುಂದಕ್ಕೆ ಚಲಿಸಲೇ ಇಚ್ಛಿಸುವುದಿಲ್ಲ, ಕೃಷ್ಣನನ್ನು "ಮಗುವೆ, ಮನೆಗಳ ಭಾಗ್ಯವೇ" ಎಂದು ಸಂಬೋಧಿಸಿ, ಮನುಷ್ಯನ ಅಹಂಕಾರದಿಂದಲೂ ಒಲುಮೆಯೊಸರುವಂತೆ ಅದನ್ನು ಸಂಸ್ಕರಿಸುವ ವಿಧಿ ಕೌಶಲ ಆ ಮಗು ಎನ್ನುತ್ತಾರೆ, ಸೇವೆಯಲ್ಲಿ ಸೊಗವಿಹುದೆಂದು ಕಲಿಸುವ ಗುರುವೂ, ವಾತ್ಸಲ್ಯ ಶಿಕ್ಷಾಚಾರ್ಯನೂ ಆಗುತ್ತಾನೆ ಆ ಶಿಶು. ಇಂಥ ಶಿಶುವಿನ ಗರಡಿಯಲ್ಲಿ

ಕಲಿಯುವುದು ಬಹಳವಿದೆ ಎನ್ನುತ್ತಾರೆ ಪು.ತಿ.ನ. ಹಾಗೆಯೇ, ಎಲ್ಲ ತಂದೆ ತಾಯಿಗಳೂ ಆಲೋಚಿಸಿ ಮನನ ಮಾಡಬೇಕಾದ ಮತ್ತೊಂದು ಪ್ರಶ್ನೆಯನ್ನೆತ್ತುತ್ತಾರೆ. ಶೈಶವದ ಆಟ ಪಾಟಗಳಿಂದ ಮಕ್ಕಳು ತಂದೆ ತಾಯಿಗಳಿಗೆ ನೀಡುವ ಆನಂದಕ್ಕೆ ಬೆಲೆಕಟ್ಟಲಾಗುವುದೇ? ಅದಕ್ಕೆ ಬೇರೆ ಯಾವ ಸುಖ ಸಮನಾಗುತ್ತದೆ? "ಛೀ ಕಳ್ಳ ಎನೆ ನಸುನಗುವೆಯಾ? ಬೊಚ್ಚಬಾಯ್ಬಿಡುವೆಯಾ?... ಸಾಲಿಗರಾವು । ನಿನಗೆಲೆ ಕಂದ, ಸಂಜೆ ಬಾನ ಪೆರೆಯೆಸಳ ಚಂದವ ಮರೆಸಿ । ಚೆಂಬಾಯೊಳಗೆ ಮೊಳೆವಲ್ಲೆಸೆಯೆ ಬೆರಳನಿಡುವೆಮ್ಮನೀ । ಕಡಿದು ಹಾಯೆನಿಸುವಾ ಸೊಗದ ಬೆಲೆಗೇರದೆಮ್ಮ ಸೇವೆ..." ಎನ್ನುವ ಪು.ತಿ.ನ. ರ ಮಾತುಗಳಲ್ಲಿ ತಂದೆ ತಾಯಿಯರಿಗೆ ಮಕ್ಕಳಿಂದ ಸಿಗುವ ಆನಂದದ ಅತ್ಯಂತ ಮಧುರವಾದ ವರ್ಣನೆಯಿದೆ. ಮಗುವಿನ ಬಾಯಲ್ಲಿ ಮೊಳೆವ ಹಲ್ಲು, ಸಂಜೆ ಬಾನಿನ ಚಂದ್ರನ ಎಸಳ ಚೆಂದವನೆ ಮರೆಸುತ್ತಂತೆ! ಹೀಗಿದ್ದರೂ, ತಂದೆ ತಾಯಿ ತಾವು ಪಡೆದ ಮಕ್ಕಳನ್ನು ಹೊತ್ತು, ಹೆತ್ತು, ಬೆಳೆಸಿದುದನ್ನೇ ದೊಡ್ಡದು ಮಾಡಿ, ತಾವು ಪಡೆದ ಆನಂದವನ್ನು ಮರೆತು, ಮಕ್ಕಳ ಮೇಲೆ ತಮ್ಮ ಉಪಕಾರದ ಭಾರ ಹೊರೆಸಿ, ಅವರನ್ನು ಋಣಿಗಳನ್ನು ಮಾಡಿ, ತಮ್ಮನ್ನು ಆದರಿಸುತ್ತಿಲ್ಲ, ತಮ್ಮ ಋಣ ತೀರಿಸುತ್ತಿಲ್ಲವೆಂದು ಟೀಕಿಸುತ್ತಾ ಖೇದಿಸುತ್ತಾ, "ಬಸವಳಿಯುವ ತಂದೆ ತಾಯಂದಿರು ಮರವಟ್ಟವರೆ ಸೈ" ಎನ್ನುತ್ತಾರೆ ಪು.ತಿ.ನ. ತಮ್ಮ ಮಕ್ಕಳನ್ನು ಟೀಕಿಸುತ್ತಾ ಅವರನ್ನು ಉಪಕಾರ ಸ್ಮರಣೆಯಿರದ ಕೃತಘ್ನರು ಎಂದು ನಿಂದಿಸುವವರು ಈ ಮಾತುಗಳನ್ನು ಮತ್ತೆ ಮತ್ತೆ ಮನನ ಮಾಡಬೇಕು. ಬೃಂದಾವನದ ತುರುಗಾಹಿಗಳು ಇಲ್ಲಿಯೂ ಮೇಲ್ಪಂಕ್ತಿಯಾಗುತ್ತಾರೆ. "ಯದುಕುಲದ ದೊರೆಮಗನು। ತನ್ನೆಳೆತನದ ತಮಗಿತ್ತ ಸರಿದೊರೆಯಿಲ್ಲದುಲ್ಲಸವ । ನೆನೆದರೆ ಹೊರತು ಮತ್ತೇನ ಬೇಡಿದರು ದೊರೆಗಳ ದೊರೆಯ? । ಮನುಷ್ಯನ ಗತಿ ಗಮನವೆಷ್ಟು, ಅಷ್ಟು ಜಗತ್ತಿನ ವಿಸ್ತಾರದ ರೀತಿ ಎಂದು ಮಾನವ ಚೇತನದ ವಿಕಾಸದ ಹಂತಗಳನ್ನು ಪು.ತಿ.ನ. ಗುರುತಿಸುತ್ತಾರೆ: "ತಾಯೊಡಲು, ಮಡಿಲು, ತೊಟ್ಟಿಲು, ಗೃಹಾಂಗಣ ಬೀದಿ ನೆರೆಹೊರೆ। ಗುಡಿ ಗುಡಿಯಾಚೆ, ಬಯಲು, ಬನ, ಬಿತ್ತರದೂರು, ನಾಡು ಲೋಕಂ। ಬಾನು, ರವಿಕರಗ್ರಹ ಲೋಲ ಸೋಮಂ ಬಳಿಕ ಭೌಮಂ । ಭಾರ್ಗವಂ ವಿವಿಧಾನೂಹ್ಯ ವಿಸ್ಪಂದ ವಿಡಿದಾಗ ಸಂ । ತಾರಾ ತಾರಾ ನಿಬಿಡವಂತರಿಕ್ಷಂ ನೀಹಾರಿಕಾ । ಕೀರ್ಣಂ ಸಂತತ ವಸ್ತು ಶಕ್ತಿ ವಿನಿಮಯ ಲಯೋದ್ಭೂತಿ ಲೀಲಾವಹಂ.... ವಿಶ್ವಮೀತೆರ ಬಳೆಗುಂ ಅರಿವಿನ ಗತಿಗೆ । ಮಾನವಚಿತ್ತಂ ಸಂವರ್ದಿತಂ...." ವಿಶ್ವಚೇತನ, ಮಾನವ ಚೇತನದ ಹಂತ ಹಂತದ ವಿಕಾಸ ಕ್ರಮದ ಚಿತ್ರಣ ನೀಡಿ, "ಬೀಡುಳಿದು ಮಲೆಯಲೆದು ಬೃಂದಾವನದಿ ಈ ವಿಕ್ರಮಕ್ಕೆ ಮೊದಲಡಿಯಿಡುತ್ತಾನೆ" ಎಂದು ಕೃಷ್ಣ, ಬೃಂದಾವನದಲಿ, ಈ ವಿಕಾಸದ ಹಂತಗಳನ್ನು ಏರುತ್ತಾನೆಂದು ತಿಳಿಸುತ್ತಾರೆ.

# ವಿಪಿನಾವಗಾಹಂ ಭಾಂಡೀರದರ್ಶನಂ ಪರಿಸರಪ್ರಜ್ಞೆ ವೃಕ್ಷಪ್ರಗಾಥ

ಪು.ತಿ.ನ. ಅವರ ಪರಿಸರ ಪ್ರಜ್ಞೆಗೆ ಮತ್ತು ಸಸ್ಯರಾಜಿಯಲ್ಲಿ ಜೀವಶಕ್ತಿ ಸಂಚಲನವನ್ನು ಗುರುತಿಸುವ ಅವರ ರಸಪ್ರಜ್ಞೆಗೆ 'ವಿಪಿನಾವಗಾಹಂ' ಮತ್ತು 'ಭಾಂಡೀರದರ್ಶನಂ' ಎರಡೂ ಉಲ್ಲಾಸಂಗಳು ನಿದರ್ಶನ. 'ವಿಪಿನಾವಗಾಹನಂ'ನ ಆರಂಭದಲ್ಲಿಯೇ ಮನುಷ್ಯ, ಮೃಗ, ಪಕ್ಷಿ ಮುಂತಾದ ಜೀವಸಂಕುಲದಿಂದ, ಸಸ್ಯಜೀವ ಪ್ರಕಾರ ಹೇಗೆ ಬೇರೆಯೆನಿಸುತ್ತದೆಯೆಂದು ಅಚ್ಚರಿಪಡುತ್ತಾರೆ ಪು.ತಿ.ನ. ಮನುಜ ಮೃಗ ಪಕ್ಷಿ ಜಂಗಮ ಜೀವನಿಕಾಯದಿಂದೆನಿತು । ಬೇರೆಯೆನಿಪುದೀ ಸಸ್ಯಜೀವ ಪ್ರಕರ! ಅಧೋಗಮಾ। ಮೂರ್ಧ್ವಗಮವಿದು ನಿಶ್ಚಲಂ, ಕೆಳಹೀರಿ ಮಣ್ಣಿನ ರಸವ।ಮೇಲೇರಿಸುತ ಜೀವಿಪಜೀವಿ..." ಸಸ್ಯವರ್ಗ ಕಾರ್ಯನಿರ್ವಹಿಸುವ ರೀತಿ ಮನುಷ್ಯ ಮತ್ತು ಪ್ರಾಣಿವರ್ಗದಿಂದ ಭಿನ್ನವಾದದ್ದು. ಪ್ರಾಣಿವರ್ಗ ಭೂಮಿಯ ಮೇಲೆ ಬೆಳೆದ ವಸ್ತುಗಳನ್ನು ತನ್ನ ಪೋಷಕಾಂಶವನ್ನಾಗಿ ಬಳಸಿ ಬೆಳೆಯುತ್ತದೆ. ಮನುಷ್ಯನೂ ಅಷ್ಟೆ, ಭೂಮಿಯ ಮೇಲೆ ಉತ್ಪತ್ತಿಯಾದುದನ್ನು ನಾನಾ ವಿಧದಲ್ಲಿ ಪರಿಷ್ಕರಿಸಿ ಆಹಾರಸತ್ವವನ್ನಾಗಿ ಬಳಸುತ್ತಾನೆ. ಆದರೆ ಸಸ್ಯವಾದರೋ ನೇರವಾಗಿ, ತನ್ನ ಬೇರುಗಳನ್ನು ಭೂಮಿಗಿಳಿಸಿ ಮಣ್ಣಿನ ರಸಹೀರಿ, ಅದನ್ನು ಮೇಲಕ್ಕೆರಿಸುತ್ತಾ ಜೀವಿಸುವ ಜೀವಿ, ರೂಢಿಯಲ್ಲಿರುವುದರ ತಿರುಗುಮುರುಗು. ಸಸ್ಯವರ್ಗವನ್ನು ಪು.ತಿ.ನ. ಜೀವಿಯೆಂದೇ ಪರಿಗಣಿಸುತ್ತಾರೆ. ಇಂತಹ ಜೀವಿಯಾದರೂ ಇದಕ್ಕೆ "ಕಣ್ಣಿಲ್ಲ, ಕಿವಿಯಿಲ್ಲ ನಿಃಕರಣ ತಾನೆಂಬ ನಿರ್ವೇದವಿನಿತಿರದೆ ಮೆರೆಗುಂ । ಸಕಲ ಜೀವಾಧಾರ ಜೀವಾದಿಮಂ....।" ಇನ್ನು ಸಸ್ಯವರ್ಗದಲ್ಲಿರುವ ಮಹಾವೃಕ್ಷಗಳ ಸ್ವರೂಪವೋ? "ಬಾಂದಳವ ತಟ್ಟುವುದು ಹಾತೊರೆದು ನಿಮಿರಿ ನಿಮಿರಿ ಬೆಳಕಿಗೆ । ಪಸರಿಸಿ ತನ್ನ ಶಾಖೋಪಶಾಖೆಗಳ ಬಲು ಚೂಟಿಯೊಳು । ಎಲೆ ಮಕ್ಕಳಾವುದಕು ತಪ್ಪಿಸದು ತೇಜೋ ಯೋಗವನು..." ಎಂಥ ಅದ್ಭುತ ಕಲ್ಪನೆ! ಎಂಥ ಸೊಗಸಿನ ಭಾವ! ಎತ್ತೆತ್ತರಕ್ಕೆ ಬೆಳೆದು ಆಗಸದೆತ್ತರವನ್ನು ವೃಕ್ಷ ತಲುಪುವುದೇತಕ್ಕೆ? ಬೆಳಕಿಗೆ ಹಾತೊರೆದು ಬಾಂದಳದ ಬಾಗಿಲ

ತಟ್ಟುವುದಂತೆ! ಸೃಷ್ಟಿಯ ಅಣುರೇಣು ಜಡ ಚೇತನವೆಲ್ಲಕ್ಕೂ ಬೆಳಕಿನ ಹಂಬಲ– ಎಲ್ಲವುಗಳ ಯಾತ್ರೆಯೂ "ತಮಸೋಮಾಜ್ಯೋತಿರ್ಗಮಯ" ಎಂಬ ಹಂಬಲದ ಸಿದ್ಧಿಯತ್ತ. ಈ ಬೆಳಕಿನ ಹಂಬಲ, ಅಧ್ಯಾತ್ಮದ ಹಂಬಲ ಚರಾಚರ ಜೀವ ನಿರ್ಜೀವ ಎಲ್ಲವುಗಳಲ್ಲಿಯೂ ಸುಪ್ತವಾಗಿರುವ ಅಭಿಲಾಷೆ ಎಂಬುದಕ್ಕೆ ಈ ವಿವರಗಳು ಕನ್ನಡಿ ಹಿಡಿಯುತ್ತವೆ. ಬಾಂದಳ ತಟ್ಟುವ ಈ ವೃಕ್ಷರಾಜನೆದೆಯಲ್ಲಿ ಮಾತೆಯ ಮಮತೆಯ ಮಹಾಪೂರವನ್ನು ಕಾಣುತ್ತಾರೆ ಕವಿ. ತನ್ನ ಯಾವುದೇ ಮಗುವೂ ಉಪವಾಸವಿರದಂತೆ ನೋಡಿಕೊಳ್ಳುವ ತಾಯಿಯಂತೆ, ಈ ವೃಕ್ಷರಾಜ "ಎಲೆಮಕ್ಕಳಾವುದಕು ತಪ್ಪಿಸದು ತೇಜೋಯೋಗವನು". ಎಲೆಗಳಿಗೆ ಬೆಳಕೆ ಆಹಾರ, ದ್ಯುತಿಸಂಶ್ಲೇಷಣೆಯ ಕ್ರಿಯೆ ಇರದೆ ಎಲೆಗಳು ಬದುಕಲಾರವು. ತನ್ನ ಅಸಂಖ್ಯಾತ ಎಲೆ ಮಕ್ಕಳಿಗೆ ಸಮನಾಗಿ ಬೆಳಕಿನ ವಿತರಣೆ ಮಾಡುತ್ತಾನೆ ವೃಕ್ಷರಾಜ. ಕವಿ ಕಲ್ಪನೆ, ಆಧ್ಯಾತ್ಮಿಕ ಕಾಣ್ಕೆ, ವೈಜ್ಞಾನಿಕ ಸತ್ಯ ಇವು ಮೂರೂ ಮೇಳೈಸಿ, ಸಸ್ಯವರ್ಗ, ವೃಕ್ಷ ಜೀವನದ ಅದ್ಭುತ ವರ್ಣನೆಯನ್ನಿಲ್ಲಿ ಕಾಣುತ್ತೇವೆ, ವೃಕ್ಷಗಳ ಬೆಳಕನ್ನು ಎಲೆಗಳಿಗೆ ವಿತರಿಸುವ ಈ ಪ್ರಕ್ರಿಯೆಯಲ್ಲಿ ಕೂಡಾ, ಪು.ತಿ.ನ. ಅವರು ಕಂಡರಿಸಿರುವ ಕರ್ಮಯೋಗದ ಸಿದ್ಧಾಂತದ ಹೊಳುಹು ಕಂಡು ಬರುತ್ತದೆ. ಮರ ತಾನು ಮಣ್ಣಿನಿಂದ ಹೀರಿದ ರಸವನ್ನು ಎಲೆಗಳೆಂಬ ಸಮಷ್ಟಿಯಲ್ಲಿ ಸಮನಾಗಿ ವಿತರಿಸುತ್ತದೆ. ಈ ರೀತಿ ವಿತರಿಸಿದೆ ತನಗಾಗಿ ಎಂದು ಉಳಿಸಿಕೊಂಡರೆ, ಎಲೆ, ರೆಂಬೆ, ಕೊಂಬೆಗಳಿರದ ವೃಕ್ಷವೇ ನಾಶವಾಗುವುದು. ಪ್ರಕೃತಿಯ ಅನೇಕ ವಿದ್ಯಮಾನಗಳಲ್ಲಿ ಇಂತಹ ಕರ್ಮಯೋಗದ ಪ್ರಕ್ರಿಯೆಯನ್ನು ಕಾಣಬಹುದು. "ಮಹಾಸತ್ವರ ಭೋಗವೂ ಚಾಗವೂ ಜಗಸೊಗಕಲ್ತೆ" ಎಂದು ವ್ಯಕ್ತಿಯ ಬದುಕು ಸಮಷ್ಟಿಯ ಹಿತಕ್ಕೆ ಮುಡಿಪಾಗಬೇಕೆನ್ನುವುದನ್ನು ಪುನರುಚ್ಚರಿಸುತ್ತಾರೆ. ಅತ್ಯಂತ ಕಿರಿದಾದ ಹುಲ್ಲೆಳೆ ಕೂಡಾ, ಮಣ್ಣಿನ ನಾಲ್ಕು ಬೆರಳಾಳಕ್ಕಿಳಿದು ತನ್ನಾಗು ಹೋಗುಗಳನ್ನು ನಡೆಸುವ ಅಲ್ಪಾಯುವಾದರೂ, ಮನುಷ್ಯ ಜೀವನದ ಹೆಮ್ಮೆಯನ್ನೆಲ್ಲಾ ತನ್ನ ಅಂಗೈಯೊಳಗೆ ಹಿಡಿದಿರುತ್ತದೆ. ಈ ವೃಕ್ಷಗಳಿಗೆ ಸ್ವಹಿತವೇನಾದರೂ ಇದೆಯೇ? "ಪರೋಪಕಾರಾಯ ಫಲಂತಿವೃಕ್ಷಾ:" ಎಂಬ ಸುಭಾಷಿತವೇ ಇದೆ. ವೃಕ್ಷಗಳ ಮಹತ್ವವನ್ನು ಪು.ತಿ.ನ. ಅವರ ಈ ಸಾಲುಗಳಿಗಿಂತಲೂ ಪರಿಣಾಮಕಾರಿಯಾಗಿ ವಿವರಿಸಲು ಸಾಧ್ಯವಿಲ್ಲ; "ಗಳಿಕೆಯೊಳು ಇಷ್ಟಲ್ಪ ಸಾಕೆನಗೆ ಮಿಕ್ಕುದನ್ನೆಲ್ಲಕೋ । ಬದುಕುಪೋ ಎಂಬಿದರೌದಾರ್ಯಕೆಣೆಯಲ್ಲಿ ಕಾಂಬೆವೈ? ಗಾಳಿಯ ಪ್ರಾಣಮಾರಕ ವಿಷಾನಿಲವುಂಡು ಸುಧಾಂಶವ । ನೋಕರಿಸುವಿದುಗರಳಧರನಲ್ಲದಿರಲಿನ್ನಾವುದೈ" ಎಂದು, ಪು.ತಿ.ನ. ವೃಕ್ಷರಾಜಿಗೆ, ಹಾಲಾಹಲವನ್ನುಂಡಗರಳಧರನ ಸ್ಥಾನವನ್ನೇ ಕೊಡುತ್ತಾರೆ; ಈ ವಿವರಗಳಲ್ಲಿ ವೈಜ್ಞಾನಿಕ, ಪೌರಣಿಕ, ಆಧ್ಯಾತ್ಮಿಕ ಪ್ರಜ್ಞೆಗಳೊಡನೆ ಕವಿಯ ರಸಪ್ರಜ್ಞೆಯೂ ಬೆರೆತು, ರೂಪುತಾಳಿರುವ ವೃಕ್ಷಚಿತ್ರಣದ ವೈಭವ ಬೆರಗುಗೊಳಿಸುತ್ತದೆ.

ಇಂತಹ ಹಲವಾರು ಹೆಮ್ಮರಗಳಿಂದ ಹಕ್ಕಿ ಪಕ್ಷಿಗಳು 'ನಾದಿಸುವ' ಬಲುಬಗೆಯ ಧ್ವನಿಗಳಿಂದ, ತಣ್ ಗಂಪಿನಿಂದ ಕೂಡಿದ್ದ ಬೃಂದಾವನದ ವಿಪಿನ, ಗೋಪಾಲಕರನ್ನು ಕೃಷ್ಣ, ಬಲರಾಮರನ್ನು, ಪಟ್ಟಣಕ್ಕಿಂತಲೂ ಹೆಚ್ಚಾಗಿ ಆಕರ್ಷಿಸಿದವು. ಈ ಹಳುವಿನ ಇಂಚರದೊಂದಿಗೆ, ಬಾಲಕರು ದನಗಳನ್ನಟ್ಟುವ ಧ್ವನಿ, ಕೇಕೆಗಳು, ಶಿಳ್ಳುಗಳು, ಪಶುಪಕ್ಷಿಗಳ ಕೂಗನ್ನು ಅನುಕರಿಸುವ ಅವರ ಹುಡುಗತನ, ಜೊತೆಗೆ ಕೊಂಬು ಕೊಳಲು, ಎಲೆಗಳಿಂದ ಆ ಬಾಲಕರು ಮಾಡಿಕೊಂಡಿದ್ದ ಎಲೆಪೀಪಿಯ ನಾದ, ಸೋರೆಯ ವೀಣೆ, ಗೆಜ್ಜೆಯ ಕೋಲು, ಎಲ್ಲವೂ ಸೇರಿ ಅಲ್ಲಿ ಹೊಸದೊಂದು ಸ್ವರಮೇಳವೇ ಉಂಟಾಯಿತೆನ್ನುತ್ತಾರೆ ಪು.ತಿ.ನ. ಹುಲುಸಾದ ಹಸಿರು ಹುಲ್ಲಿನಲ್ಲಿ ಹಸುಗಳು ಮೇಯುತ್ತಿರಲು ಆ ಗೋವಳರಿಗೆ ಗೋವುಗಳನ್ನು ಕಾಯುವ ಕೋಟಲೆಯೂ ಇರದೆ ಮುಕ್ತವಾಗಿ ಆಡುತ್ತಿದ್ದರು. ಈ ಬಾಲಕರ ಆಟದ ಮೂಲಕ ಪು.ತಿ.ನ. ಗ್ರಾಮೀಣ ಆಟಗಳ ಪಟ್ಟಿಯನ್ನೇ ನೀಡುತ್ತಾರೆ. ಎಲ್ಲವೂ ದೈಹಿಕ ಪರಿಶ್ರಮದ ಸಾಮೂಹಿಕ ಕ್ರೀಡೆಗಳೇ, ಹುಡುಹುಡು ಮರಸು, ಮರಕೋತಿ, ಕೊಕ್ಕಾಟ, ಕಪ್ಪೆಗೊಪ್ಪಳ, ಕೂಸುಮರಿ, ಪಣಬುಗುರಿ, ಗಚ್ಚುಗಗೋಲಿ, ಚಿಣ್ಣೆಯಕೋಲು, ಲಗ್ಗೆಯಚೆಂಡು, ಕವಣೆಯ ಬೀಸು, ಸಾಮು ಲಾಗ, ನರ್ತನ, ಮರಹತ್ತುವುದು, ಹೊದರಿನಲ್ಲಿ ಹುದುಗುವುದು, ಪ್ರತಿಧ್ವನಿ ಬರುವುದೆಂದು ಕಿರಿಚಾಡುವುದು ಎಷ್ಟು ವಿಧದ ಆಟಗಳು ಈ ಎಲ್ಲವೂ ಆ ಬಾಲಕರನ್ನು "ಹಗುರಾಗಿಸುತ ದೃಢವಾಗಿಸುತ ಮೈಮನಗಳೆರಡುಮಂ । ಉಲ್ಲಾಸ ಮಾರ್ಗದೊಳು ನಡೆಸುತ್ತ 'ಪಶುವನ' ವಿದ್ಯೆಗಳನ್ನು ಬಲಿಯಿಸಿದವು.

ಆದರೂ ಕಾಡು ಎಂದರೆ ಸರ್ವಕಾಲದಲ್ಲಿಯೂ ಕ್ಷೇಮವಲ್ಲ, "ಸದಾಶಿವಮಲ್ಲ ಕಾಂತಾರವಿದು ಶಿವಾಶಿವ ಶರಣ್ಯಂ", ಒಮ್ಮೆ ಕರುಗಳ ಸಮೂಹದಲ್ಲಿ ವಿಚಿತ್ರವಾದ ದುಷ್ಟಶಕ್ತಿಯ ಪ್ರಾಣಿಯೊಂದು ಸೇರಿಕೊಂಡು, ಗೋವಳರನ್ನು ಆಕ್ರಮಿಸಿ, ಕೃಷ್ಣನೆಡೆಗೆ ನುಗ್ಗಿ ಬಂದಾಗ, ಕೃಷ್ಣ ಅದರ ಬಾಲ ಹಿಡಿದು ಗರಗರ ತಿರುಗಿಸಿ, ಬೀಸಿ ಅದನ್ನು ಹತ್ತಿರವಿದ್ದ ಬೇಲದಮರಕ್ಕೆ ಬಡಿಯುತ್ತಾನೆ. ಉದುರಿಬಿದ್ದ ಪಕ್ವ ಫಲಗಳನ್ನು ಗೋವಳರು ತಿಂದು ಸುಖಿಸುತ್ತಾರೆ. ಕೃಷ್ಣ ಆ ದುಷ್ಟಮೃಗದ ಬಾಲ ಹಿಡಿದು ತಿರುಗಿಸುವ ಪರಿ, ಮುಂದೆ ಅವನು ಕಾಳಿಂಗ ಸರ್ಪವನ್ನು ಹಿಡಿಯುವ ಕೈಚಳಕಕ್ಕಿದು ಅಭ್ಯಾಸವೆಂಬಂತೆ ತೋರುತ್ತದೆ ಕವಿಗೆ. ವಜ್ರಮುಖ ಹೆಬ್ಬಕನನ್ನು ತುಂಡಾಗಿ ಸೀಳುತ್ತಾನೆ ಕೃಷ್ಣ, ಮತ್ತೊಮ್ಮೆ ಅಗಲವಾಗಿ ತೆರೆದಿದ್ದ ಹೆಬ್ಬಾವಿನ ಬಾಯನ್ನು ಗವಿಯೆಂದುಕೊಂಡು ಗೋವಳರು ಅದರೊಳಗೆ ಪ್ರವೇಶಿಸುತ್ತಾರೆ. ಗೋಪಾಲಕರು ಭಯದಿಂದ 'ಕೃಷ್ಣ ಕೃಷ್ಣಾ' ಎಂದು ಕೂಗಿಕೊಂಡಾಗ, ಹೆಬ್ಬಾವು ಗೆಳೆಯರನ್ನು ನುಂಗುತ್ತಿರುವುದನ್ನು ಕಂಡ ಕೃಷ್ಣ ತಾನೂ ಹೆಬ್ಬಾವಿನ ಬಾಯನ್ನು ಹೊಕ್ಕು ಕುಡುಗೋಲಿನಿಂದ ಆ ಹಾವಿನ ಕರುಳನ್ನೇ ಕತ್ತರಿಸುತ್ತಾನೆ. ಎಲ್ಲ ಮಕ್ಕಳೂ ಸುರಕ್ಷಿತವಾಗಿ ಆಚೆ ಬರುತ್ತಾರೆ. ಪ್ರತಿ ಹಂತದಲ್ಲಿಯೂ, ತನ್ನ ಸಾಹಸದಿಂದ,

ಸಮಯಕ್ಕೆ ತಕ್ಕಂತೆ ಕಾರ್ಯ ಪ್ರವೃತ್ತವಾಗುವ ಚತುರಮತಿಯಿಂದ ತನ್ನ ಸಮುದಾಯವನ್ನು, ಗೆಳೆಯರನ್ನೂ ಕಾಪಾಡುತ್ತಿದ್ದ ಆಪದ್ಬಾಂಧವನಾಗಿದ್ದುದರಿಂದ ಗೋವ್ರಜದ ಆಬಾಲವೃದ್ಧರಿಗೆ "ಕೃಷ್ಣಸ್ಮರಣೆಯೇ ರೂಢಿಯಾದುದು ಎಂದು ಬಾಲ್ಯದಿಂದಲೂ ಕೃಷ್ಣನಲ್ಲಿ ಸದಾ ಜಾಗೃತವಾಗಿರುತ್ತಿದ್ದ ಸಮಷ್ಟಿ ಪ್ರಜ್ಞೆಯನ್ನು" ಪು.ತಿ.ನ. ಪರಿಚಯಿಸುತ್ತಾರೆ.

ಬೃಂದಾವನದ ಕಾಡಿನಲ್ಲಿ, ತನ್ನ ಜೊತೆಯವರನ್ನೂ, ಅಣ್ಣ ಬಲರಾಮನನ್ನೂ ಕಣ್ಮರೆಸಿ, ಕೃಷ್ಣ ತಾನೊಬ್ಬನೇ ದುರ್ಗಮ ಏಕಾಂತ, ಗಂಭೀರವಾದ ಸ್ಥಳಗಳನ್ನು ಹುಡುಕುತ್ತಾ ಅಲೆಯುತ್ತಿದ್ದಾಗ ಅವನ ದೃಷ್ಟಿಗೆ ಬಿದ್ದ ಬೃಹತ್ತಾದ ಆಲದ ಮರವೆ ಭಾಂಡೀರ ವೃಕ್ಷ, 'ಬೃಂದಾವನದ ತರುರಾಜ'. 'ಭಾಂಡೀರದರ್ಶನಂ'ನ ಭಾಂಡೀರ ವೃಕ್ಷದ ವಿವರಗಳಿಗೆ ಪು.ತಿ.ನ. 'ಹರಿವಂಶ'ದಲ್ಲಿ ವರ್ಣಿತವಾಗಿರುವ ಕೃಷ್ಣನು ಕಂಡಂತಹ ದೊಡ್ಡ ಆಲದ ಮರವನ್ನು ಮೂಲವಾಗಿ ಬಳಸಿಕೊಂಡಿದ್ದಾರೆ. 'ಕವಿಯ ದೃಷ್ಟಿಯಲ್ಲಿ ನಿಸರ್ಗ' ಎಂಬ ಲೇಖನದಲ್ಲಿ ಪು.ತಿ.ನ. 'ಹರಿವಂಶ'ದಲ್ಲಿನ ಆಲದ ಮರದ ವರ್ಣನೆಯನ್ನು ಉದ್ಗರಿಸಿದ್ದಾರೆ; "ದೊಡ್ಡ ಆಲದ ಮರ ನೆಲದ ಮೇಲೆ ಮೋಡದಂತೆ ನಿಂತಿದೆ... ಈ ಮಹಾವೃಕ್ಷ ಆ ಕಾಡಿನ ಮರಗಳಿಗೆಲ್ಲ ಸ್ವಭಾವತಃ ಅಧಿಪತಿ ಅದರ ಹೆಸರು ಭಾಂಡೀರ ಪವನಾ ಭೋಗಧಾರಿ." (ಕವಿಯ ದೃಷ್ಟಿಯಲ್ಲಿ ನಿಸರ್ಗ, ಪು.ತಿ.ನ. ಸಮಗ್ರ ಗದ್ಯ ಸಂಪುಟ ಪುಟ.೪೩೫), "ಮೊದಲು ಒಂದು ಸಾಸಿವೆಯಷ್ಟು ಸಣ್ಣ ಬೀಜವೊಂದು, ಅಷ್ಟು ಬಿಸಿಲು, ಅಷ್ಟುಗಾಳಿ, ಅಷ್ಟು ಮಳೆ, ಒಂದಷ್ಟು ಭೂಮಿ ಇವುಗಳನ್ನು ಹಿಡಿದು ತನ್ನ ಸತ್ವದಿಂದ ಇಷ್ಟೊಂದು ಹರವಾಗಿ ನಿಂತಿರುವ ಬೆರಗು ಇದನ್ನು ಕವಿ ಹಿಡಿದಿಟ್ಟಿದ್ದಾನೆ, ಈ ವಿಸ್ತಾರವಾದ ವೃಕ್ಷವರ್ಣನೆಯಲಿ" (ಪು.ತಿ.ನ. ಅದೇ ಪುಟ. ೪೩).

"ಪ್ರಕೃತಿ ಎಂದರೆ ಬರಿಬೆಟ್ಟ, ಕಾಡು, ಹೊಳೆ, ಮಳೆ ಮೋಡಗಳಲ್ಲ. ಸಮಸ್ತ ಜಗತ್ತೂ ಪ್ರಕೃತಿ" ಎನ್ನುವ ಪು.ತಿ.ನ. (ಕವಿಯ ದೃಷ್ಟಿಯಲ್ಲಿ ನಿಸರ್ಗ); "ಭಾಂಡೀರ ದರ್ಶನ"ದ ಆರಂಭದಲ್ಲಿ, ಬೃಂದಾವನವೆಂಬ ಬಲರಾಮ ಹರಿಲೀಲಾ ಕ್ಷೇತ್ರವೆಲ್ಲಿಹುದು ಎಂದು ಪ್ರಶ್ನಿಸುತ್ತಾ ಬೃಂದಾವನವು ಕ್ಷುದ್ರಬುದ್ಧಿಯ ಮನುಷ್ಯರಿಂದ ಅತಿದೂರವೆಂದು ಹೇಳುತ್ತಾ 'ಬೃಂದಾವನ' ಎಂಬುದು ಒಂದು ಭೌಗೋಳಿಕ ಸ್ಥಳ ಎಂಬ ಅರ್ಥವನ್ನೇ ಬದಲಾಯಿಸಿ ಬಿಡುತ್ತಾರೆ. ಬೃಂದಾನವು "ಅನ್ಯರಿಗೆ ಶೂನ್ಯಂ; ತಮ್ಮೊಳಂ, ತಮ್ಮವರೊಳಂ, ತಮ್ಮ । ನಾಡೊಳಂ, ತಮ್ಮ ಋಷಿಮುನಿ ಕವಿಜನದೊಳಂಬೇಸರಿಪ । ವಿಷಯಾಸಕ್ತ ಪರಪ್ರತ್ಯಯ ಮಗ್ನರಿಂ ದೂರವದು....." ಹಾಗಿದ್ದರೆ ನಿಜವಾದ ಬೃಂದಾವನ ಎಲ್ಲಿರುವುದು? "ಯಾವೊಡೆಯೊಲುಮೆಯಲ್ಲಿ ನೇಹಂ, ಮತ್ತೆಲ್ಲಿ ಕರುಬಿಲ್ಲ । ದಕ್ಕರೆಯೆಲ್ಲಿ ನಿರ್ಭಯವೆಲ್ಲಿ ಕೇಡಂಗೆಲ್ವ ಹುರುಡು । ಪೌರುಷವೆಲ್ಲಿ ನಾಡೊಲುಮೆ ನಾಡವರೊಲುಮೆ ಎಲ್ಲಿ । ಬಿಡುಗಡೆ ಅಲ್ಲೆ ಬೃಂದಾವನಂ ದಿವ್ಯಗಾನಾಶ್ರಯಂ।" ಬೃಂದಾವನ ತನ್ನ ಭೌಗೋಳಿಕ

ಸ್ಥಾನವನ್ನು ಹೆಸರನ್ನೂ ಉನ್ನತೀಕರಿಸಿಕೊಂಡು ಕವಿಯ ಕಲ್ಪನೆಗೆ, ಸದಾಶಯಗಳಿಗೆ, ಜೀವನದ ಇತ್ಯಾತ್ಮಕ ಮೌಲ್ಯಗಳಿಗೆ ಪ್ರತಿಮೆಯಾಗುತ್ತದೆ, ಕೃಷ್ಣನ ಕಾಲಘಟ್ಟದ ಬೃಂದಾವನ ಗೋಪಬಾಲರ ಪರಸ್ಪರ ಸ್ನೇಹ, ಸೇವೆ, ಪ್ರೀತಿಗೆ ನೆಲೆಯಾಗಿದ್ದು ಅಲ್ಲಿ "ಜೀವ ದೇವರ ಕೊಡುಕೊಳುವ ಕೈಂಕರ್ಯವದರೊಳಗಿಲ್ಲ । ದಾಸ್ಯಖೇದಂ, ಪರಮೇಶ್ವರಗು ತಹುದು ಸದ್ವಿನಯಮಂ।" ಇಂತಹ ಬೃಂದಾವನದ ದಿವ್ಯ ಸನ್ನಿಧಿಯಲ್ಲಿ ಕೃಷ್ಣ ತನ್ನ ಕೊಳಲಗಾನವನ್ನು ಪರಿಷ್ಕರಿಸಿ ಪರಿಣತಿ ಪಡೆಯುತ್ತಾನೆ, ತನಗೆ ತಾನೇ ಗುರುವಾಗಿ, ಪ್ರಕೃತಿಯೇ ಮಾರ್ಗದರ್ಶಕಳಾಗಿ, "…..ಬೆರಳಾಡೆ ಪೊರಮಡುವ ತೀವ್ರ ಕೋಮಲ ಸುಸ್ವರಗಳನು। ಪರಿಕಿಸುತಲೇಕಾಗ್ರಮನದೊಳು ಶ್ರುತ್ಯಂತರದ ಸೂಕ್ಷ್ಮ ವಿನ್ಯಾಸ ಮರ್ಮಗಳನರಿವನು. ವಿಪಿನದವ್ಯವಸ್ಥಿತ । ನಾದ ಗುಚ್ಛಾನುಕರಣದಿಂ ಸ್ವರಗಳನುದ್ಧರಿಸುವನು । ಕೊಳಲೊಳಾ ದನಿಗಳಿಂದೇಕ ಸ್ಥಾಯಿಗಳವಡುವನು….." ಅವ್ಯವಸ್ಥಿತವಾಗಿರುವುದಕ್ಕೆ ವ್ಯವಸ್ಥಿತ ಸ್ವರೂಪ ಕೊಡುವುದೇ ಕಲೆಯ ಧರ್ಮ ಎನ್ನಬಹುದು, ಹಾಗೆ ವ್ಯವಸ್ಥಿತ ಸ್ವರೂಪ ವಿನ್ಯಾಸಗಳಿಂದ "ಶುದ್ಧಿಯ ಬಿಡದೆ ಪರಿಪಾಲಿಸುತ ರಾಗಗಳ ಸೃಜಿಸುವನು…." ಕೃಷ್ಣನ ಈ ಪರಿಕರ್ಮವನ್ನು "ಹಳ್ಳಿಯ ಹೆಣ್ಣಿನ ಮೊಗದ ಋಕ್ಷತೆಯ ಕಳೆದು ಸೌಷ್ಟವವ ಹೊಳೆಯಿಸುವ ಪರಿಕರ್ಮಿ"ಯ ಕ್ರಿಯೆಗೆ ಹೋಲಿಸುತ್ತಾರೆ ಪು.ತಿ.ನ. ಕೃಷ್ಣ ತನ್ನ ಮುರುಳಿಯೊಡನೆ ಅನುಸಂಧಾನ ಮಾಡುವ ಇಂತಹ ಪ್ರಯೋಗ, 'ಅಭ್ಯಾಸ, ಸಂಶೋಧನೆ ಮತ್ತು ಅವನ ಅಂತಃಕರಣ ಸಂಸ್ಕಾರ'ದಿಂದಾಗಿ, ಆ ವೇಣುವಿನಿಂದ "ಥಳಥಳ ಹೊಳೆದು ಚಿಮ್ಮಿ ಬರುವ ಸರಸರಣಿಗಳನಾಲಿಸುತ ತಾನೆ ಬೆರಗು ಪಡುವನು" ಎನ್ನುತ್ತಾರೆ ಪು.ತಿ.ನ. ಕೃಷ್ಣನ ಮುರುಳಿಗಾನದ ಮೋಡಿ ಮೋಹಕತೆಗಳು 'ಶ್ರೀಹರಿಚರಿತೆಯ' ಅನೇಕ ಸಂದರ್ಭಗಳಲ್ಲಿ ಹಾಗೂ ಪು.ತಿ.ನ. ಅವರ ಹಲವಾರು ಭಾವಗೀತೆಗಳಲ್ಲಿ ಸೊಗಸಾಗಿ ಅಭಿವ್ಯಕ್ತಗೊಂಡಿವೆ. ಇಂಥ ದಿವ್ಯಗಾನದ ಮೂಲ ಯಾವುದು? ಲೌಕಿಕ ಅಲೌಕಿಕ ಜಗತ್ತುಗಳ ಸಾರಸರ್ವಸ್ವವನ್ನು ಒಳಗೊಂಡಿದ್ದು, ಸೃಷ್ಟಿಯ ಚರಾಚರಗಳನ್ನು ಪರವಶಗೊಳಿಸಿ, ಭವದಿಂದ ದಿವ್ಯಕ್ಕೆ ಕೊಂಡೊಯ್ಯುವ ಆ ವೇಣುಗಾನದ ಸೆಲೆ, ನೆಲೆಗಳಾವುವು? ಆ ಸೃಷ್ಟಿಯಲ್ಲಿರುವ ಸಜೀವ ನಿರ್ಜೀವ ವಸ್ತುಗಳ ಶಬ್ದ–ನಾದ ಭಂಡಾರವೇ ಅದರ ಸೆಲೆಯೆನ್ನುತ್ತಾರೆ ಪು.ತಿ.ನ. "ನೀರವ ಕುಸುಮ ಭಾಷೆಯ ಜತೆಗೆ ಮರ್ಮರವ ವೃಕ್ಷದಿಂ । ಜುಳುಜುಳುಕೆಯನು ಹೊನಲಿಂ ಧುಮುಧುಮುಗುಡಿಕೆಯನು ದಿಡುಗಿಂ, ಗುಡುಗನು ಮೋಡದಿಂ, ಹುಯ್ ಸರವ ಮಳೆಯಿಂ, ಅಂಬಾರವವ। ತರುವಿಂ, ಗೂಳಿ, ಕುರಿ, ಮೇಕೆ, ಗಜವಾಜಿ, ನೀರುಕೊಕ್ಕರೆ । ಮಯೂರ, ಕಾಗೆ, ಗುಬ್ಬಿ, ಗಿಳಿ, ಕೋಗಿಲೆ ಪಾರಿವತ । ಬೆಳುವ ಗಂಟೆಯ ಹಕ್ಕಿ ಚುಕ್ಕಿಯ ಹಕ್ಕಿ ದುಂಬಿಝುಲ್ಲಿಕೆ। ಹೆಸರಿರದ ನೂರಿಂಚರದ ಮೇಳವನು ಚರಾಚರದಿಂದಾರಿಸಿತಂದು ಕಿವಿಯೊಳು ಸುರಿದು, ಇರುವಿನಾಳದೊಳಲ್ಲೆ । ಅಂತಃಕರಣ ತಲದೊಳಗೆ ಕಣ್ಣರಿವ ನಕ್ಷತ್ರಗಳಾ । ಹೊಳವಿನ ಮಿಡಿತಗಳ ಭಾವದ ಜತೆಗೆ ಬೆರಸಿಯೂರಿಸುತ । ಆತ್ಮದ್ರವ್ಯವಾಗಿಸುತಲಾ

ಪ್ರೇಮಭಂಡಾರದೊಳು । ನಿಕ್ಷೇಪಿಸಿದ ಜಗತ್ಪ್ರಾಣಂ..." ತನ್ನ ಗಾನ ಸಂಸ್ಕರಣ ನಿರತನಾದ ಮುರಳೀ ಲೋಲ ಏಕಾಂತವನ್ನರಸಿ ಕಾಡಿನಲ್ಲಿ ಸಂಚರಿಸುತ್ತಿದ್ದಾಗಲೇ ಅವನ ದೃಷ್ಟಿಗೆ ಬಿದ್ದದ್ದು ಬೃಂದಾವನದ ತರುರಾಜ ಈ ಬೃಹತ್ ಆಲ ಭಾಂಡೀರ ವೃಕ್ಷ, ಇಂತಹ ವೃಕ್ಷದ ವರ್ಣನಗೆ ಪು.ತಿ.ನ. ಬಳಸುವ ಉಪಮೆಗಳೆಷ್ಟು? ಪ್ರತಿಮೆಗಳೆಷ್ಟು? ಎಲ್ಲವೂ ಭೂಮಾತಿಭೂಮವೇ, ಈ ವೃಕ್ಷದ ವರ್ಣನೆಯ ಭಾಗವನ್ನಷ್ಟೇ 'ವೃಕ್ಷ ಪ್ರಗಾಥ' ವಾಗಿ ಅಧ್ಯಯನ ಮಾಡಬಹುದು. ಕವಿ ಕಲ್ಪನೆ ಹಲವಾರು ಸುಂದರ, ಅದ್ಭುತ ಆಲೋಚನೆ, ಉಪಮೆಗಳಲ್ಲಿ ಗರಿಗೆದರುತ್ತದೆ, ಬಾನೆ ತನ್ನ ಆಕಾರದಲ್ಲಿ ಈ ಹಸುರಿನೆಲೆ ಮಾಡ ಮಾಡಿ ತನ್ನೊಳಬಾಗಿಗೆ ಜೋಡಿಸಿಕೊಂಡಿದೆಯೋ ಎಂದು ಒಮ್ಮೆ ಭಾವಿಸಿದರೆ, ಮತ್ತೊಮ್ಮೆ ಕವಿಯ ಪೌರಾಣಿಕ ಪ್ರಜ್ಞೆ 'ವಾಮನಂ ಬಾಳನಳೆಯೆ ಪಾದವೆತ್ತಿಹನೋ?' ಎಂದು ಚಿಂತಿಸುತ್ತದೆ. ಆ ಬೃಹತ್ ವೃಕ್ಷದಲ್ಲಿ ಸತತ ಸುಳಿದಾಡುತ್ತಿರುವ ಮಂದಮಾರುತದ ಮರ್ಮರವನ್ನು ಕೇಳಿದಾಗ ಮಾರುತ ಆ ಮರವನ್ನು ಬಿಡಲರಿಯದೆ ಅಲ್ಲೆ ಬೀಡುಬಿಟ್ಟಿಹನೋ ಎನಿಸುವುದಂತೆ: ಆ ಮರದ ಸತ್ವವಾದರೂ ಎಂತಹದು? 'ತನ್ನಳಿವಿನೊಳೆ ತನ್ನನೆತ್ತುತ ಬೆಳೆದ ಮಾಸತ್ವ', ತನ್ನ ಅಸ್ತಿತ್ವವನ್ನು ಇಲ್ಲವಾಗಿಸುತ್ತಲೇ ಅದ್ಭುತವಾಗಿ ಬೆಳೆಯುವ ಮಹಾಸತ್ವ ಆ ವೃಕ್ಷದ್ದು. ಬೀಜ ತಾನಳಿದು, ಮೊಳಕೆ ಮೂಡಿಸಿ, ಗಿಡವಾಗಿ ಹೆಮ್ಮರವಾಗುತ್ತ ಬೆಳೆಯುವುದು, ವ್ಯಕ್ತಿತ್ವದ ಅಳಿವಿನಲ್ಲಿಯೆ, ಉಳಿವು, ಬೆಳವು ಅಡಗಿರುವುದೆಂಬ ಸತ್ಯವನ್ನು ಪ್ರಕಟಿಸುವುದು. ಆ ಪೇರಾಲದ ಬಿಳಿಲುಗಳ ಹರಡಿ ನೆಲದ ತನಕ ಇಳಿಬಿಟ್ಟಿರುವುದನ್ನು ನೋಡಿದರೆ "ಸಾಸಿರ ಕಂಬಗಳ ಕರುಮಾಡ"ವೆನಿಸುವುದು. ಇನ್ನದರ ಎತ್ತರದಲ್ಲಿನ ವೈಭವವೋ 'ನಿತ್ಯದುತ್ಸವದಖಗನಗರ' ವದು, ಆ ಬಿಳಿಲುಗಳನ್ನು ಮುಟ್ಟಿ ಮುಟ್ಟಿ ತಣಿಯನಂತೆ ಕೃಷ್ಣ. ಮರದಿಂದ ಇಳಿ ಬಿದ್ದಿರುವ ಆ ಬಿಳಿಲುಗಳಲ್ಲಿಯೂ ಪು.ತಿ.ನ. ರ ಕಲ್ಪನೆ ನೆಲತಾಯಿಯ ಮಡಿಲು ಸೇರುವ ಹಂಬಲವನ್ನು ಕಾಣುತ್ತಾರೆ: "ತಾಯ್ಮೊಲೆಗೆ, ತವಿಸಿ ಕರುಮಿಣಿ ತುಯ್ವಂತೆ। ನೆಲವನೆ ನಿಟ್ಟಿಸುತ ಮೃತ್ ತೃಷೆಯ ಪ್ರಕಟಿಸುತಲಾ ಮರದ ನಿಡುರೆಂಬೆಯಿಂದೆಳಲು ವೆಳಬಿಳಲುಗಳು..." ಎನ್ನುತ್ತಾರೆ.

"ಭಾಂಡೀರದರ್ಶನಂ"ನಲ್ಲಿ ನೂರರಿಂದ ನೂರನಲವತ್ತನೆಯ ಸಾಲಿನ ತನಕ ಈ ಬೃಹತ್ ವೃಕ್ಷವನ್ನು ಕಾವ್ಯಮಯ ವರ್ಣಚಿತ್ರದಂತೆ ಬಣ್ಣಿಸಿದ್ದಾರೆ ಪು.ತಿ.ನ. ಇಂತಹ ವೃಕ್ಷದ ದಟ್ಟ ಹಸಿರಿನ ನಡುವೆ ಕುಳಿತು ಅಭ್ಯಸಿಸುತ್ತಾ, ಧ್ಯಾನಿಸುತ್ತಾ ತನ್ನ ಕೊಳಲಗಾನದಲ್ಲಿ ಪರಿಪೂರ್ಣ ಸಿದ್ಧಿ ಪಡೆದ ಕೃಷ್ಣ ಎನ್ನುವಾಗ, ಸಂಗೀತಕ್ಕೂ, ಪ್ರಕೃತಿಗೂ ಇರುವ ಆಪ್ತ ಬಾಂಧವ್ಯ ಬಿಚ್ಚಿಕೊಳ್ಳುತ್ತದೆ. ಸಂಗೀತದ ಬಗೆಗೆ ಪು.ತಿ.ನ. ಅವರ ಒಲವು ಯಾವಮಟ್ಟದ್ದೆಂಬುದು ಅವರ ಈ ಮಾತುಗಳಿಂದ ನಿಚ್ಚಳವಾಗುತ್ತದೆ: "ಗಾನ ಎಂದರೆ ನನಗೆ ಪ್ರಾಣ. ಭಾರತೀಯರ ದೈವಸ್ವರೂಪ ಎಂಥದು ಎಂದು ಯಾರಾದರೂ ಕೇಳಿದರೆ.

"ನಮ್ಮ ಸಂಗೀತವನ್ನು ಆಲಿಸಿರಿ: ನಮ್ಮ ದೈವದ ಬಣ್ಣನೆ ಅದರಲ್ಲಿದೆ, ರಾಗರಾಗಗಳು ಅದರ ವಿಪುಲ ಕಲ್ಯಾಣ ಗುಣಗಳನ್ನು ಬಿಡಿಸಿ ಬಿಡಿಸಿ ತೋರುತ್ತವೆ. ಅವು ನಿಮಗರ್ಥವಾದರೆ ನಮ್ಮ ದೈವದ ಕಲ್ಪನೆ ನಿಮಗಾದೀತು ಇಲ್ಲದಿದ್ದರೆ ಇಲ್ಲ" ಎಂದು ಹೇಳಬಹುದು. ರಸಸ್ಥಿತಿಯ ಉಪಾಂತ್ಯದಲ್ಲಿ ದೈವ ನನಗೆ ಗಾನದಾಸರೆಯಲ್ಲಿ ಡೋಲಾಯಮಾನವಾಗಿರುವಂತೆ ತೋರುತ್ತದೆ..... ಒಳ್ಳೆಯ ಸಂಗೀತ ನನ್ನ ಮನಸ್ಸಿನ ಎಲ್ಲ ಕೊಳೆಗಳನ್ನೂ ತೊಳೆದು ಹಸುಳೆಯ ನೈರ್ಮಲ್ಯವನ್ನು ಮರುಕಳಿಸಬಲ್ಲುದು, ಜ್ಞಾನವನ್ನು ನಿಶ್ಶೇಷವಾಗಿ ಭಾವಕ್ಕೆ ಪರಿವರ್ತಿಸುವ ಸಾಮರ್ಥ್ಯ ಅದೊಂದಕ್ಕೆ ಇರುವುದು, ಅದುದರಿಂದ ಭಾವವೇ ಆತ್ಮಪೌಷ್ಟಿಕ ಸಾಮಗ್ರಿ...." ('ಋತ-ಸತ್ಯ-ರಸ' ಪು.ತಿ.ನ. ಸಮಗ್ರ ಗದ್ಯ ಸಂಪುಟ, ಪುಟ.೪೮೬).

❍

# ವರ್ಷಾವಗಾಹಂ

ಬಲರಾಮ ಕೃಷ್ಣರ ಸೋದರ ಸ್ನೇಹ ವಾತ್ಸಲ್ಯಗಳ ಆಪ್ತತೆಯನ್ನು ಸುರಿವ ಮಳೆಯ ಹಿನ್ನೆಲೆಯಲ್ಲಿ ಭಾಂಡೀರ ವೃಕ್ಷದ, ಪರಿಸರದಲ್ಲಿ, ಮನೋಜ್ಞವಾಗಿ 'ವರ್ಷಾವಗಾಹಂ'ನಲ್ಲಿ ಚಿತ್ರಿಸಿದಾರೆ. ಕೃಷ್ಣ ಏಕಾಂತವನ್ನರಸಿ ಹೊರಟು ಹೋಗುತ್ತಿದ್ದಾಗ, ತಾನು ಅನುಭವಿಸುತ್ತಿದ್ದ ಒಂಟಿತನವನ್ನು ಬೇಸರವನ್ನು ಬಲರಾಮ ತನ್ನ ಅನುಜನಿಗೆ ಹೇಳುತ್ತಾನೆ. ತನ್ನ ಅಂತರಂಗದ ಅನುಭವಗಳನ್ನು ಬಲರಾಮ ಬೇರೆ ಯಾವ ಗೆಳೆಯರೊಡನೆಯೂ ಹಂಚಿಕೊಳ್ಳಲಾರ, "ನೀನಿಲ್ಲದಿರಲೇಕಾಂಗಿ ನಾ ಗೆಳೆಯ ರಿವರುಂಟೆನಗೆ । ದಿಟ, ಒಳಸರಿಯಲೆನ್ನೀರವೊಳಿವರ ನಡೆಗುಂಟಲ್ಲೆ ಗೆರೆ । ನಿನಗೊಬ್ಬನಿಗೆ ಯಿಲ್ಲಿ ಸರ್ವತ್ರ ಗಮನಂ ಗೋವಿಂದ...." ಎನ್ನುತ್ತಾನೆ ಬಲರಾಮ. ಬಲರಾಮನ ಮಾತುಗಳ ಮೂಲಕವೇ, ಸೋದರ ವಾತ್ಸಲ್ಯದ, ಬೇರೆ ಗೋಪಾಲಕರೊಡನೆ, ಬಲರಾಮ, ಕೃಷ್ಣರ ಬಾಂಧವ್ಯದ ಆಯಾಮ ತೆರೆದುಕೊಳ್ಳುತ್ತದೆ. ಸೋದರರ ಸಂಭಾಷಣೆಯ ನಡುವೆ ಕೂಡಿಕೊಂಡು ಬರುವ ಮಳೆಮೋಡಗಳು, ಬಲರಾಮನಿಗೆ ಕೃಷ್ಣನ ಸ್ವರೂಪಕ್ಕೆ ಸರಿಜೋಡಿಯಂತೆನಿಸುತ್ತವೆ, ಮಳೆಯ ಸುಂದರ ವರ್ಣನೆಯೊಂದಿಗೇ ಬಲರಾಮನ ಮೂಲಕ, ಈ ನೆಲದ ಶ್ರೇಷ್ಠತೆಯನ್ನೂ ಪು.ತಿ.ನ. ಅಭಿವ್ಯಕ್ತಿಸುತ್ತಾರೆ. "...ಹಿರಿಯರೆಂಬುದು ದಿಟ ನಮ್ಮೀ ನೆಲವೆ ಕಂಪಿನ ತವರು. ಇಲ್ಲಲ್ಲದಿನ್ನೆಲ್ಲಿಹುದು ಬಿಸಿಲೊಳೇ ಬೆಳದಿಂಗಳೊಳೆ ಗಾಳಿಯೊಳೆ ನೀರೊಳೆ? ನಮ್ಮೀಮಣ್ಣು ನೀಡಿದರುಂಟು । ಇಲ್ಲದಿರೆ ಪರಿಮಳವಿಲ್ಲವೀ ಸೃಷ್ಟಿಯೊಳೆಂಬೆನಾ ।" "ಇಂತಹ ವನದ ಮಳೆಗಂಪು ತರುವ ಮಾರುತದ । ತೆಕ್ಕೆ ಸೊಗಕೆ ಕೃಷ್ಣ ಸಾಮೀಪ್ಯದಲಿ ಇಂಥ ನೂರು ಜನ್ಮ ಬಯಸುತ್ತಾನಂತೆ ಬಲರಾಮ! ಬಲರಾಮನೊಡನೆ ನಮ್ಮ ಕವಿಯ ಹೃದಯವೂ, ಅವರೊಡನೆ ಓದುಗರಾದ ನಮ್ಮ ಹೃದಯವೂ ಇದನ್ನೇ ಬಯಸುತ್ತದೆ. ನಭದಿಂದ ವಸುಮತಿಯವರೆಗೆ ಸೇತುವನು ಕಟ್ಟಿದ ಶರವರ್ಷದಲ್ಲಿ ಸೋದರರಿಬ್ಬರೂ ತೋಯ್ದು, ಅಣ್ಣ ಬಲರಾಮ ಕೃಷ್ಣನುಟ್ಟಿದ್ದ ಒದ್ದೆ ಬಟ್ಟೆಯನ್ನು ಬಿಚ್ಚಿಸಿ, ಹಿಂಡಿ, ಮತ್ತೆ ಉಡಿಸುತ್ತಿರುವಾಗ, ಕೃಷ್ಣ ತಾನು ಕಂಡ

ಭಾಂಡೀರ ವೃಕ್ಷದ ಸಂಗತಿಯನ್ನೂ ವೇಣುಗಾನ ಪರಿಣಿತಿ ಸಿದ್ಧಿಸಿ ಕೊಂಡಿದ್ದನ್ನೂ ಹೇಳುತ್ತಾನೆ. ಉಳಿದೆಲ್ಲ ಗೆಳೆಯರಿಗೂ ಈ ವೃಕ್ಷದ ರಹಸ್ಯ ತಿಳಿಸಿ ಮರುದಿನ ವೃಕ್ಷದ ಆ ಸಾಲ್ಗಂಬಗಳಡಿ ಆಡುವ ಇಚ್ಛೆಯನ್ನು ಕೃಷ್ಣ ತಿಳಿಸಿ ಗೋಪಾಲಕರಲ್ಲಿ ಹರ್ಷ ಚಿಮ್ಮಿಸುತ್ತಾನೆ.

ಮರುದಿನ ಬೃಂದಾವನದವರೆಲ್ಲರೂ ಆ ಮಹಾವೃಕ್ಷದ ಅಡಿಯಲ್ಲಿ ಸೇರುತ್ತಾರೆ. ಬಗೆಬಗೆಯ ಭಕ್ಷ್ಯಭೋಜ್ಯ, ಪೇಯಗಳನ್ನೂ ತಲೆಯ ಮೇಲೆ ಹೊತ್ತುಕೊಂಡು ಬರುತ್ತಾರೆ ಹಾಗೂ ಒಬ್ಬೊಬ್ಬರೂ ಒಂದೊಂದು ವಿಧದ ನಾದೋತ್ಪತ್ತಿಯಲ್ಲಿ ಲೀನರಾಗುತ್ತಾರೆ. ಕೊಂಬು, ಕಹಳೆ, ಭೇರಿಗಳ ಧ್ವನಿ ಆ ಕಾಂತಾರದಲ್ಲಿ ತುಂಬಿಕೊಂಡಿದ್ದು ಅದುವರೆಗೂ ಆ ಕಾಂತಾರ "ಸೃಷ್ಟಿಯೊಳು ಮಾನುಷಾತ್ಮ ಪ್ರಭುತೆಯ ಕೈವಾರಿಸುವ ಜಯನಿಸ್ವನವ" ಕಂಡಿರಲಿಲ್ಲವಂತೆ. ನಂತರ ಹೆಂಗಳೆಯರ ಕೊರಳಿನಿಂದ ಮೂಡಿ ಬಂದ 'ಇನಿವಾಡು'ಗಳು ಮೂಡಿದಾಗ, ಕೃಷ್ಣನೊಳಗಿದ್ದ ಗಾನಮೂಲವನ್ನು ಎಚ್ಚರಿಸಿ, ಅವರ ಸರಮೇಳಕಿಂಬು ಕೊಡಲೆಂಬಂತೆ, ಕೃಷ್ಣ ಮುರಳಿಯನ್ನು ತುಟಿಗೆ ತಗಲಿಸುತ್ತಾನೆ.

❍

# ವೇಣುಗಾನಾವತರಣಂ
# ವೇಣುಗಾನ ತರಂಗಿಣೀ ಪ್ಲಾವನಂ

'ವೇಣುಗಾನಾವತರಣಂ' ನ ಎಪ್ಪತ್ತೈದನೆಯ ಸಾಲಿನಿಂದ ನೂರಮುವತ್ತನಾಲ್ಕನೇ ಸಾಲಿನ ತನಕ, 'ವೇಣುಗಾನರತಂಗಿಣೀಪ್ಲಾವನಂ' ಸಂಪೂರ್ಣವಾಗಿ ಶ್ರೀ ಕೃಷ್ಣನ ಮುರಳೀ ಗಾನದ ಮೋಹಕತೆ ಹಾಗೂ ಅದರ ಪ್ರಭಾವದ ವರ್ಣನೆಗೆ ಮೀಸಲಾಗಿವೆ. 'ಕೃಷ್ಣನ ಕೊಳಲಿನ ಕರೆ' ಎಂಬ ಲೇಖನದಲ್ಲಿ, ಪು.ತಿ.ನ. ಕೃಷ್ಣ ಮತ್ತು ಅವನ ಕೊಳಲಿನ ಇತಿಹಾಸವನ್ನು ವಿವರಿಸಿದ್ದಾರೆ (ಪು.ತಿ.ನ. ಸಮಗ್ರ ಗದ್ಯ ಸಂಪುಟ 'ಕೃಷ್ಣನ ಕೊಳಲಿನ ಕರೆ' ಪುಟ.೫೮೦–೫೮೪). ತಮ್ಮ 'ಗೋಕುಲ ನಿರ್ಗಮನ' ಗೀತರೂಪಕ ಇಡೀ ಕೊಳಲಿಗೇ ಮೀಸಲಿರುವುದಾಗಿಯೂ, 'ಶ್ರೀಹರಿಚರಿತೆ'ಯಲ್ಲಿ ಈ ವೇಣುಗಾನದ ವಿಸ್ತಾರವಾದ ವರ್ಣನೆಗಳಿರುವುದಾಗಿಯೂ ಹೇಳಿದ್ದಾರೆ. "ಕೃಷ್ಣನ ಮುರುಳೀಗಾನ ಹಳ್ಳಿಗರಿಗೆ ಪ್ರೇಮಿಪ ಸರಳ ಸಾಧು ಸಜ್ಜನರಿಗೆ ಸತ್ಯ–ಶಿವ–ಸುಂದರ ಮೌಲ್ಯತ್ರಯಗಳ ಸಾಕ್ಷಾತ್ಕಾರದತ್ತ ಸಾಗುವ ಮುಮುಕ್ಷಗಳಿಗೆ, ನಗರಗಳಲಿ ಅದು ಕೇಳಿ ಬರದು...." ಪು.ತಿ.ನ. ಕೃಷ್ಣನ ಕೊಳಲಿನ ಇತಿಹಾಸದ ಬಗೆಗೆ ಹೀಗೆ ಹೇಳುತ್ತಾರೆ: "ಕೃಷ್ಣನ ಕೊಳಲಿನ ಕರೆ ವೇದಗಳಲ್ಲಿ ಕೇಳಿ ಬರುವುದಿಲ್ಲ, ಅಲ್ಲಿ ಝೇಂಕರಿಸುತ್ತಿರುವುದು ವೀಣಾಧ್ವನಿ ಮಹಾಭಾರತದಲ್ಲಿ ಇದು ಬರಿಯ ಸಂಗೀತವಾಗಿ ಉಲಿಯುತ್ತಿದೆ. 'ಹರಿವಂಶ'ದಲ್ಲಿ ಇದು ಗೋಪಾಲಕರ ವಾದ್ಯ.... ಗೊಲ್ಲರ ಕೊಳಲನ್ನು ಬಾಜಿಸಿತ್ತಾ ಬಲರಾಮ ಕೃಷ್ಣರು ಕಾಡಿನಲ್ಲಿ ಗೆಳೆಯರ ಸಂಗಡ ಆಟವಾಡುತ್ತಿದ್ದ ಮನೋಹರ ದೃಶ್ಯ ನಮಗೆ 'ಹರಿವಂಶ' ದಲ್ಲಿ ಸಿಕ್ಕುತ್ತದೆ. ಕಾಮಿನಿಯರನ್ನು ಸೆಳೆವ ಪ್ರೌಢನ ಕೊಳಲ ವಾದ್ಯ ಅಲ್ಲಿ ಕೇಳಿ ಬರುವುದಿಲ್ಲ.... 'ವಿಷ್ಣು ಪುರಾಣ'ದಲ್ಲೂ ಅದರ ಮಧುರ ಸ್ವರದ ಸೆಳೆವಿನ ಹೊಳಹನ್ನು ಕಾಣೆವು.....

"ಒಟ್ಟಿನಲ್ಲಿ ಮಹಾಭಾರತದಲ್ಲಿ ಕೃಷ್ಣನ ಕೊಳಲಿನ ಸೊಲ್ಲಿಲ್ಲ: 'ಹರಿವಂಶ' 'ವಿಷ್ಣು ಪುರಾಣ'ಗಳಲ್ಲಿ ಬಲರಾಮ ಕೃಷ್ಣರಿಬ್ಬರೂ ತಮ್ಮ ಎಳೆತನದಲ್ಲಿ ಗೊಲ್ಲರ

ಕೊಳಲನ್ನೂದುತ್ತಿದ್ದರು.. ಆದರೆ ಹೆಂಗಸರ ಕಾಮವನ್ನು ಕೆರಳಿಸುವ ಗುಣ ಅದಕ್ಕಿನ್ನೂ ಬಂದಿರಲಿಲ್ಲ. ಶ್ರೀಮದ್ಭಾಗವತದಲ್ಲಿ ಈ ಗುಣವನ್ನು ಅದು ಧಾರಾಳವಾಗಿ ಪಡೆದು, ಮುಂದಿನ ದಿನಗಳಲ್ಲಿ ಅದು ಹೆದ್ದೊರೆಯಾಗಿ ಹರಿದಿದೆ. 'ಭಾಗವತ' ಒಂದು ಅಧ್ಯಾಯವನ್ನೇ ಕೃಷ್ಣನ ಕೊಳಲಿನ ಮೋಹಕತೆಗೆ ಮೀಸಲಾಗಿಟ್ಟಿದೆ. ಲೀಲಾಶುಕನ "ಕೃಷ್ಣ ಕರ್ಣಾಮೃತದಲ್ಲಿಯೂ ಕೃಷ್ಣನ ಕೊಳಲು ತುಂಬ ಮೋಹಕವಾಗಿ ನಿನದಿಸುತ್ತದೆ." ('ಕೃಷ್ಣನ ಕೊಳಲಿನ ಕರೆ' ಪು.ತಿ.ನ. ಸಮಗ್ರ ಗದ್ಯ ಸಂಪುಟ, ಪುಟ. ೫೮೧) ಹಾಗೆಯೇ, ದಾಸರ ಕೀರ್ತನೆಗಳಲ್ಲಿ ಕೃಷ್ಣನ ಕೊಳಲಿನ ಮಾಧುರ್ಯ ರಸ ಕೋಡಿ ಹರಿಯುವುದನ್ನೂ, ಆಧುನಿಕ ಕವಿಗಳು ಕೂಡ ಕೃಷ್ಣನ ಕೊಳಲು, ಕೋಳಲಗಾನದ ಬಗೆಗೆ ಪರವಶರಾಗಿ ಬರೆದಿರುವುದನ್ನೂ ಸೋದಾಹರಣ ವಿವರಿಸಿದ್ದಾರೆ, ಪು.ತಿ.ನ. "ಕೃಷ್ಣನು ತನ್ನ ಮುರಳಿಯ ಮೂಲಕ ಕಾಮವನ್ನು ಕೆರಳಿಸಿ, ಅದನ್ನು ತಣಿಸಿ ಆತ್ಮಾನಂದದಲ್ಲಿ ಜೀವವನ್ನು ತೇಲಿಸುತ್ತಾನೆ ಎಂಬುದು ಈ ಎಲ್ಲ ಮಾತುಗಳ ಚರಿತಾರ್ಥ" ಎಂದು ಹೇಳಿ ಪು.ತಿ.ನ. ತಮ್ಮ ಸಾಲುಗಳನ್ನು ಉದ್ಧರಿಸುತ್ತಾರೆ, "ನಿಲ್ಲಿಸದಿರು ವನಮಾಲಿ ಕೊಳಲ ಗಾನವ । ನಿಲ್ಲಿಸೆನೀ ಭವಭೀತಿಯ ಕಳೆವುದೆಂತೋ ಕೇಶವಾ।"

ಈ ಎಲ್ಲ ಭಾವಗಳೂ 'ಶ್ರೀಹರಿಚರಿತೆ'ಯ ಎರಡು ಉಲ್ಲಾಸಂಗಳಲ್ಲಿ ಅತ್ಯಂತ ಸಾರವತ್ತಾಗಿ ರಸಪೂರ್ಣವಾಗಿ ವ್ಯಕ್ತಗೊಂಡಿವೆ. ಶ್ರೀ ಕೃಷ್ಣನ ಮುರುಳಿಗಾನದ ಕಲಾಪ್ರಪೂರ್ಣತೆ ರಸಾನುಭೂತಿಯನ್ನುಂಟು ಮಾಡಿ, ಕೇಳುಗನ ಮನಸ್ಸನ್ನು ಉನ್ನತ ಮಟ್ಟಕ್ಕೇರಿಸುತ್ತದೆ. ಕಲೆಯಿಂದ ನಾವು ಏನನ್ನು ಬಯಸುತ್ತೇವೆ ಎಂಬುದನ್ನು ಪು.ತಿ.ನ. ಹೀಗೆ ವಿವರಿಸುತ್ತಾರೆ: "ಎಲ್ಲ ಕಲೆಗಳಿಂದಲೂ, ದೈವಾಗಮ ಸಾಮಾಜಿಕೋತ್ಸವ, ಕಲ್ಪಗಳಿಂದಲೂ, ಗೃಹಕಲ್ಪಗಳಿಂದಲೂ ನಾವು ಬಯಸುವುದು ರಸಾನುಭೂತಿಯನ್ನು, ಸತ್ಯ–ಶಿವ–ಸುಂದರ ಎಂಬ ಮೌಲ್ಯಗಳ ಅರಿವು ಈ ರಸಾನುಭೂತಿಯಲ್ಲಿ ನಮಗೆ ನಮ್ಮ ಯೋಗ್ಯತೆಗೂ, ಸಂಸ್ಕಾರಕ್ಕೂ ತಕ್ಕಂತೆ ದೊರೆಯುತ್ತದೆ, ಈ ಅನುಭೂತಿಯನ್ನು ನಾವು ಪಡೆಯುವುದು ರಸಪ್ರಜ್ಞೆಯಲ್ಲಿ .... ರಸಾನುಭೂತಿ ಎಂದರೆ, ನಮ್ಮ ಸ್ವಭಾವ ತನ್ನ ಜಾಗರದೊಂದು ನೆಲೆಯಲ್ಲಿ ಸ್ವಾರ್ಥ ಮುಕ್ತವಾಗಿ ತನ್ನ ನಿರುಪಾದಿಕಾಂತಃಕರಣ ವೃತ್ತಿಯಿಂದ ಪಡೆಯುತ್ತಿರುವ ಭವಸ್ತರ ದುರ್ಲಭವಾದ ಸಂವೇದನೆಗಳ ಭೋಗಾನುಭವ ಅಥವಾ ನಮ್ಮ ನಿರುಪಾಧಿಕ ಪ್ರಜ್ಞೆಯಲ್ಲಿ ಬ್ರಹ್ಮಾತ್ಮರತ್ಯೈವನುಭೂತಿ" ('ರಸಪ್ರಜ್ಞೆ', ಪು.ತಿ.ನ. ಸಮಗ್ರ ಗದ್ಯ ಸಂಪುಟ. ಪುಟ ೫೧೨). ಪು.ತಿ.ನ. ಅವರ ವಿಚಾರದಂತೆ "ರಸ ಎಂಬುದೊಂದು ಊರ್ಜಾವಿಶೇಷ, ಮನುಷ್ಯ ಅಂತಃಕರಣದಲ್ಲಿ ಮಾತ್ರ ಉತ್ಪನ್ನವಾಗಿ ಒಂದು ವಿಶಿಷ್ಟ ಕಾಂತ ಕ್ಷೇತ್ರವನ್ನು ನಿರ್ಮಿಸುವಂಥದು. ಈ ಕ್ಷೇತ್ರಕ್ಕೆ ಒಳಪಟ್ಟ ಮಾನುಷಾಂತಃಕರಣ ಉಲ್ಲಾಸಿತವಾಗುತ್ತದೆ, ಆನಂದಿತವಾಗುತ್ತದೆ. ರಸ ಕಣ್ಣ ಮನಸ್ಸಿನ ಹೊರತುಳುಕು, ನಿರ್ಮಲಾತ್ಮದ ಉತ್ ಸ್ಫೂರ್ಜನ ಅನುರಾಗಯುಕ್ತ ಚಿತ್ತದ ಹೊರಹೊಮ್ಮುವಿಕೆ...." ('ರಸಪ್ರಜ್ಞೆ'. ಪುಟ.೫೧೨ ಪು.ಸ.ಗ.ಸಂ.).

"ಶ್ರೀಹರಿಚರಿತೆ"ಯ ಕೃಷ್ಣನ ಮುರಳಿಗಾನದ ಪ್ರಭಾವವನ್ನೂ, ರಾಸಲೀಲಾ ರಹಸ್ಯವನ್ನು ಅರಿಯಲೂ ಪು.ತಿ.ನ. ರ ರಸಚಿಂತನೆ ನೆರವಾಗುತ್ತದೆ. ಭಾಂಡೀರ ವೃಕ್ಷದಡಿಯಲ್ಲಿ ಸೇರಿದ್ದ ಸಮೂಹದೆದುರು, ಕೃಷ್ಣ ತನ್ನ ಕೊಳಲನ್ನು ತುಟಿಗಿಟ್ಟು ಗಾಯನಕ್ಕಾರಂಭಿಸುತ್ತಲೇ, ಆ ಸಮೂಹ "...ಇದು ಗಾನ ಮಿಕ್ಕುದು ಸದ್ದು ಎಂದೆಯೆ ಬಗೆದು" ಆ ಮಂದಿ ದನಿಯಡಗಿ ನಿಶ್ಯಬ್ದವಾಯಿತಂತೆ! ಆರಂಭದಲ್ಲಿ ಪರಿಚಿತ ನಾದಗಳನನುಕರಿಸುತ್ತ ಚಾತುರ್ಯವನ್ನು ಮೆರೆಯುತ್ತಾನೆ. ಪ್ರಕೃತಿಯಲ್ಲಿನ ಪಶು, ಪಕ್ಷಿ, ಮರ, ಮಳೆನೀರು ಹರಿವ ನದಿಗಳ ನಾದವನ್ನು ತನ್ನ ಮುರಳಿಯಲ್ಲಿ ಮೂಡಿಸಿ ಸಮೂಹದ ಮನಸ್ಸನ್ನು ರಂಜಿಸಿ ವಶಪಡಿಸಿಕೊಳ್ಳುತ್ತಾನೆ. ನಂತರ ಲಘುಗೀತೆ, ವೀರ, ಕರುಣೆ, ಶೃಂಗಾರ ಅದ್ಭುತ ಮುಂತಾದ ನವರಸಗಳಲ್ಲಿ ಪರ್ಯಟಿಸುತ "ಎದೆ ಗುಹೆಗೆ ದೀವಟಿಗೆಯ ಹಿಡಿಯು"ತ್ತಾನಂತೆ! ನಂತರ ಆ ಮುರಳಿಗಾನ ಮತ್ತೂ ಉನ್ನತಸ್ತರಕ್ಕೇರುತ್ತ "ಸ್ವಸ್ವರೂಪ ಜ್ಞಾನದಾಯಕ"ವಾಗುತ್ತದೆ. ಶ್ರೀ ಹರಿಯ ಇಂತಹ ದಿವ್ಯ ವೇಣು ಸ್ವನವನಾಲಿಸಲು ದೇವಗಣ, ಸಿದ್ಧ ಗಂಧರ್ವಾದಿಗಳು ಬಾನಲ್ಲಿ ನೆರೆಯುತ್ತಾರೆ. ಈ ವೇಣುಗಾನದಿಂದ "ಇಳೆಗೆ ದೇವಸ್ತರಾರೋಹಣ" "ಬಾನವರಿಗೆ ವೇಣುಗಾನ ಸ್ತನ್ಯತರ್ಷ" ಸ್ವರ್ಗ ಮರ್ತ್ಯಗಳ ನಡುವೆ ಸಮರಸ ಸಂಪರ್ಕ ಸಿದ್ಧಿಸುತ್ತದೆ, ಹಾಗೆಯೇ "... ಭವಿಗೆ ಯೋಗಕ್ಷೇಮ ಕಾತರವಡಗಿ ನಿರ್ವೃತಿಕೆ ಸೋಕುತ್ತದೆ..." ಇಂತಹ ವೇಣುಗಾನದ ಪ್ಲಾವಕತೆಯ ಬಗೆಗೆ "ವೇಣುಗಾನ ತರಂಗಿಣಿ ಪ್ಲಾವನಂ"ನಲ್ಲಿ, ಮನತುಂಬಿ ವರ್ಣಿಸುತ್ತಾರೆ, ಆ ಭಾಂಡೀರ ವೃಕ್ಷ ದಡಿಯಲ್ಲಿನ "......ತ್ರಿಜಗತ್ ಪಾವನೆಯ, ಕೃಷ್ಣ ಪ್ರಾಣ ಸಂವಾಹಿತೆಯ, ಮುರಲೀ ಗಾನವಾಹಿನಿಯನವಗಾಹಿಸುತ। ಜೀವಜಾತರ ರೂಢಿಗಳ ಬಿಗಿಯಳಿದು ಹೊಸತನ ಪಡೆದು ಲಘು। ವಾಗಿ ಚಿನ್ಮಾತ್ರವಾಗುತ ರಸದೊಳು ತೇಲಿತೇನೆಂಬೆನೈ।", ಇಂತಹ ದಿವ್ಯ ರಸಾನುಭೂತಿಯಿಂದಾಗಿ ಜೀವಿಗಳು ತಮ್ಮ ದೈನಂದಿಕ ರೂಢಿಗಳ ಕಟ್ಟನ್ನು ಹರಿದುಕೊಂಡು ಹಗುರಾಗಿ ಆ ಮನಸುಗಳು ಪ್ಲಾವಕತೆಯನ್ನನುಭವಿಸುತ್ತವೆ. ಹಾಗಾಗಿ ಇಂತಹ ಗಾನವನ್ನು ಪು.ತಿ.ನ. "ಸೃಷ್ಟಿ ಸುರಭಿಯ ಸೊರೆಯ ಬಿಡಿಸುವ ಕರು" "ದೈವಿ ಭಾವವನು ಬಾಳಿಂ ಹಿಳಿದ ವಾಣಿಯ ಕರ" ಎನ್ನುತ್ತಾರೆ. ಈ ಗಾನದ ಮತ್ತೊಂದು ಶ್ರೇಷ್ಠ ಸಾಮರ್ಥ್ಯವೆಂದರೆ "ತಾನೊಂದೆಯುಂಟೆನಿಸುವೀ ಲಯ ವಿನ್ಯಾಸ ವೇಣುಸ್ವನಂ। ಕೊಂಡುದೇನಂ? ತಂದುದೇನಂ ರುಚಿಗಳಂ ಕೊಂಡಿತಿಳೆಯಿಂ। ರುಚಿಕರ ಮಾಯ್ತೆನಿಸಲದ ತಾಂ ಮೌನದೊಳು ವಿರಮಿಸುವ ಸಮಯದಿ..." ಈ ಇಳೆಯ ಸಾಮಾನ್ಯ ರುಚಿಗಳನ್ನು ಅಸಾಮಾನ್ಯವಾಗಿ ರುಚಿಕರವನ್ನಾಗಿಸುವ ಸಾಮರ್ಥ್ಯ ಈ ವೇಣುಗಾನದ್ದು, ಇಂತಹ ಸರ್ವ ಹೃದಯಂಗಮವಾದ ಮುರಳಿಗಾನವು ಬೃಂದಾವನದ ಆ ಮಂದಿಗೆ ಎಂತಹ "ಸ್ವಾಸ್ಥ್ಯಮಂ, ಸಂದೀಪ್ತಿಯಂ" ತಂದಿತೆಂದರೆ, ಜೀವಾತ್ಮರಿಂದ, ತತ್ ಜನ್ಮದಿಂದ, ಕಾಲ ದೇಶ, ಕರ್ಮಗಳನ್ನೂ ಪ್ರತ್ಯೇಕಿಸುತ, ಶುದ್ಧೀಕರಿಸುತ್ತ ಆ ದಾಮೋದರನು ಚಿದಾನಂದ ಸ್ವರೂಪವಾದ ಮುರಳೀ ನಾದವನ್ನು ಪರಿವೇಷ್ಟಿಪನೋ

ಎಂಬಂತೆ, ವೃದ್ಧರಿಂದ ಜಗುಳಿದವು ವರ್ಷಗಳು, ಎಳೆಯರಿಂದ ಚಂಚಲಭಾವ ಮಾಯಾವಾಯಿತು, ಸಂಸಾರಿಗಳಿಂದ ಅರೆಕೊರೆಗೊಳಳಿದವು, ಆಸರೆಯಿಲ್ಲ ಒಲಿವವರಿಲ್ಲ ವೆಂಬುವರಲ್ಲಿ ಹೀನಭಾವ ಅಳಿಯಿತು, ಪ್ರಭುವಿಂದ ಪ್ರಭುತೆ, ದಾಸ್ಯನಿಂದ ದಾಸ್ಯಭಾವ, ಸೋಮಾರಿಯಿಂದ ಆಲಸ್ಯ ತೊಲಗಿತು. ಜೀವಿಗಳಲ್ಲಿ ಅಂತರ್ಗತವಾಗಿರುವ ಇತ್ಯಾತ್ಮಕ, ನೇತ್ಯಾತ್ಮಕ ಅಂಶಗಳಲ್ಲಿ, ಎಲ್ಲ ನೇತ್ಯಾತ್ಮಕ ಅಂಶಗಳನ್ನು ಅಳಿಸಿ ಎಲ್ಲವನು ಸತ್ವ ಗುಣ ಭರಿತ ಮಾಡುವ ಅನನ್ಯ ಮುರಳಿಗಾನವು, ಸೃಷ್ಟಿಯನ್ನು ಸೃಷ್ಟಿಸಲ್ಪಟ್ಟ ಸಕಲ ಜೀವಗಳನ್ನು ರಸದೀಪ್ತಿಯಲ್ಲಿ ಮುಳುಗಿಸಿ ಆ ವೇಣುಗಾನ, ಎಲ್ಲವನ್ನು ಎಲ್ಲರನ್ನು ಅಧ್ಯಾತ್ಮದ ಅದ್ವೈತದ ದಿವ್ಯತೆಗೇರಿಸುತ್ತದೆ. "ಬಾಹ್ಯಬ್ರಹ್ಮದಿಂದ ಜೀವಾತ್ಮ ಗೇಹವ ಹೊಕ್ಕು। ರಾಗಸ್ತರಗಳನು ಶೋಧಿಸುತ ನೀರಾಗಚಿದ್ವಯದೊಳು । ಶೃತಿಲಯಜ್ಞಾನದಾರ್ಢ್ಯಂ ಸ್ವಾಚ್ಛಂದಕ್ಕೆಡೆಗೊಡೆ ಬಹುಗತಿಯೊ।ಳಾತ್ಮ ಕ್ಷೇತ್ರಮಂ ಸಂಚರಿಸಿ ಘನರಾಗಂಗಳೊಳ್ ಪಾವಿತ್ರ್ಯ । ರಸದೊಸಗೆಯಂ ಮೂಡಿಸಲಿಲ್ಲಂ ಸರಿದು ಸಕಲಾಪೋಹ । ನಾದ್ವೈತ ನೆಲೆಯಂ ಮುಟ್ಟಿ ಎಚ್ಚರಗಳೆಯುತಂ" ... ಮತ್ತೆ ಪರಿಚಿತ ಸಾಧಾರಣ ನೆಲೆಗೆ ಬಂದು ನಿಲ್ಲುತ್ತದೆ ಆ ವೇಣುಗಾನ. ಇಂತಹದೊಂದು ರಸಾನುಭೂತಿಯನ್ನುಂಟುಮಾಡಲು, ಕಲೆಯ ಆಳವಾದ ಶಾಸ್ತ್ರಜ್ಞಾನದೊಂದಿಗೆ, ಭಾವದೀಪ್ತಿ, ಸಹೃದಯತೆಗಳೂ ಅವಶ್ಯಕವೆಂಬುದನ್ನು ಪು.ತಿ.ನ. ತಿಳಿಸುತ್ತಾರೆ.

ಈ ಸೃಷ್ಟಿ ಅಥವಾ ಲೋಕವೆಂಬ ಬಾಹ್ಯ ಬ್ರಹ್ಮದಿಂದ ಜೀವಾತ್ಮಗೇಹವ ಹೊಗಲು, ಗಾನ ರಾಗಸ್ತರಗಳನ್ನು ಶೋಧಿಸಬೇಕು ಮತ್ತು ಗಾನದ ಉಸಿರಾಗಿರುವ ಶೃತಿಲಯಗಳ ಜ್ಞಾನದ ದೃಢತೆ ಇರಬೇಕು. ಶಾಸ್ತ್ರದ ಪರಿಣಿತಿಯ ಪರಿಧಿಯೊಳಗೆ ಬರುವ ಸ್ವಾತಂತ್ರ್ಯದಿಂದ, ಭಾವ, ಕಲ್ಪನೆ, ಭಾವ ದೀಪ್ತಿಗಳರಳಿ ಘನರಾಗಗಳ ಮೂಲಕ ಆತ್ಮ ಕ್ಷೇತ್ರವನ್ನು ಸಂಚರಿಸಬೇಕು ಗಾನ ಎನ್ನುತ್ತಾರೆ ಪು.ತಿ.ನ. ಶಾಸ್ತ್ರಜ್ಞಾನ, ಭಾವದೀಪ್ತಿ, ರಸಜಾಗರಗಳು ಸಮ್ಮಿಳನಗೊಂಡ ಇಂತಹ ಗಾನವು ಕೇಳುಗರಲ್ಲಿಯೂ ರಸಪ್ರಜ್ಞೆ ಮೂಡಿಸಿ, ವ್ಯಕ್ತಿಗೂ ಸಮಷ್ಟಿಗೂ, ಈ ಸೃಷ್ಟಿಗೂ ಸೃಷ್ಟಿಕರ್ತನಿಗೂ ನಡುವೆ ಅವಿನಾಭಾವ ವನ್ನುಂಟುಮಾಡುತ್ತದೆ: ಇಂತಹ ತನ್ನ ಗಾನದಿಂದ ಬೃಂದಾವನದ ಜನಮನವನ್ನು ಅಧ್ಯಾತ್ಮದ, ಅದ್ವೈತದ ಶಿಖರಕ್ಕೇರಿಸಿ, ಅವರಲ್ಲಿ ರಸಸಂಚಾಲನೆ ಮಾಡಿದ ಶ್ರೀಹರಿಯು, ಕೊನೆಯಲ್ಲಿ ತನ್ನ ಗೆಳೆಯರ ಎಲೆಪೀಪಗಳ ಮಟ್ಟನ್ನು ನುಡಿಸಿ, ಅವರನ್ನು ಮತ್ತೆ ಈ ಲೌಕಿಕಕ್ಕೆ ಎಳೆತರುತ್ತಾನಂತೆ.

❍

# ರಾಧಾ ರಸದರ್ಶನ

ವೇಣುಗೋಪಾಲಗಾನಸ್ನಾನ...ಪೂತ ಬೃಂದಾವನದ ಸಮುದಾಯಕ್ಕೆ ಅದೊಂದೇ ಸತ್ಯ ಮಿಕ್ಕುದೆಲ್ಲ ಮಿಥ್ಯವೆನಿಸುತ್ತದೆ. ಇನ್ನು ಬೃಂದಾವನದ ತರುಣಿಯರೊ? ಕೃಷ್ಣನ ಕೊಳಲಿನ ಧ್ವನಿ ಕೇಳಲು ದನಕರುಗಳ ಬನದ ಮುಂದೆ ಮೇಯುತ್ತಿರುವ ಕಡೆಗೆ ಕಿವಿಮಾಡಿ ನಿಲ್ಲುವರು. ಆ ತರುಣಿಯರನ್ನು "ಶ್ರೀಹರಿಚಿತ್ತ ಸದ್ಮೆಯರ್ ತದ್ರಸಪದ್ಮೆಯರ್" ಎಂದು ಬಣ್ಣಿಸುತ್ತಾರೆ ಪು.ತಿ.ನ. ಅವರೆಲ್ಲರೂ, ಮಾಧವನೇ ತಮ್ಮ ಪತಿಯಾಗಬೇಕೆಂದು ನೋಂಪಿ ಹಿಡಿದಿರುವವರು. ಈ ತರುಣಿಯರ ನಡುವೆ ರಾಧೆ ವಿಶಿಷ್ಟವಾದವಳು. ರಾಧೆಯು ಯಾರು? ರಾಧೆಯೆಂಬ ಹೆಣ್ಣು ಕೃಷ್ಣ ಜೀವಿಸಿದ್ದ ಕಾಲಘಟ್ಟದಲ್ಲಿ ಇದ್ದಳೋ ಇಲ್ಲವೋ ಎಂದು ಶಂಕೆಯಿಂದ, ಪು.ತಿ.ನ. ಪ್ರಶ್ನಿಸುತ್ತಾರಾದರೂ, ರಾಧಾ ಮಾಧವರ ರಸ ವಿಲಾಸದ ಬಗೆಗೆ, ಆ ಪ್ರಣಯ ಪ್ರಸಂಗ, ಜನಮನದಲ್ಲಿ, ಹರಿಭಕ್ತ ಮಾನಸದಲ್ಲಿ ರಾರಾಜಿಸುವುದರ ಬಗೆಗೆ ಶಂಕೆ ಪಡುವುದಿಲ್ಲ. "ಗೋವ್ರಜದೊಳಾವಳು ರಾಧೆ? ಎಲ್ಲಿಹಳು? ಯಾವನ ಮಗಳು? ಕನ್ನೆಯೋ ಕುಟುಂಬಿನಿಯೋ ಬಲ್ಲರಾರ್ ಆ ಹರಿವಲ್ಲಭೆಯ? । ಇತಿಹಾಸ ಬದ್ಧಳೋ ಕವಿಕಲ್ಪನಾವಿರ್ಭೂತಳೊ। ವಿಶ್ವ ವಲ್ಲಭಗುಂಟೆ ಪ್ರಣಯಿನೀ ಪಕ್ಷಪಾತಂ? ಶುಕ । ಮುನಿಯರಿಯ ವ್ಯಾಸನುಮರಿಯನಾ ಪ್ರಣಯ ಪ್ರಸಂಗವನು । ದೊಡೆ ರಾಧೆ ಶ್ರೀಹರಿಯೊಲವ ಸೂರೆಗೊಂಡಾ ಹೆಣ್ಣು । ರಾರಾಜಿಪಳು ಹರಿ ಭಕ್ತಮಾನಸದೊಳುಜ್ವಲ ತರುಣಿ । ದಿವ್ಯಪ್ರೇಮಾಯತನ ಮಾರ್ಗಮೀಕೆಯ ಕೃಷ್ಣಕಾಮಂ।" ಎಂದು ರಾಧೆಯ ಅಸ್ತಿತ್ವವನ್ನು ಅವಳ ಪ್ರೇಮದ ರೀತಿಯನ್ನು ಮನ್ನಣೆ ಮಾಡುತ್ತಾರೆ. ರಾಧೆ ಕೃಷ್ಣನೆಡೆಗೆ ತಾಳುವ ಪ್ರೇಮ "ಗಳಿಗೆಯೊಳೆ ಮುಗಿವ ಮೈಸೊಗವೊಂದೆಯಲ್ಲ"ವೆಂದು ಪು.ತಿ.ನ. ಆ ಪ್ರೇಮದ ಸ್ತರವನ್ನು ವಿಶ್ಲೇಷಿಸುತ್ತಾರೆ: "ಪ್ರಕೃತಿಜ ಮಾಗಿ ಉತ್ ಸ್ಫೂರ್ಜಿಸುತ ನೈಸರ್ಗಿಕಾವೇಗ। ದಿಂದರ ಋತಕಳವಡದೆ ಯೆದುರು ಹಾಯ್ದಾ ಸೆಳೆತಗಳ। ವೈರಾಗ್ಯವಲಯಕೆ ಸಂದು ಸಚ್ಚಿದಾಕರ್ಷಣಕತಾ। ನಳವಡುತ ಸನ್ಮಿಲನ ದಾನಂದದೊಳು ನೆರೆಗೊಂಬುದದು। ದೈಹಿಕ ಜೀವಸಾಂತತ್ಯವಲ್ಲ ಗುರಿಯಾ ಕಂದರ್ಪ। ವಶತೆಗೆ, ಗಳಿಗೆಯೊಳೆ ಮುಗಿವ ಮೈಸೊಗವಲ್ಲವದು..."

ಮಾನವ ಜೀವನದಲ್ಲಿ ಸಹಜವಾದ ನೈಸರ್ಗಿಕ ಸೆಳೆತ ಕಾಮದ ಬಗೆಗೆ ಪು.ತಿ.ನ. ಅವರ ಆಲೋಚನೆಗಳು ಉದಾತ್ತವೂ, ಲೌಕಿಕ ಪಾರಮಾರ್ಥಿಕ ಆಯಾಮಗಳೆರಡನ್ನೂ ಒಳಗೊಂಡಿರುವ ತಾತ್ವಿಕ ಚಿಂತನವಾಗಿದ್ದು ರಸತತ್ವದ ವಿಶ್ಲೇಷಣೆಯಾಗಿದೆ, 'ಶ್ರೀ ಹರಿಚರಿತೆ' ಯಲ್ಲಿ ಪ್ರತಿಪಾದಿಸಲ್ಪಟ್ಟಿರುವ, ರಾಧಾ ಕೃಷ್ಣರ, ಕೃಷ್ಣಗೋಪಿಯರ ಬಾಂಧವ್ಯವನ್ನರಿಯಲು, ಪು.ತಿ.ನ. ತಮ್ಮ 'ರಸಪ್ರಜ್ಞೆ' ಲೇಖನದಲ್ಲಿ ಪ್ರಸ್ತುತಪಡಿಸಿರುವ ಚಿಂತನೆಗಳು ಸಹಕಾರಿಯಾಗುತ್ತವೆ.

"ಪುರುಷಾರ್ಥ ಚತುಷ್ಟಯದಲ್ಲಿ 'ಅರ್ಥ'ದ ವಿಷಯದಲ್ಲಿ ವಿಜ್ಞಾನಿಯ ಮಾತು ಬಹಳುಂಟು, ಕಾಮದ ವಿಚಾರದಲ್ಲಿ ಅದು ಅಷ್ಟಾಗಿ ಕೈ ಹಾಕದೆ ಅದನ್ನು ಆಸಕ್ತಿಗೆ ಮಾತ್ರ ಮಿತಿಗೊಳಿಸುತ್ತದೆ. ಆದರೆ 'ರಸ' ದ ವಿಷಯವನ್ನು ಕೈಗೆತ್ತಿಕೊಂಡಾಗ ಕಾಮವನ್ನು ಮೂಲೆಗೆ ಕೂರಿಸುವ ಹಾಗಿಲ್ಲ, ಅದು ಸಂವೇದನಾಮಯವಾಗುವುದು, ಅದರ ಸಂಸ್ಕಾರದಿಂದಲೇ ಪರಮ ರಸೋಪಲಬ್ಧಿ; ವಿಜ್ಞಾನವನ್ನು ಅರ್ಥತತ್ವೋಪಾಸನೆ ಅಥವಾ ಋತೋಪಾಸನೆ ಎಂದು ಕರೆದರೆ ರಸಾಭಿಗಮನವನ್ನು ಕಾಮತತ್ತ್ವೋಪಾಸನೆ ಎಂದು ಕರೆಯಬಹುದು. ನಿಜವಾಗಿ ಪರಿಭಾವಿಸಿದಲ್ಲಿ ಕಾಮತತ್ತ್ವೋಪಾಸನೆಯೇ ಅದರ ಪರಿಷ್ಕೃತ ರೂಪದಲ್ಲಿ ಆತ್ಮತತ್ವೋಪಾಸನೆ ಅಥವಾ ಸತ್ಯೋಪಾಸನೆ. 'ನಾನು' ಎಂಬುವುದು ವಿಪುಲವೂ, ವಿವಿಧವೂ ಆದ ಕಾಮುಗಳ ವ್ಯವಸ್ಥಿತ ಮೂರ್ತಸ್ವರೂಪವಲ್ಲವೇ? ಇದರ ವ್ಯಾಪನೆಯಿಂದಲ್ಲವೇ ಲೋಕದ ಬದುಕು ನಮಗೆ ಪ್ರಿಯವಾಗುವುದು? ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುವ "ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ ಆತ್ಮವಾ ಅರೇದೃಷ್ಟವ್ಯೋ, ಶ್ರೋತ್ರವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ" ಎಂಬ ವಾಕ್ಯ ಈ ಮಾತನ್ನು ಎತ್ತಿ ಹಿಡಿಯುತ್ತದೆ. ಕಾಮ ತನ್ನ ಅತ್ಯುತ್ಕೃಷ್ಟ ಸ್ಥಿತಿಯನ್ನು ರಸದಲ್ಲಿ ಮುಟ್ಟುತ್ತದೆ, ಅದನ್ನು ಆನಂದ ಎಂದು ಕರೆಯುತ್ತೇವೆ. ವೈಜ್ಞಾನಿಕ ಋತೋಪಾಸನೆ ಜ್ಞಾನದಲ್ಲಿ ಫಲಿಸುತ್ತದೆ, ರಸದ ಆತ್ಮೋಪಾಸನೆ ಆನಂದದಲ್ಲಿ ಕೊನೆಗೊಳ್ಳುತ್ತದೆ, ಈ ಆನಂದ ನಿರುಪಾಧಿಕವಾಗಿದ್ದರೆ, ಸರ್ವಸಾಧಾರಣವಾಗಿರುತ್ತದೆ, ವಿಶ್ವವ್ಯಾಪಕವಾದುದಾಗಿರುತ್ತದೆ, ಸರ್ವೋಪಾಸ್ಯವಾಗಿರುತ್ತದೆ.

ಸಾಮಾನ್ಯವಾಗಿ ನಮ್ಮ ಜಾಗ್ರದವಸ್ಥೆಯಲ್ಲಿನ ಜೀವನ ನಮ್ಮ ಕಾಮ-ಸಂಕಲ್ಪ-ಕ್ರಿಯೆಗಳಿಂದ ನಿಬಿಡವಾಗಿದೆ... ಮಾನವನಲ್ಲಿ ವರ್ತಿಸುವ ಕಾಮದ ಬಗೆಯನ್ನು ನಾವು ಸ್ಥೂಲವಾಗಿ ಎರಡು ವಿಭಾಗಗಳಾಗಿ ಮಾಡಬಹುದು, ಒಂದನ್ನು 'ಜೀವಕಾಮ' ಎಂದು ಕರೆಯೋಣ, ಮತ್ತೊಂದನ್ನು 'ಆತ್ಮಕಾಮ' ಎಂದು ಹೆಸರಿಸೋಣ. ನಾನು ಬದುಕಬೇಕು ಹೇಗಾದರೂ ಮಾಡಿ ಬದುಕಬೇಕು, ಆದಷ್ಟು ನೆಮ್ಮದಿಯಾಗಿ ಮತ್ತು ಚೆನ್ನಾಗಿ ಬದುಕಬೇಕು. ನನ್ನೀ ಬದುಕು ಸಂತಾನದ ಮೂಲಕ ಸಾತತ್ಯವನ್ನು ಗಳಿಸಬೇಕು ಅದೂ ಕಾರ್ಪಣ್ಯಕ್ಕೆ ಈಡಾಗಬಾರದು... ಇದು ಜೀವಕಾಮದ ಪ್ರಕ್ರಿಯೆ, ಜೀವಕಾಮ ಜಾಗೃತವಾಗಿರುವ

ಸ್ಥಿತಿಯನ್ನು ನಾವು ಭವ ಎಂದು ಕರೆಯಬಹುದು, ಇದಕ್ಕೆ ವಿಲಕ್ಷಣವಾಗಿ 'ಐಲಾಟ' ಎನ್ನಿಸಿಕೊಳ್ಳಬಹುದಾದ ಜಾಗರದ ಸ್ಥಿತಿಯನ್ನು 'ರಸ' ಎಂದು ಉಲ್ಲೇಖಿಸೋಣ. ('ರಸಪ್ರಜ್ಞೆ' ಪು.ತಿ.ನ ಸಮಗ್ರ ಗದ್ಯ ಸಂಪುಟ ಪುಟ.೫೧೫).

ಆತ್ಮಕಾಮವನ್ನು ಪು.ತಿ.ನ. ಹೀಗೆ ವಿಶ್ಲೇಷಿಸುತ್ತಾರೆ: ".....ಆತ್ಮಕಾಮ ತಪಸ್ವಿಯಲ್ಲಿ ಅಂಕುರಿಸುವ ಕಾಮ, ಯೋಗಿಯಲ್ಲಿ ಎಂದರೆ ಫಲಾಪೇಕ್ಷೆಯಿಲ್ಲದೆ ಲೋಕ ಸಂಗ್ರಹಕ್ಕಾಗಿ ತನ್ನನ್ನು ತಾನೇ ತೆತ್ತುಕೊಳ್ಳುವ, ಮಹಾಪುರುಷನಲ್ಲಿ ಪರಿಣತಿಯನ್ನು ಪಡೆಯುವಂಥದು...." ಇಂಥ ಪರಿಣತಿ ದೊರಕುವುದು ಹೇಗೆ? ಪು.ತಿ.ನ. ವಿವರಿಸುತ್ತಾರೆ; "ಆತ್ಮ ಎಂದರೆ ವ್ಯಕ್ತಿಯ ಪರಿಣತ ಮತ್ತು ಪರಿಷ್ಕೃತ ಸ್ವಭಾವದ ಸರ್ವಾದರಣೀಯಾಂಶ, ಸರ್ವಗ್ರಾಹ್ಯಾಂಶ, ಸರ್ವ ಹೃದಯಂಗಮಾಂಶ ಹಾಗೂ ಇತರ ಸ್ವಭಾವಗಳಿಗೂ ಆತ್ಮಪರಿಣತಿಯನ್ನು ತರುವ ಚಿತ್–ಊರ್ಜಾಂಶ, ಇಂಥ ಆತ್ಮಶಾಲಿಯಾದವನ ಕಾಮ–ಸಂಕಲ್ಪ–ಕ್ರಿಯೆಗಳು ಬೇರೆ ತೆರದವು. ಈತನಲ್ಲಿ ರಸಪ್ರಜ್ಞೆ ಕಣ್ ಬಿಡುತ್ತಿರುತ್ತದೆ. ಈ ಪ್ರಜ್ಞೆಯಲ್ಲಿ ಉದಿಸುವ ಗುಣ ಕರ್ಮಗಳು ತಾನು ತನ್ನನ್ನು ಲೋಕಕ್ಕೆ ತೆತ್ತುಕೊಳ್ಳುವ ಪ್ರವೃತಿಯನ್ನು ಆತನಲ್ಲಿ ಬೆಳೆಸುತ್ತದೆ. ಆಶ್ಚರ್ಯವೇನೆಂದರೆ, ಆ ಪ್ರಜ್ಞೆಯಲ್ಲಿ ಆತ ಪಡೆಯುವ ಲೋಕಾನುಭವವೂ ಕ್ಲೇಶಕರವಾಗದೇ, ಭೋಗ್ಯವೆನಿಸುತ್ತದೆ, ಎಂದರೆ ಮಾನವನ ಜಾಗ್ರದವಸ್ಥೆಗೆ ಲೋಕ ಅಥವಾ ಬ್ರಹ್ಮಾಸ್ವಾದ ಯೋಗ್ಯವಾದ ಹೊಸನೆಲೆ, ಆಯಾಮ, ಹೊಸ ಕೌಶಲ, ಈ ಆತ್ಮಭೂಯಿಷ್ಠಯುತವಾದ ಪ್ರಜ್ಞೆಗೆ ದೊರೆಯುತ್ತದೆ..." ('ರಸಪ್ರಜ್ಞೆ' ಪು.ಸ.ಗ.ನಂ. ಪುಟ ೫೧೬). ಕೃಷ್ಣನನ್ನು 'ಆತ್ಮಭೂಯಿಷ್ಠ ಪ್ರಜ್ಞೆ' ಪಡೆದ ಪುರುಷೋತ್ತಮನೆಂದೇ ಭಾವಿಸಿರುವ ಪು.ತಿ.ನ. ಅವರ ಈ ಚಿಂತನೆ, ಕೃಷ್ಣನ ವ್ಯಕ್ತಿತ್ವವನ್ನರಿಯಲು ಸಹಕಾರಿಯಾಗುತ್ತದೆ, (ಪು.ತಿ.ನ ಅವರ ಈ ಚಿಂತನವನ್ನು ನನ್ನ ಮಾತಿನಲ್ಲಿ ಸಂಗ್ರಹಿಸಿ ಅದರ ಅರ್ಥವ್ಯತ್ಯಾಸ ವಾಗಬಾರದೆಂದು, ದೀರ್ಘವೆನಿಸುವ ಈ ಭಾಗವನ್ನು ಹಾಗೆಯೇ ಉದ್ಧರಿಸಿದ್ದೇನೆ).

ರಾಧಾಕೃಷ್ಣರ ಹಾಗೂ ಕೃಷ್ಣ ಗೋಪಿಯರ ಪ್ರೇಮ, ಸಮಾಗಮಗಳು ರಾಸವಿಲಾಸಗಳೆಲ್ಲವನ್ನೂ ನಾವು ಜೀವ ಕಾಮದ ನೆಲೆಯಿಂದ ಆತ್ಮಕಾಮದ ನೆಲೆ ತಲುಪಿ ಮತ್ತೆ ದಿವ್ಯ ಕಾಮ ತಲುಪುವ ಚೇತನಗಳ ಊರ್ಧ್ವಗಾಮೀ ಪರಿಚಲನ ಎಂಬ ನಿಲುವಿನಿಂದ ಪರಿವೀಕ್ಷಿಸಿದಾಗ ಅವು ಅರ್ಥಪೂರ್ಣವೆನಿಸುತ್ತವೆ. ಕೃಷ್ಣನ ವೇಣುಗಾನದ ಮೋಡಿಯಲ್ಲಿ ಸಿಲುಕಿದ ರಾಧೆ, ಆ ಕೊಳಲಿನೊಡೆಯನಿಗೆ ತನ್ನ ಸರ್ವಸ್ವವನ್ನು ಅರ್ಪಿಸಿದರೂ, ರಾಧೆಗೆ ಅವನು ತನಗೊಬ್ಬನಿಗೇ ಮೀಸಲಿರಬೇಕೆಂಬ ಸ್ವಾರ್ಥವಿಲ್ಲ, "ನನ್ನಂತೆಯೆಲ್ಲರಿಗುಮಿಂತುಲಿವದಲ ಕೊಳಲಿಂಚರಂ। ಹೆಚ್ಚೇನು ನನ್ನದು.... ಶ್ರೀಹರಿಯೆಲ್ಲರವ ನಾನವನವಳು । ಹೊಳೆ ಕಡಲಿನದು ಕಡಲೆಲ್ಲರದು, ನೂರು ಮಿಂಚಾಡುವುವು । ಕಾರ್ಮುಗಿಲೊಳಂತೆಯೆ ನೂರು ಜೀವಂಗಳೊಲವಿಂ ಹೊಳೆವುವಾ ನೀಲಮೇಘಶ್ಯಾಮನೊಳು....।" ಒಲವಿನಿಂದಲೇ ಆಸೆ, ಕೊರಗು, ಅಹಂಕಾರ ಭಂಗ,

ಸ್ವಾತ್ಮ ದೈನ್ಯಗಳು ಸಂಭವಿಸಿದರೂ, ಒಲವಿನ ಮತ್ತೊಂದು ಆಯಾಮವನ್ನು ಪು.ತಿ.ನ. ಹೀಗೆ ತೆರೆದಿಡುತ್ತಾರೆ. "ಸ್ವಾರ್ಥಗ್ರಂಥಿಯಂ ಭೇದಿಸುತ। ಪೊರಮಡಿಸುವುದು ಜೀವಾತ್ಮನಂ ಬೇರೊಂದರಾಸರೆಗೆ। ದೇವರ ಪಟ್ಟವನು ಕಟ್ಟಿ ತಾನದಕೆ।" ಎಂಥ ಸತ್ಯ! ಪ್ರೇಮಿಗಳು ತಾವು ಒಲಿದವರಲ್ಲಿ ಸರ್ವಸುಗುಣಗಳನ್ನು ದೈವತ್ವವನ್ನು ಅಧ್ಯಾರೋಪ ಮಾಡಿ ಆರಾಧಿಸುವ ಮನೋಭಾವ ಎಲ್ಲ ಕಾಲ ದೇಶಗಳಲ್ಲಿಯೂ ಇರುವುದೇ ಅಲ್ಲವೆ?

ಶ್ರೀಹರಿಯಾದರೋ "ಸಕಲ ಜೀವಾತ್ಮರಂ ರಾಧಾ । ರೂಪರಂ ತನ್ನೆಡೆ ಸೆಳೆವ ಪುರುಷವರನಿಷ್ಟದೈವಂ । ಬಾಹ್ಯದೊಳು ಸರ್ವರಿಗೂ ಸಾಧಾರಣಂ ಪ್ರಕೃತಿರೂಪಂ । ಅನನ್ಯ ಪ್ರೀತಿಯಿಂ ತನ್ನನೆ ಬಯಪ ತನ್ಮಾನಸಗೊ । ಅನ್ಯದುರ್ಲಭವೆನಿಪ ರುಚಿವೈಶಿಷ್ಟ್ಯದಿಂ ರಮಿಸುತಿರುವಂತರ್ಯಾಮಿ..." ರಾಧೆ, ಕೃಷ್ಣ, ಗೋಪಿಯರ ಬಾಂಧವ್ಯ ಜೀವಕಾಮಸ್ತರದಿಂದ, ಆತ್ಮಕಾಮ, ದಿವ್ಯಕಾಮ ಸ್ತರಗಳಿಗೇರುತ್ತದೆಂದು ಪು.ತಿ.ನ. ಮನಗಾಣಿಸುತ್ತಾರೆ.

ರಾಧಾಕೃಷ್ಣ ಸಂಗತಿ, ರಾಧಾಕೃಷ್ಣ ಮಿಲನಂ ಈ ಎರಡೂ ಉಲ್ಲಾಸಂಗಳಲ್ಲಿ ರಾಧಾ ಮಾಧವರ ಪ್ರೇಮ ವಿಲಾಸದ ವಿಸ್ತಾರವಾದ ವರ್ಣನೆಯನ್ನು ಕಾಣುತ್ತೇವೆ. ಈ ಲೋಕದ ಸಾಮಾನ್ಯ ತರುಣಿಯಂತೆ ರಾಧೆಯೂ, ಕೃಷ್ಣ ದರ್ಶನ, ಸಾನ್ನಿಧ್ಯಗಳಿಗಾಗಿ ಹಂಬಲಿಸುತ್ತಾಳೆ. ಈ ಲೋಕದ ಯುವಕನಂತೆ ಕೃಷ್ಣನೂ "ಹೊದರ ಮರೆಯೊಳಗೆ" ಅವಳಿಗಾಗಿ ಕಾಯುತ್ತಾನೆ. ಆದರೆ ರಾಧಾ ಮಾಧವರ ಪ್ರೇಮ ಸಂಯೋಗ ಲೋಕೋತ್ತರತೆಯನ್ನು ಮುಟ್ಟುತ್ತದೆ. "ರಾಧಾ ಕೃಷ್ಣ ಸಂಗತಿ"ಯ ಆರಂಭದಲ್ಲಿ ಪು.ತಿ.ನ. ಜೀವಕಾಮದ ಪ್ರಾಬಲ್ಯದ ಬಗೆಗೆ ಹೇಳುವ ಮಾತುಗಳು ಮನನೀಯ, "...ಜೀವ ಕಾಮಂ ಬಲೀಯಂ ತನ್ನುಳಿವಿಗದು ಸೃಜಿಸತೀ ಬುದ್ಧಿಯನು ದಾಸ್ಯಕೆ । ನಿಲಿಸಿ ಅದರಿಂಬಿಡಿಸಿ ದಿವ್ಯಕಾಮ ಕೈಂಕರ್ಯಕಳವಡಿಪ । ಅಳವಡೆಯೆ... ಮಹಾನುಭಾವ ರಾಚಾರ್ಯರಡಿಗಳಿಗೆ ಶರಣು" ಹೋಗಬೇಕು ನಮ್ಮಂಥವರು ಎನ್ನುತ್ತಾರೆ ಪು.ತಿ.ನ. ಜೀವ ತನ್ನೆಲ್ಲ ದೇಹಭಾವ ಜೀವಭಾವಗಳನ್ನು ನಾಣು ಅಹಂಗಳನ್ನು ಕಳಚಿ ಪರಮಾತ್ಮನಿಗೆ ಶರಣಾದಾಗ ಮಾತ್ರವೇ ಅವನ ಅನುಗ್ರಹ ದೊರೆಯುವುದೆಂಬುದನ್ನು ಗೋಪಿಕಾ ವಸ್ತ್ರಾಪಹರಣದಲ್ಲಿ ಸ್ಪಷ್ಟಗೊಳಿಸುತ್ತಾರೆ.

ಪ್ರಾಸಂಗಿಕವಾಗಿ ತಮ್ಮ ಮನದಲ್ಲಿ ಮೂಡಿರಬಹುದಾದ ಅಥವಾ ಓದುಗರ ಮನದಲ್ಲಿ ಮೂಡಬಹುದಾದ ಶಂಕೆಯನ್ನು ಪು.ತಿ.ನ. ಪ್ರಸ್ತುತಪಡಿಸಿ, ಅದನ್ನು ತಾವೇ ಪರಿಹರಿಸುತ್ತಾರೆ: ಆ ಶಂಕೆ "ಮೀಸೆಯ ಮೊಳೆಯದೆಳೆಯನಿಗೆಂತು ಗೋಪಾಂಗ ನಾಜಾರತನ?" ಕೃಷ್ಣ ತನ್ನಿಚ್ಛೆಯಂತೆ ತಾನು ಜನಿಸಿದವನು ಹಾಗೆಯೇ ಬಾಲ್ಯ, ತಾರುಣ್ಯಗಳನ್ನು, ತನ್ನ ಇಚ್ಛೆಯಂತೆಯೇ ಪಡೆಯುತ್ತಾನೆ. ಸಾಮಾನ್ಯರಿಗೆ ಅನ್ವಯವಾಗುವ ಮಾನದಂಡವನ್ನು ಇವನಿಗೆ ಅನ್ವಯಿಸಲು ಸಾಧ್ಯವಿಲ್ಲ. ಏಕೆಂದರೆ ಹದಗೆಟ್ಟ ಲೋಕವನ್ನು

ಉದ್ಧರಿಸಲು ನರನಾಗಿ ಬಂದವನಿವನು, ಇಂತಹವನು ಅಪ್ರಾಕೃತಂ ಸೋಕುವೆಡೆಯ ಪ್ರಾಕೃತರ ಸೃಷ್ಟಿಸನೆ? ಅಯಸ್ಕಾಂತವ ಸೋಕಿದಯಶ್ಯಕಲ ತಾನದೆಯಾಗದೇ? ಅನ್ನಗತೋರ್ಜೆ ಜೀರ್ಣಾಂಗ ಸಂಸರ್ಗದಿಂ ಚೈತನ್ಯೋರ್ಜೆ । ಯಪ್ಪಂದ ಅಸುವಿಂದೊದಗುವ ಕಾಮೋರ್ಜೆಯುಂ ಪುರುಷೋತ್ತಮನ । ಅಂತಃಕರಣ ಸಂಸರ್ಗದಿಂದಾತ್ಮೋರ್ಜೆಯಾನಂದ ವಪ್ಪುದುಸಟೆಯೇ" ಎಂದು ಪ್ರಶ್ನಿಸಿ, ಕೃಷ್ಣ ಚೈತನ್ಯ ಸ್ಪರ್ಶದಿಂದ ಜಡ ಜೀವಗಳೆಲ್ಲವೂ ಚೈತನ್ಯವಾಗಿ ಮಾರ್ಪಡುವುವುವೆಂಬುದನ್ನು ದೈಹಿಕ ಕ್ರಿಯೆಯ ಉದಾಹರಣೆಯ ಮೂಲಕ – ಆಹಾರವೂ ಊರ್ಜೆಯಾಗಿ ಪರಿವರ್ತಿತವಾಗುವ ಪ್ರಕ್ರಿಯೆಯಿಂದ ನಿಚ್ಚಳಗೊಳಿಸುತಾರೆ, ದೇವ–ನರ, ದಿವ್ಯ ಪ್ರಣಯ, ಲೌಕಿಕರಾದ ನಮಗೆ ರಾಧಾ–ಮಾಧವ ಪ್ರಣಯ ಪ್ರಸಂಗದಿಂದಾಗಿ ಲಭ್ಯವಾಯಿತೆನ್ನುತ್ತಾರೆ. ನವಿರು ಶೃಂಗಾರ ಸನ್ನಿವೇಶಗಳಿಂದ ರಾಧಾ ಕೃಷ್ಣರ ಪ್ರಣಯ ಪ್ರಸಂಗ, ರಾಧೆಯ ನಾಚಿಕೆ ಸಂಕೋಚಗಳನ್ನು ನಯದ ನಡವಳಿಕೆಯನ್ನು ಚಿತ್ರಿಸುತ್ತಾರೆ.

ಹೆಣ್ಣು ಗಂಡುಗಳ ಬಾಂಧವ್ಯದಲ್ಲಿ ರಾಧಾಕೃಷ್ಣರ ಸ್ನೇಹ ಸತ್ಯವಿರಬೇಕೆಂದು ಆಶಿಸುತ್ತಾ "ಪೆಣ್ಣೊಳಗೆನಿತು ರಾಧಾಸತ್ವ ಗಂಡಿನೊಳನಿತು ಪುರುಷೋತ್ತಮಿಕೆ ಅನಿತವರವೊಡಗೂಳಿಕೆಯೊಳಗಾನಂದ ಪ್ರಮಾಣಂ" ಎಂದು ತೀರ್ಮಾನಿಸುತ್ತಾರೆ ಪು.ತಿ.ನ. ಸ್ತ್ರೀ ಸೌಂದರ್ಯವನ್ನು ಮನತುಂಬಿ ವರ್ಣಿಸುವ ಕವಿ, "ಪೆಣ್ ಮೈ ದೇವಶಿಲ್ಪ" ವೆನ್ನುತ್ತಾರೆ. ಗಳಿಗೆಯ ಹಿಂದೆ ಎಳೆಹುಡುಗನಾಗಿದ್ದ ಮಾಧವ, ಮರುಗಳಿಗೆ ರಾಧೆಯ ಕಲ್ಪನೆಯ ಪುರುಷನಾಗಿ ಅವಳ ಮುಂದೆ ನಿಂತಾಗ ರಾಧೆಗೆ ಸೋಜಿಗ. 'ಇದು ಯಾವ ದೇವರ ವರ' ಎಂದು ಪ್ರಶ್ನಿಸಿದ ರಾಧೆಗೆ, ಇದು ತನಗೆ ತನ್ನ ಕೊಳಲಗಾನದಿಂದಾಗಿ ಗವಿ ಮುನಿಯಿಂದ ಬಂದ ವರವೆನ್ನುತ್ತಾನೆ ಕೃಷ್ಣ. ಕೊಳಲಗಾನದಿಂದ ಆನಂದ ತುಂದಿಲನಾದ ಗವಿಮುನಿಯು, ಯೋಗಿಶ್ವರ ಕೃಷ್ಣನಿಗೆ "ನೀನೆನೆವ ವಯೋ ರೂಪಧರ್ಮರೂಪಂ ನಿನಗಹುದಿಚ್ಛಿಪ ವೇಳೆ..." ಎಂದು ವರಪ್ರದಾನ ಮಾಡುತ್ತಾನೆ. ಕೃಷ್ಣನ ಪ್ರೇಮದ, ವಯಸ್ಸಿನ ರಹಸ್ಯವನ್ನು ಪು.ತಿ.ನ. ಹೀಗೆ ಬಿಚ್ಚಿಟ್ಟು, ರಾಧಾಕೃಷ್ಣರ ಪ್ರೇಮ "ದ್ವೈತಾದ್ವೈತ ಕಾಮ ಪ್ರೇಮ ಯೋಗ" ಎನ್ನುತ್ತಾರೆ. ಯೋಗೇಶ್ವರನ ಕಾಮವಿದು ಲೌಕಿಕ ಕಾಮವೇ? ಅದು "ದೇಹ ಪ್ರಪೆಯೊಳಾತ್ಮಪಾನ ಸಂರಂಭಮದತಿ ಪವಿತ್ರಂ..." ಎಂದು ಸ್ತ್ರೀ ಪುರುಷ ಮಿಲನದಾನಂದವನ್ನು ವರ್ಣಿಸಿ, ಆ ಮಿಲನದ ಅರ್ಥ, ಉದ್ದೇಶಗಳನ್ನು ಉನ್ನತೀಕರಿಸುತ್ತಾರೆ: "....ಕೇವಲಾತ್ಮಗಳಾಗಿ ಬೆರೆವ ಜೀವ ಯುಗಳದಹಮಸ್ಮಿತಾನಂದ ಯೋಗ ರಾಧಾ ಮಾಧವೀಯಂ ನಿರುಪಾಧಿಕ ಶುದ್ಧ ಪ್ರೇಮದಿಂಕೂಡು । ವೆಲ್ಲರ ಮುದದೊಳಾವಿರ್ಭವಿಸುವಾಮೋದದಾದಿ ಮೂಲಂ। ಸ್ತ್ರೀಪುರುಷ ತನುಮಿಲನ ಒಲವಿಲ್ಲದಿರಲೆನಿತಪಚಾರವಂಗೈವುದು ದೈವಕೆ! ತೀರ್ಥಸ್ನಾನ ಶುಚಿತೆಯಂ ಪಡುವುದು ಜೀವ ಪ್ರೇಯಸಿಯ ತ್ರಿಕರಣ ಶುದ್ಧಿಯಾಲಿಂಗನದಿ...."

ರಾಧೆ ಮಾಧವನಿಂದ ಪರಮಾನಂದ ಪಡೆದರೆ ಮಾಧವನೂ "ತನ್ನಂ ತಾನು ತೆರುತೆರುತಲೇ ಸುಖಿಯಪ್ಪ ಬೆರೆಗನರಿತನು । ಆತ್ಮದ ಭೋಗಭಾಗ್ಯಮಾಧ್ಯಮ" ವಾದಳಂತೆ ಕೃಷ್ಣನಿಗೆ ರಾಧೆ. ನಿರ್ವಂಚನೆಯಿಂದ, ಪರಸ್ಪರ ಅರ್ಪಿಸಿಕೊಳ್ಳುವುದು ಸ್ತ್ರೀಪುರುಷರ ಸಂತೃಪ್ತ ಬಾಂಧವ್ಯದ ರಹಸ್ಯ ಎಂಬುದು ಪು.ತಿ.ನ. ಅವರ ಅಭಿಪ್ರಾಯ (ರಾಧಾಕೃಷ್ಣಮಿಲನಂ, ರಾಧಾಕೃಷ್ಣ ಸಂಗತಿ, ರಾಧಾದರ್ಶನಗಳು, ದೀರ್ಘ ಉಲ್ಲಾಸಗಳು, ೨೯೦ ಸಾಲು ೨೭೧, ೨೨೬ ಸಾಲುಗಳು).

❍

## ಕಾಳಿಂಗ ಹದಪ್ರವೇಶಂ ಮತ್ತು ಕಾಳಿಂಗ ಮರ್ದನಂ
## ಕಾಳಿಂಗ ಮರ್ದನದ ಅಂತರಾರ್ಥ

ಕಾಳಿಂಗ ಮಡುವಿನ ಪ್ರಸಂಗದಲ್ಲಿ, ಯುಗಯುಗಗಳಿಂದಲೂ, ಆ ಮಡುವಿನ ಬಗೆಗೆ ಜನಮನದಲ್ಲಿ ಮನೆಮಾಡಿದ್ದ ಭೀತಿನಿವಾರಕನಾಗಿ, ಸಮಷ್ಟಿಯ ಹಿತ ಸಾಧನೆಗಾಗಿ ತನ್ನನ್ನು ತಾನು ಲೋಕಕ್ಕೆ ತೆತ್ತುಕೊಳ್ಳುವ ಚೇತನದ ಕುಡಿಯಾಗಿ ಕೃಷ್ಣನ ವ್ಯಕ್ತಿತ್ವ ಚಿತ್ರಿಸಲ್ಪಟ್ಟಿದೆ. ಬೃಂದಾವನದ ಗೋಪಾಲಕರು ದಿನದಿನವೂ ದನಗಳನ್ನು ಮೇಯಿಸುತ್ತಿದ್ದ ಕಾಡುಗಳಲ್ಲಿ ಹುಲ್ಲು ಕಡಿಮೆಯಾದಾಗ, ಗೋವಳರು ಹೊಳೆಯ ಬದಿ ಸೊಂಪಾಗಿ ಬೆಳೆದಿದ್ದ ಹುಲ್ಲುಗಾವಲಿಗೆ ಗೋವುಗಳನ್ನಟ್ಟಿಕೊಂಡು ಹೋಗಲು ಪ್ರಯತ್ನಿಸಿದಾಗ ಕುಲವೃದ್ಧ ಅವರನ್ನು ತಡೆಯುತ್ತಾನೆ. ಅಲ್ಲಿ ಮಡುವಿನಲ್ಲಿ ಕಾಳಿಂಗ ವಾಸಿಸುತ್ತಿದ್ದು, ಆ ನೀರನ್ನು ಕುಡಿಯುವಂತಿಲ್ಲ. ಹುಲ್ಲನ್ನು ಮೇಯುವಂತಿಲ್ಲ, ಎಲ್ಲವೂ ವಿಷಮಯ, ಸಾಯಲು ಬಯಸುವವರು ಮಾತ್ರ ಅಲ್ಲಿಗೆ ಹೋಗಬಹುದೆನ್ನುತ್ತಾನೆ ಆ ವೃದ್ಧ. ಆದರೆ ಕೃಷ್ಣ ರೂಢಿಗತವಾಗಿ ಮನೆ ಮಾಡಿದ್ದ ಭಯವನ್ನು ನಿವಾರಿಸುವ ನಿಶ್ಚಯದಿಂದ, ಗೆಳೆಯರಿಗೆ ತನ್ನನ್ನು ಹಿಂಬಾಲಿಸುವಂತೆ ಹೇಳಿ, ತಾನೂ ಮರಹತ್ತಿ, ಮಡುವಿಗೆ ಧುಮುಕುತ್ತಾನೆ. ಕೃಷ್ಣನ ಈ ಕೃತ್ಯ, ಸಮಷ್ಟಿಯ ಅಭಿಪ್ರಾಯಕ್ಕೆ ವಿರುದ್ಧವಾದದ್ದೆ ಆದರೂ ಅದು ಸಮಷ್ಟಿಯ ಹಿತದೃಷ್ಟಿಯಿಂದ ಮಾಡಿದ ರೂಢಿಯ ಸೀಮೋಲ್ಲಂಘನೆ. ಕೃಷ್ಣ ಮಡುವಿಗೆ ಧುಮುಕಿದುದನ್ನು ಕಂಡ ಜನ ಬೆಕ್ಕಸ ಬೆರಗಾಗಿ ನಿಂತರಷ್ಟೆ, ಯಾವ ಗೆಳೆಯನೂ ಕೃಷ್ಣನ ಜೊತೆಗೆ ಮಡುವಿಗೆ ಇಳಿಯಲ್ಲಿಲ್ಲ. ರೂಢಿಯ ಸೀಮೋಲ್ಲಂಘನ ಮಾಡುವವನು ಯಾವಾಗಲೂ ಏಕಾಂಗಿಯೇ. ನಂತರ ಹಲವು ಮಂದಿ ಅವನನ್ನು ಹಿಂಬಾಲಿಸಬಹುದಾದರೂ, ಅದು ಅವನು ತನ್ನ ಕೃತ್ಯದಲ್ಲಿ ಸಫಲನಾದ ನಂತರ ಮಾತ್ರ. ಬೃಂದಾವನದ ಗೋವಳರನ್ನು, ಹಿರಿಯರನ್ನು ಆವರಿಸಿದ್ದುದು ಭಯ, ಅಪರಿಮಿತಭಯ, ಮಡುವಿನಲ್ಲಿದ್ದ ಕಾಳಿಂಗನ ಭಯಕ್ಕಿಂತಲೂ, ತಮಗೆ ಯಾವ ಅಪಾಯವಾಗುವುದೋ, ಪ್ರಾಣವೇ ಹೋಗುವುದೋ ಎಂಬ ಜೀವಭಯ.

ಜನನಾಯಕನದವನು ತನ್ನನ್ನು ತಾನು ಅಪಾಯಕ್ಕೆ ಒಡ್ಡಿಕೊಂಡು ಮುನ್ನುಗ್ಗುವ ದೈಹಿಕ ಸಾಮರ್ಥ್ಯ, ರೂಢಿಗತವಾದ ಹುರುಳಿರದ ಸಂಪ್ರದಾಯವನ್ನು ಮುರಿದು, ಹೊಸ ಸಂಪ್ರದಾಯವನ್ನು ನಿರ್ಮಿಸುವ ಮನೋಬಲ ಹೊಂದಿರುವವನಾಗಬೇಕು. ಕಾಳಿಂಗ ಮರ್ದನ ಹಾಗೂ ಗೋವರ್ಧನೋದ್ಧರಣ ಪ್ರಸಂಗಗಳಲ್ಲಿ, ಬಾಲ್ಯದಿಂದಲೇ ಕೃಷ್ಣನಲ್ಲಿ ಮನೆ ಮಾಡಿದ್ದ, ಧೈರ್ಯ, ಸಾಹಸ, ಮುಂದಾಳತ್ವಗಳ ಪರಿಚಯವಾಗುತ್ತದೆ. ಇಂಥ ಜನನಾಯಕರು, ಪ್ರಜೆಗಳಿಂದಾಗಲೀ, ಗೆಳೆಯರಿಂದಾದಲೀ ಯಾವುದೇ ಸಹಾಯವನ್ನು ನಿರೀಕ್ಷಿಸಲಾಗದು. ಮಡುವಿಗಿಳಿದ ಕೃಷ್ಣ, ಕಾಳಿಂಗ ಮರ್ದನ ಮಾಡಿ, ಕಾಳಿಂಗನ ಹಣೆಯ ಮೇಲೆ ನರ್ತಿಸಿದ ಘಟನೆ, ಹಲವು ಕೀರ್ತನೆಗಳಿಗೆ, ನರ್ತನ, ನಾಟಕಗಳಿಗೆ ವಸ್ತುವಾಯಿತು. ಸಾಮಾಜಿಕ ನೆಲೆಯಿಂದ ಪರಿವೀಕ್ಷಿಸುವಾಗ ಕಾಳಿಂಗನಂತಹ ದುಷ್ಟಶಕ್ತಿಯು ಆಕ್ರಮಿಸಿಕೊಂಡಿದ್ದ ನೆಲಜಲಗಳನ್ನು ಅವನ ವಿಷದ ಹಿಡಿತದಿಂದ ಮುಕ್ತಿಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಬಿಡಿಸಿ ಕೊಟ್ಟಂತಹ ಸಮಾಜವಾದಿ ನಾಯಕ ಕೃಷ್ಣ, ಈಗಿನ ಸಮಾಜದಲ್ಲಿ ನಾವು ದಿನನಿತ್ಯ ನೋಡುತ್ತಿರುವ ಭೂಮಾಫಿಯ ಎಂಬ ನೆಲಗಳ್ಳರು. ಕಾಳಿಂಗನ ನವರೂಪವಲ್ಲವೇ? ಆದರೆ ಇಂದು ಅವರ ಹಿಡಿತದಿಂದ ನೆಲವನ್ನು ಸಾರ್ವಜನಿಕರ ಉಪಯೋಗಕ್ಕೆ ಬಿಡಿಸಿಕೊಟ್ಟು ಅವರ ತಲೆಯನ್ನು ಮೆಟ್ಟುವ ಕೃಷ್ಣಚೇತನವಿಲ್ಲ ಅಷ್ಟೇ.

ಈ ಪ್ರಸಂಗದಲ್ಲಿ ಅಲ್ಲಿ ಸೇರಿದ್ದ ಪ್ರತಿಯೊಬ್ಬನೂ ಕೃಷ್ಣನನ್ನು ಪ್ರಶಂಸಿಸಿ ಹೊಸ ವಸ್ತ್ರಗಳನ್ನು ನೀಡುತ್ತಾರೆ. ಆಗ ಕೃಷ್ಣ ತನ್ನ ವಿನಯವನ್ನು ಮೆರೆಯುತ್ತಾನೆ: "ಏಗೈದುದಕೆ ಎನ್ನ ಹೊಗಳುತಿಹಿರತಿಶಯದಿ? । ಎದೆಯಿಹುದು, ತಲೆಯಿಹುದು, ಕಾಳಗಬಲ್ಲ ತೋಳಿಹುದನೆಗೆ । ಏನಿರದ ಕಾಳಿಂಗನಂ ಸೆಣಸುವುದೊಂದು ಸಾಹಸವೇ? ಮಿಗಿಲೆಂತಪ್ಪೆ ಗರುಡ ಮುಂಗುಸಿ ಮಯೂರಗಳಿಗೆ ನಾಂ?" ಎನ್ನುತ್ತಾನೆ. ಕೆಡುಕಿನೊಡನೆ ಹೋರಾಡಬೇಕಾದರೆ, ಧೈರ್ಯ, ಬುದ್ಧಿಶಕ್ತಿ, ಅವೆರಡನ್ನೂ ಸರಿಯಾಗಿ ಉಪಯೋಗಿಸುವ ತೋಳ್ಬಲದ ಅವಶ್ಯಕತೆಯಿರುತ್ತದೆ ಎಂಬುದನ್ನು ಕೃಷ್ಣನ ಮಾತುಗಳು ನಿಚ್ಚಳಗೊಳಿಸುತ್ತವೆ. "ಕಾಳೀಯದಮನವಿದುಯಿಂದಿಗೆ ತಗದ ಕೃತಿಮ ಕಥೆಯೆ?" ಎಂದು ಪ್ರಶ್ನಿಸಿ ಪು.ತಿ.ನ. ಕಾಳಿಂಗ ಮರ್ದನ ಪ್ರಸಂಗವನ್ನು ಆಧ್ಯಾತ್ಮಿಕ ನೆಲೆಯಿಂದ ವಿಶ್ಲೇಷಿಸುತ್ತಾರೆ. ದೇಹವೆಂಬ ಪಾತ್ರದಲ್ಲಿ ಜೀವಹರಿಯುತ್ತಿರುತ್ತದೆ, ಮನವೇ ಅದರ ಮಡು, ಸ್ವಹಿತಚಿಂತನೆ, ಸ್ವಂತಯೋಗಕ್ಷೇಮದ ಅಹಮಿಕೆಯೇ ಕಾಳಿಂಗ. ಅರಿಷಡ್ವರ್ಗ ಎಂಬ ಸಮೂಹವೇ ಫಣಾಮಂಡಲ. ಈ ಅಹಮಿಕೆಯನ್ನು ದಮಿಸದೆ ನೆಮ್ಮದಿಯ ಬದುಕಿಲ್ಲ. ಮನವೆಂಬ ಮಡುವಿನೊಳಕ್ಕೆ ಕೃಷ್ಣಪ್ರಜ್ಞೆ ಎಂಬ ಶಕ್ತಿಧುಮುಕಿ ಅಹಂಕಾರದ ಹೆಡೆಗಳನ್ನು ತುಳಿದು ದಮನಿಸಿದಾಗಲೇ ಅಂತರಂಗ, ಬಹಿರಂಗಗಳಲ್ಲಿ ಶಾಂತಿ ನೆಮ್ಮದಿಗಳು ಸಿಗುವುವು ಎಂಬುದೇ ಕಾಳಿಂಗ ದಮನದ ಅಂತರಾರ್ಥ.

❍

# ಗೋವರ್ಧನೋದ್ಧರಣ, ಇಂದ್ರ ಗರ್ವಭಂಗ

'ಇಂದ್ರಪರ್ವ ಸಂರಂಭಂ', 'ಗೋವರ್ಧನಪರ್ವಂ', 'ಗೋವರ್ಧನೋದ್ಧರಣಂ' ಎಂಬ ಮೂರು ಉಲ್ಲಾಸಂಗಳಲ್ಲಿ, ಇಂದ್ರಪರ್ವದ ಆಚರಣೆಯ ಸಡಗರ, ಗೋವರ್ಧನ ಗಿರಿಯ ಪೂಜಾ ಆಚರಣೆಯ ಸಡಗರದ ಕಲ್ಪಗಳು ಇವುಗಳನ್ನು ವಿವರಿಸುತ್ತಾರೆ ಪು.ತಿ.ನ. ಇಂದ್ರನನ್ನು ಪೂಜಿಸುವ ಬದಲು, ಗೋವರ್ಧನ ಪರ್ವತವನ್ನು ಪೂಜಿಸಬೇಕೆಂದು ಕೃಷ್ಣ ತನ್ನ ಹಿರಿಯರನ್ನು ಒಪ್ಪಿಸಿ, ಮತ್ತೊಮ್ಮೆ ರೂಢಿಗತ ನಿಯಮಾವಳಿಗಳನ್ನು ಮುರಿಯುತ್ತಾನೆ. ಸೃಷ್ಟಿಗೆಲ್ಲಾ ಮಳೆಯನ್ನು ವಿತರಿಸುವ ದೈವ ಎಂದು ಜನಮಾನಸ ನಂಬಿದ್ದ ಇಂದ್ರನನ್ನು ಎದುರು ಹಾಕಿಕೊಳ್ಳಲೂ ಕೃಷ್ಣ ಹಿಂದೆಗೆಯುವುದಿಲ್ಲ.

ತಮ್ಮ ಇಷ್ಟದೈವ ವೈರಮುಡಿಯ ಧರಿಸಿದ ಮೇಲುಕೋಟೆಯ ಚೆಲುವರಾಯ ಸ್ವಾಮಿಯನ್ನು ನೆನೆಯುತ್ತಾ ಪು.ತಿ.ನ. ಇಂದ್ರಪರ್ವ ಸಂರಂಭಂ ಅನ್ನು ವರ್ಣಿಸುತ್ತಾರೆ. ಬೃಂದಾವನದಲ್ಲಿ ನಡೆದು ಬಂದಿದ್ದ ಸಂಪ್ರದಾಯದಂತೆ, ನಂದಗೋಪನು ಶಕ್ರೇಜ್ಯೆಯನ್ನಾಚರಿಸಲು ನಿಶ್ಚಯಿಸುತ್ತಾನೆ. ಈ ಸಂದರ್ಭದಲ್ಲಿ ಅಲ್ಲಿ ನಡೆಯುವ ಸಾಂಪ್ರದಾಯಕ ಕಲ್ಪಾಗಮಗಳನ್ನು ಪು.ತಿ.ನ. ವಿಸ್ತೃತವಾಗಿ ಚಿತ್ರಿಸುತ್ತಾರೆ. ಕಲ್ಪಾಗಮಗಳು ಕೂಡ ರಸಪ್ರಜ್ಞೆಯ ಅತ್ಯಂತ ಮಹತ್ವದ ಸೃಷ್ಟಿಗಳು ಎಂಬುದು ಪು.ತಿ.ನ. ಅವರ ನಿಲುವು: "......ಕಲ್ಪಗಳಲ್ಲಿನ ವಸ್ತುಗಳಿಗೂ ಕ್ರಿಯೆಗಳಿಗೂ, ಕಾವ್ಯದಲ್ಲಿ ಶಬ್ದಗಳಿಗೆ ವ್ಯಂಜನಾದಿ ವೃತ್ತಿಗಳು ಹೇಗೆ ಬರುತ್ತವೆಯೋ ಹಾಗೆ, ತಮ್ಮ ವಸ್ತುತೆಯನ್ನು ಬಿಡದೆಯೇ ಭಾವ ಸಂಕೇತಗಳಾಗಿ ಸ್ಪಂದಿಸುವ ಪವಾಡ ಏರ್ಪಡುತ್ತದೆ. ಇದೊಂದು ಅತ್ಯಾಶ್ಚರ್ಯಕರವಾದ ಮಾರ್ಪಾಡು. ಅಕ್ಕಿಕಾಳು ಅರಿಸಿನದೊಡನೆ ಕೂಡಿಕೊಂಡು ಅಕ್ಷತೆಯಾಗುವ ಯಕ್ಷಿಣಿ, ತುಳಸಿ, ಗರಿಕೆ, ಬಿಲ್ವ, ಪರಿಮಳ ಪುಷ್ಪಗಳು, ಹಣತೆ, ಚರು, ಬಿಂಬ, ಕುಂಭ, ಕೂರ್ಚ, ಕಳಸ ಮುಂತಾದ ವಸ್ತುಗಳು ತಮ್ಮ ಲೋಕವ್ಯವಹಾರದಲ್ಲಿನ ಉಪಯುಕ್ತತೆಯನ್ನು ಕಳೆದುಕೊಂಡು ರಸಕ್ರಿಯೆಗಳಾಗಿ ಬಿಡುತ್ತವೆ. ಮಹರ್ಷಿ ಹಾಗೂ ಸಂಪ್ರದಾಯ ಕಲ್ಪಿತ ವಿಧಿಗಳಲ್ಲಿ ಜಗತ್ತಿನ ವಸ್ತುಗಳ ವಿಷಯದಲ್ಲಿ ನಿತ್ಯಬಳಕೆಯಿಂದ ನಾವು ಕಳೆದುಕೊಂಡಿರುವ

ಅಸಾಧಾರಣತೆಯನ್ನೂ ವಿಸ್ಮಯಭಾವವನ್ನೂ ನಮ್ಮ ಕಲ್ಪಗಳಲ್ಲಿ ಪುನಃ ನಾವು ಪಡೆಯುತ್ತೇವೆ. ಶುದ್ಧವೂ, ಗಂಭೀರವೂ ಆದ ಭಾವಗಳು ಗಾಢವಾಗಿ ಮೂಡುವುದು ಸಕಲಕಲಾರಾಧಕ ಗಳಾದ ಕಲ್ಪಗಳಿಂದಲೇ. ಇದು ರಸಪ್ರಜ್ಞರ ಸ್ವತ್ತು ಮತ್ತು ಅವರು ಮಾತ್ರ ಸೃಷ್ಟಿಸಬಹುದಾದ ಕ್ರಿಯೆಗಳಲ್ಲಿ ಅತ್ಯಂತ ಕ್ಲಿಷ್ಟವಾದುದು. ಹಿಂದೆ ಮಾನವರ ಬಾಳಿಗೆ ಬೆಂಕಿ ಎಟುಕಿದಾಗ ಅದಕ್ಕೆ ಇಂಥ ಮಹಾಭಾವುಕರ ಕೈಲಿ ಎಂಥ ಭವ್ಯ ಸ್ವಾಗತ ದೊರೆಯಿತು! ಅಗ್ನಿಗೆ ದೊರೆತ ಈ ಪೂಜೆ ಪುರಸ್ಕಾರ ಇಚ್ಛಾಕಲ್ಪಗಳು ವಿದ್ಯುತ್ತಿಗೆ ಲಭಿಸಿವೆಯೆ? ಪರಮಾಣು ಶಕ್ತಿಗೆ ಲಭಿಸಿದೆಯೆ? ಇವೆಲ್ಲ ಉಪಯುಕ್ತ ಶಕ್ತಿಗಳು ಅಷ್ಟೆ. ...ಕಲ್ಪಾಗಮಗಳು ಭಾವಶುದ್ಧಿಯನ್ನೂ ಭಾವನಾ ಸಮೃದ್ಧಿಯನ್ನೂ ತರದೆ ಮೂಢನಂಬಿಕೆಗಳು ಎನಿಸಿಕೊಳ್ಳುವುದಕ್ಕೆ ಮುಖ್ಯ ಕಾರಣ, ಅವುಗಳಿಂದ ಲೌಕಿಕ ಫಲಗಳನ್ನು ಬಯಸುವ ಕಾರ್ಪಣ್ಯ ದುರ್ಬಲ ಮಾನವರಿಗೆ ಅಂಟಿಕೊಂಡಿರುವುದು..." ('ರಸಪ್ರಜ್ಞೆ' ಪು.ತಿ.ನ. ಸಮಗ್ರ ಗದ್ಯ ಸಂಪುಟ, ಪುಟ.೫೩೨).

ಋಷಿಕಲ್ಪಿತ ಸದಾಗಮರೂಪಿತವಾದ ದೇವೋತ್ಸವಗಳು ಸಕಲಕಲಾರಾಧಕವೆನಿಸುವ ಕಾರ್ಯಗಳು. ಇವುಗಳು ತರುವ ಆನಂದಕ್ಕಾಗಿಯೇ ಮಾನವ ಧನವ್ಯಯ, ದೇಹಶ್ರಮವನ್ನು ಲೆಕ್ಕಿಸದೆ ಪರ್ವಗಳನ್ನು ಕೈಗೊಳ್ಳುತ್ತಾನೆ. ಪ್ರೇಮದ ಜೊತೆಗೆ ಶ್ರೇಯವನ್ನೂ ಬಯಸುವ ಜನರು ಆಸಕ್ತಿ ಶ್ರದ್ಧೆಗಳಿಂದ ಇವನ್ನಾಚರಿಸುತ್ತಾರೆ ಎಂಬ ಪೀಠಿಕೆಯೊಡನೆ ನಂದನು ಬೃಂದಾವನದಲ್ಲಿ ಇಂದ್ರಪರ್ವಕ್ಕಾಗಿ ನಡೆಸಿದ ಸಿದ್ಧತೆಗಳನ್ನು ಪು.ತಿ.ನ. ವಿವರಿಸುತ್ತಾರೆ. ನಮ್ಮ ದೇಶದಲ್ಲಿ ಯುಗಯುಗಗಳಿಂದಲೂ ನಡೆದುಕೊಂಡು ಬರುತ್ತಿರುವ ಪರ್ವಗಳು, ಉತ್ಸವ, ರಥೋತ್ಸವಗಳು, ಪೂಜಾಕಾರ್ಯಗಳ ನಿರಂತರತೆಯ ರಹಸ್ಯವೇನೆಂಬುದು, ಪು.ತಿ.ನ. ಅವರ ಕಲ್ಪಾಗಮಗಳ ಆಚರಣೆಯ ಬಗೆಗಿನ ಅಭಿಪ್ರಾಯದಿಂದ ಅರ್ಥವಾಗುತ್ತದೆ. ಕಲ್ಪಾಚರಣೆಗಳ ಮೊದಲ ಕಾರ್ಯ, ಪರಿಣಾಮ, ವಿವಿಧ ವರ್ಣಗಳಿಂದ ಶೋಭಿಸುವ ಸೌಂದರ್ಯೋತ್ಪಾದನೆ. ಬಣ್ಣ, ಸಾರಣೆ, ಕಾರಣೆ, ಹೂ ತಳಿರು ತೋರಣಗಳಿಂದ ಇಡಿಯ ಗೋವ್ರಜ ಹೊಸರೂಪವನ್ನೇ ತಳೆಯುತ್ತದೆ. ಯಾಗದ ಹಂದರವೂ 'ಸಿಂಗರದ ಸೊಬಗು' ಪಡೆದು ಕಂಗೊಳಿಸುತ್ತದೆ. ಈ ಕಲ್ಪಾಚರಣೆಗಳ ವಿವರಗಳೊಂದಿಗೆ, 'ಸಂಪ್ರದಾಯ ಪ್ರಾಪ್ತ'ವಾದ ಇಂದ್ರಪೂಜೆಯ ಬಗೆಗೆ ಕೃಷ್ಣನ ಅಭಿಪ್ರಾಯಗಳೂ ವ್ಯಕ್ತಪಡಿಸಲ್ಪಟ್ಟಿವೆ. ರೂಢಿಯಿಂದ ಗೃಹಿತವಾಗಿರುವ ಇಂದ್ರನ ಶ್ರೇಷ್ಠತೆಯನ್ನು ಕೃಷ್ಣ ಒಪ್ಪುವುದಿಲ್ಲ, ರೂಢಿಗತ ನಂಬಿಕೆಯ ಪ್ರಕಾರ ಇಂದ್ರನೆಂದರೆ ಲೋಕಕ್ಕೆ ಮಳೆಬೆಳೆತರುವ ದೈವ, ಹಾರಾಡುತ್ತಿದ್ದ ಪರ್ವತಗಳ ರೆಕ್ಕೆಗಳನ್ನು ಕಡಿದು ಅವು ಭೂಮಿಯ ಮೇಲೆ ಸ್ಥಿರವಾಗಿ ನಿಲ್ಲುವಂತೆ ಮಾಡಿದ ಧೀರ. ಅಂಥವನನ್ನು ಒಲಿಸಲೆಂದು, ಅವನಿಗೆ ಪೂಜೆ, ಯಜ್ಞಯಾಗಾದಿಗಳನ್ನು ಮಾಡಬೇಕೆಂಬ ನಂದನ ವಿವರಣೆ ಕೃಷ್ಣನಿಗೆ ಸಮ್ಮತವಾಗುವುದಿಲ್ಲ. "ಬಾನವರೊಲಿಯೆ ಮಳೆ, ಮುನಿಯೆ ಬರ" ಎಂಬ ನಂಬಿಕೆ, ಕೃಷ್ಣನ ಆಲೋಚನೆಗೆ

ಸರಿ ತೋರುವುದಿಲ್ಲ. ಮಳೆ, ಮೋಡ, ಗುಡುಗು ಸಿಡಿಲುಗಳು ಪ್ರಾಕೃತಿಕ ವಿದ್ಯಮಾನಗಳು. ಇವಕ್ಕೆಲ್ಲ ಬಾನವರನ್ನು ಗುರಿ ಮಾಡುವುದು, ಅದಕ್ಕಾಗಿ ಯಾಗದಿಂದ ಅವರನ್ನು ತೃಪ್ತಿಪಡಿಸಲು ಪ್ರಯತ್ನಿಸುವುದು ಸರಿಯಾದದ್ದಲ್ಲವೆಂದು, ವಿನಯದಿಂದ ಬೃಂದಾವನದ ಹಿರಿಯರಿಗೆ ತಿಳಿಸುತ್ತಾನೆ ಕೃಷ್ಣ.

ಇಂದ್ರನನ್ನು ದೇವತೆಯೆಂದು ಪೂಜಿಸುವುದರ ಹಿನ್ನೆಲೆಯಲ್ಲಿ, ಆದಿಮಾನವನು ಪ್ರಾಕೃತಿಕ ವಿದ್ಯಮಾನಗಳನ್ನು ಭಯ, ವಿಸ್ಮಯಗಳಿಂದ ವೀಕ್ಷಿಸಿ ಅವಕ್ಕೆಲ್ಲ ದೈವತ್ವದ ಪಟ್ಟ ಕಟ್ಟಿದ ಆ ಕಾಲಘಟ್ಟದ ಕಲ್ಪನೆಯಿದ್ದರೆ, ಕೃಷ್ಣನ ಆಲೋಚನೆಗಳಲ್ಲಿನ ವೈಚಾರಿಕತೆ ಕಾಲಮಾನದ ಬದಲಾವಣೆಗಳಲ್ಲಿ ನಿರ್ದಿಷ್ಟ ಕಾಲಘಟ್ಟದಲ್ಲಿ ಉಂಟಾಗುವ ಬದಲಾದ ಚಿಂತನೆಯನ್ನು ಪ್ರತಿಪಾದಿಸುತ್ತದೆ. ಈ ಸನ್ನಿವೇಶದಲ್ಲಿ ಕೃಷ್ಣನ ಆಲೋಚನೆಗಳಲ್ಲಿ ಪರಿಸರ ಪ್ರಜ್ಞೆ, ಪ್ರಕೃತಿ ಆರಾಧನೆಗಳು ಅಭಿವ್ಯಕ್ತಗೊಳ್ಳುವುದರ ಜೊತೆಗೆ, ಬೃಂದಾವನವೆಂಬ ಆ ಕ್ಷೇತ್ರದಲ್ಲಿ ಹಿರಿಯರಿಗೂ ಕಿರಿಯರಿಗೂ ಇರುವ ಅನ್ಯೋನ್ಯ ಬಾಂಧವ್ಯದ ಆಯಾಮವೂ ತೆರೆದುಕೊಳ್ಳುತ್ತದೆ, ಕೃಷ್ಣ ಕಿರಿಯವನಾದರೂ ತನ್ನ ವಿಚಾರಗಳನ್ನು ಹಿರಿಯರ ಮೇಲೆ ಹೇರುವುದಿಲ್ಲ, ಅವರ ನಂಬಿಕೆಗಳ ಬಗೆಗೆ ತಿರಸ್ಕಾರ, ಅವಿನಯದಿಂದ ವರ್ತಿಸುವುದಿಲ್ಲ. ಅನುನಯದಿಂದ ತನ್ನ ವಿಚಾರಧಾರೆಯಲ್ಲಿರುವ ಸತ್ಯವನ್ನೂ, ಸತ್ವವನ್ನು ಹಿರಿಯರಿಗೆ ಮನಗಾಣಿಸುತ್ತಾನೆ, ಕೃಷ್ಣನಿಗೆ ಇಂದ್ರ ಸ್ವೇಚ್ಛಾಚಾರಿಯೆನಿಸುತ್ತದೆ: "...ಏಕೆ ಮಳೆಗರೆಯುವನೂಷರದಿ? ಕಡಲೊಳು ಸುರಿವನಿದೇಕೆ?" ಎಂದು ಪ್ರಶ್ನಿಸುತ್ತಾನೆ. ಹಲವು ವಾಸ್ತವಗಳನ್ನು "ಏಕೆ?" ಎಂದು ಪ್ರಶ್ನಿಸುವ ಧೈರ್ಯ ಮತ್ತು ಮನೋಧರ್ಮ ಬೆಳೆಸಿಕೊಳ್ಳಲು ಕೃಷ್ಣನ ವಿಚಾರಧಾರೆ ಸಹಾಯ ಮಾಡುತ್ತದೆ. ಬೃಂದಾವನಕ್ಕೆ ಗೋವರ್ಧನ ಪರ್ವತಕ್ಕಿಂತಲೂ ಹೆಚ್ಚು ಉಪಕಾರ ಮಾಡಿರುವುದಾದರೂ ಯಾವುದಿದೆ? ಮಳೆಗಾಳಿಗಳನ್ನು ತಡೆದು ಮಳೆ ಸುರಿಸುವವ ಗೋವರ್ಧನನಲ್ಲವೇ ಎಂಬ ಕೃಷ್ಣನ ಮಾತುಗಳಲ್ಲಿ ವೈಜ್ಞಾನಿಕ ಸತ್ಯವೂ ಇದೆ. ವಿಮಾನ ಸಂಚಾರಗಳು ಇರದಿದ್ದ ಕಾಲದಲ್ಲಿ ಪರ್ವತಗಳನ್ನು ತಮ್ಮ ನಾಡಿನ ರಕ್ಷಕರೆಂದೇ ತಿಳಿದಿರುತ್ತಿದ್ದರಲ್ಲವೇ? ಕೃಷ್ಣನ ವಾದ ಸರಣಿಗೆ ಹಿರಿಯರೂ ಒಪ್ಪಿಗೆ ನೀಡುತ್ತಾರೆ. ಗೋವ್ರಜದವರು ಅತ್ಯುತ್ಸಾಹದಿಂದ ಹಮ್ಮಿಕೊಂಡಿದ್ದ ಪರ್ವವನ್ನು ಕೈಬಿಡಿ ಎಂದೂ ಹೇಳುವುದಿಲ್ಲ ಕೃಷ್ಣ. ಮತ್ತಷ್ಟು ಹೆಚ್ಚು ಸಡಗರದಿಂದ ಹಬ್ಬವನ್ನಾಚರಿಸುವಂತೆ ಹೇಳಿ ಅವರ ಸಡಗರದಲ್ಲಿ ತಾನೂ ಭಾಗವಹಿಸುತ್ತಾನೆ. ಆದರೆ ಇಲ್ಲಿ ಪೂಜೆಗೊಳ್ಳುವುದು ಮಾತ್ರ ಇಂದ್ರನಲ್ಲ, ಗೋವರ್ಧನ ಪರ್ವತದ ಪಡಿಯಚ್ಚಿನಂತಿರುವ ಒಂದು ವಿಗ್ರಹ. ಗೋವರ್ಧನ ಪರ್ವತದ ಪ್ರತಿಕೃತಿಯನ್ನು ಬೃಂದಾವನದ ಜನ ಕಲ್ಪಾಗಮ ಪ್ರಕಾರ ಪೂಜಿಸಿ, ಯಜ್ಞ, ಯಾಗ, ಪೂರ್ಣಾಹುತಿಗಳನ್ನು ನೀಡಿ ಆನಂದಿಸುತ್ತಾರೆ. ಎಷ್ಟೋ ಕಾಲದಿಂದ ನಡೆದು ಬಂದಿದ್ದ ಆಚರಣೆಯೊಂದು ನಿಂತುಹೋದರೂ, ಅದರ ಬದಲಿಗೆ ಬೇರೆ ಒಂದು ರೂಢಿ, ಸಂಪ್ರದಾಯ,

ಸ್ಥಾಪಿತವಾಗುತ್ತದೆ. ಜನಸಮುದಾಯ ಸಾಮೂಹಿಕವಾಗಿ ಹರ್ಷಿಸಲು ಇಂತಹ ಪರ್ವ, ಉತ್ಸವಗಳು ಸಹಕಾರಿಯಾಗುತ್ತವೆ, ಹಾಗೂ ಜನಮಾನಸದಲ್ಲಿ ಸಮಷ್ಟಿಯಲ್ಲಿ, ಸಾಮರಸ್ಯ ಮೂಡಿಸಲು, ಜನಪದರಲ್ಲಿ ಅಡಗಿರುವ ಕಲೆಯ ಅಭಿವ್ಯಕ್ತಿಗೂ ಈ ಕಲ್ಪಗಳು ಸಹಕಾರಿಗಳಾಗುತ್ತವೆಂಬುದಂತೂ ಸತ್ಯ. ಭಾರತಾದ್ಯಂತ ನಡೆಯುವ ಉತ್ಸವ, ರಥೋತ್ಸವ ಜಾತ್ರೆಗಳ ಸಂದರ್ಭದಲ್ಲಿ ನಮಗೆ ಇದು ಅನುಭವವೇದ್ಯವಾಗುತ್ತದೆ, ಆದ್ದರಿಂದಲೇ ಪು.ತಿ.ನ. ಹೇಳುತ್ತಾರೆ: "....ಕಲ್ಪಂಗಳಿನೆ ಗಂಭೀರ ಭಾವೋದಯಂ ಮೌಲ್ಯಾಕರ ಜಾಗರಂ ನರಗೆ. ರಸತರ್ಷೆಗುಂ ತಣಿವದರಿನೇ, ಅಭಯ ವಂ ಕರುಣಿಸುವ ದೈವೇಜ್ಯೆಯಲ್ಪವ್ಯಯಕೆ ಮುಳಿವರದೇಕೆ ಬೌದ್ಧಿಕರು?"

ರೂಢಿಗತ ಸಂಪ್ರದಾಯವನ್ನು ಮುರಿದವರು ಪರಿಣಾಮವನ್ನೆದುರಿಸಲು ಸಿದ್ಧರಾಗಿರಬೇಕು. ತನಗೆ ಸಲ್ಲಬೇಕಾಗಿದ್ದ ಪೂಜೆ ತಪ್ಪಿ ಗೋವರ್ಧನ ಪರ್ವತದ ಪಾಲಾದದ್ದು ಕಂಡು ಇಂದ್ರ ಕ್ರೋಧಸಾಂದ್ರನಾಗಿ ಎಡೆಬಿಡದೆ ವರ್ಷಧಾರೆ ಸುರಿಸತೊಡಗಿದ. ಗೋವ್ರಜವೆಲ್ಲಾ ಕೊಚ್ಚಿ ಹೋಗುತ್ತಿದ್ದಾಗ, ಇದನ್ನು ನಿರೀಕ್ಷಿಸಿದ್ದು ಮೊದಲೇ ಯೋಜಿಸಿದ್ದನೋ ಎಂಬಂತೆ ಕೃಷ್ಣ, ಗೋವರ್ಧನ ಪರ್ವತವನ್ನು ತನ್ನ ಎಡಗೈ ಬೆರಳಿನಲ್ಲಿ ಎತ್ತಿ ಹಿಡಿದು, ಬೃಂದಾವನದ ತನ್ನ ಜನರನ್ನು ತನಗೆ ಪ್ರಿಯವಾದ ಗೋವುಗಳನ್ನು ಎಂಟುದಿನಗಳವರಗೆ ರಕ್ಷಿಸಿದ ಎಂಬ ಪವಾಡಸದೃಶ ಘಟನೆ ನಡೆಯುತ್ತದೆ. ನಮ್ಮ ಸಾಮಾನ್ಯ ಪ್ರಜ್ಞೆಗೆ ಇದು ಸೋಜಿಗವೆಂದೆನಿಸಿದರೂ, ಕವಿಯ ರಸಪ್ರಜ್ಞೆಗೆ ಇದು ಸೋಜಿಗವಲ್ಲ. ಸುರಗಿಮರದ ರೂಕ್ಷಶಾಖೆಯನ್ನು ನೋಡಿ ಪರಿಮಳದ ಸುಂದರ ಹೂವನ್ನು ಊಹಿಸಬಹುದೇ ಎಂದು ಕೇಳುತ್ತಾರೆ. ಹಾಗೆಯೇ ಈ ಗೋವರ್ಧನ ವನೆತ್ತಿದುದೂ ಅದ್ಭುತ, ಆದರೆ ಸಂಭವನೀಯ ಎನ್ನುವುದು ಪು.ತಿ.ನ.ರ ಅಭಿಮತ, ಜಡದಲ್ಲಿ ಜೀವದಲ್ಲಿ ತರ್ಕಕ್ಕೆ ಸಿಲುಕದ ಸಂಗತಿಗಳು ಘಟಿಸುತ್ತಿರುವಾಗ, "ವಿಕಸನದ ಪರಿಣತಿಯ ಮುಟ್ಟಿಹ ಮಾನುಷ ಪ್ರಕೃತಿಯೊಳು। ಜನಿಸನೇ ಷಾಡ್ಗುಣ್ಯ ಸಂಪತ್ತಿಯಿಂ। ಮೆರೆವಪುರುಷಂ ತತ್ತತ್ಕಾಲ ಕಾರಣಿಕನನೂಹ್ಯಂ?।" ಎಂದು ಕೃಷ್ಣನ ಈ ಅದ್ಭುತ ಎನಿಸುವ ಮಹತ್ಕಾರ್ಯವನ್ನು ಸಮರ್ಥಿಸುತ್ತಾರೆ, ಜಗತ್ಕಾರಣರಸನಾದ ಆ ಪರಮಾತ್ಮ ಕಾರ್ಯಕಾರಣ ನಿಬದ್ಧನೇ ಎಂಬ ಅಧ್ಯಾತ್ಮ ಚಿಂತನವನ್ನು ಪ್ರಸ್ತುತಪಡಿಸಿ, ನಂತರ ಗೋವರ್ಧನೋದ್ಧರಣ ಘಟನೆಯನ್ನು ಭಾವನಾತ್ಮಕನೆಲೆಯಿಂದ ಮತ್ತು ಕಾವ್ಯದೃಷ್ಟಿಯಿಂದ, ಅಂದರೆ ಕಾವ್ಯದಲ್ಲಿ ಅತಿಶಯೋಕ್ತಿ ಸಹಜವೆನ್ನುವ ನೆಲೆಯಿಂದ ಸಮರ್ಥಿಸುತ್ತಾರೆ. "ಭಾವಸತ್ತಾಕಾರಣಂ ತಾನಾಗಲನೃತಮಪ್ಪುದು । ಸೂನೃತಂ ರಸದೀಪನದೊಳಾ ಕತಕೆ ಭವದೊಳೆಂದುಂ। ಹುಸಿಯದವರಾಡುವರು । ಸತ್ಯವನೆ ದೀಪಿಸುವ ಹುಸಿಯನು ಕಬ್ಬದೊಳು...।" ಕೃಷ್ಣನು ಗೋವರ್ಧನವನ್ನು ಎತ್ತಿದುದನ್ನು ಒಪ್ಪುವ ಪು.ತಿ.ನ. "....ಭವದೊಳೆಂದುಂ । ಹುಸಿಯದವರಾಡುವರು । ಸತ್ಯವನೆ ದೀಪಿಸುವ ಹುಸಿಯನು ಶಬ್ದದೊಳು..." ಎಂದು ಹೇಳಿ ಕಾವ್ಯದಲ್ಲಿ ಅತಿಶಯೋಕ್ತಿಯ ಸ್ಥಾನವೇನೆಂಬುದನ್ನು

ನಿರ್ಧರಿಸುತ್ತಾರೆ. ಕಾವ್ಯದಲ್ಲಿಯ ಹುಸಿ "ಸತ್ಯವನೆ ದೀಪಿಸುವ ಹುಸಿ"ಯಾದ್ದರಿಂದ ಆ ಹುಸಿ ಅಥವಾ ಅತಿಶಯೋಕ್ತಿ ಕಾವ್ಯದಲ್ಲಿ ಅನುಮತಿಸಲ್ಪಟ್ಟಿರುವುದು. ವರ್ಷಧಾರೆಯಿಂದ, ಬೃಂದಾವನದಲ್ಲಿ "ಬಾನಿಳೆ ಮಲೆಗಳೊಂದಾದ ಅ ದುರ್ದಿನದಿ" ತಮ್ಮ ಕಡೆಗಾಲ ಬಂತೆದು ಜನ ತಲ್ಲಣಿಸುತ್ತಿರುವಾಗ, ದಿಕ್ಕು ತೋರದೆ ಗೋವುಗಳು ಆಕ್ರಂದಿಸುತ್ತಿರುವಾಗ, ಕೃಷ್ಣ ಆ ಚಂಡಮಾರುತ ಮಳೆಗಳಿಂದ ತನ್ನವರನ್ನು ರಕ್ಷಿಸಲು ತಾನು ಕಂಡಿದ್ದ ಒಂದು ಗುಹೆಯನ್ನು ತೋರಿಸಿದ ಅವರಿಗೆ ಎಂದರೆ ಅದು..... "ಭಗವಂತಗುಚಿತಮೆ?" ಅದರಿಂದ "ಶ್ರೀಕೃಷ್ಣಭಾವಂ ಕೆಡದೆ? ಕಾವ್ಯ ಸತ್ಯಂ ಕುಸಿಯದೆ?" ಎನ್ನುತ್ತಾರೆ ಪು.ತಿ.ನ. ಆದರೆ, ಗೋವರ್ಧನ ಪರ್ವತವನ್ನು ತನ್ನ ಕಿರುಬೆರಳಿನಲ್ಲಿ ಛತ್ರಿಯಂತೆ ಎತ್ತಿ ಹಿಡಿದು ತನ್ನವರನ್ನು ತನ್ನ ಪ್ರಿಯ ದನಕರುಗಳನ್ನು ಅದರ ಆಶ್ರಯಕ್ಕೆ ಕರೆದ ಅದ್ಭುತ ನಡೆದಾಗ "ಅಂಜಿಕೆಯ ಬೆಟ್ಟವನೆ ತಾನೆತ್ತಿ ತನ್ನವರ ಮನದಿಂ" ತಾನು ಅಚಲನಾಗಿ ನಿಂತ ಆ ಲೋಕನಾಯಕ ಶ್ರೀ ಹರಿಯ ಬಗೆಗೆ, ಅವನ ಸಾಹಸ ಪವಾಡ ಸದೃಶ ಕಾರ್ಯಗಳ ಬಗೆಗೆ ಅತೀವ ಭಕ್ತಿ ನಂಬಿಕೆಗಳ ನಡುವೆಯೂ ಪು.ತಿ.ನ. ಅವರ ಮನಸ್ಸಿನಲ್ಲಿ ಸಾಸಿವೆಯಷ್ಟು ಶಂಕೆ ಮೂಡಿರಬಹುದೆ? ಆ ಶಂಕೆಯ ನಿವಾರಣೆಗಾಗಿ ಈ ಸಮರ್ಥನೆಗಳೆ ಎನಿಸುತ್ತದೆ.

ಇಂದ್ರನು ಕಳಿಸಿದ್ದ ಸಂವರ್ತಕ ಮೇಘಗಳು ಏಳುದಿನ ಎಡಬಿಡದೆ ಮಳೆಸುರಿಸಿ ಬರಿದಾದವು, ಏಳುದಿನವೂ ಬೆಟ್ಟ ಹಿಡಿದು ನಿಂತೆಡೆಯೇ ನಿಂತಿದ್ದ ಕೃಷ್ಣ, ಆ ಬೆಟ್ಟದ ಗವಿಯಲ್ಲಿ ಬಲರಾಮ ಕೃಷ್ಣರು, ಅಪಾಯದ ಸುಳಿವು ಕಂಡಿದ್ದರೋ ಎನ್ನುವಂತೆ, ಹಣ್ಣು ಕಾಯಿ ದವಸ ಧಾನ್ಯಗಳನ್ನು ತುಂಬಿಟ್ಟಿದ್ದರು. ಗೋವುಗಳ ಹಾಲಂತೂ ಸಿಗುತ್ತಲೇ ಇತ್ತು. ಮಳೆ ನಿಂತ ಮೇಲೆ ದೇವಲೋಕದ ಸುರಭಿಯೇ ಬಂದು ತನ್ನ ಹಾಲಿನಿಂದ ಕೃಷ್ಣನ ಪಾದ ತೊಳೆದು "ಗೋವಿಂದ" ಎಂದು ಕರೆಯುತ್ತಾಳೆ. ಸ್ವತಃ ಇಂದ್ರನೇ ನತಮಸ್ತಕನಾಗಿ ಕೆಳಗಿಳಿದು ಬಂದು ಕೃಷ್ಣನಿಗೆ ವಿಶ್ವ ಪಟ್ಟಾಭಿಷೇಕ ಮಾಡುತ್ತಾನೆ. "ವಿಶ್ವಾಧಿಪತ್ಯದ ಮಂಗಲ ಕಲ್ಪದಿಂದ ದೇವೇಂದ್ರನಿಂದ ಅಭಿಷಿಕ್ತನಾದ ನಂತರ ಕೃಷ್ಣನ ಮಾತುಗಳಲ್ಲಿ ಸೃಷ್ಟಿ ಸಾಮರಸ್ಯದ ರಹಸ್ಯವಡಗಿದೆ: "ದೇವೇಂದ್ರ ಭಯದಿಂದಲ್ಲ । ಪೂಜಿಸಲು ಸಂಚೋದಿಪುದು ತಿರೆಯು ದೇವ । ಪ್ರೀತಿಯಿಂ । ನ್ಯಾಸಂಪ್ರಭುತೆ..." "ಸುಮನಸರಾಗದಿರೆ ದೇವರವರಿದ್ದರೇನಿಲ್ಲದಿರಲೇಂ.." ಎಂದು ಒಳ್ಳೆಯ ಮನಸ್ಸಿರದ ದೇವತೆಗಳು ಇದ್ದರೇನು ಇರದಿದ್ದರೇನು ಎಂದು ಸುರರ ಇರವಿನ ಬಗೆಗೆ ಉಪೇಕ್ಷೆ ತೋರುವ ಕೃಷ್ಣ ತನ್ನ ಸಿದ್ಧಾಂತದಿಂದ "ಆನಂದವರ್ಧನವೆ ಸೃಷ್ಟಿತತ್ವಂ । ಸುರರಿಹುದದನು ಬುವಿಯೊಳಗಾಗಗೊಡೆ..." ಎಂದು ಸುರರಿಗೆ ತಮ್ಮ ಕರ್ತವ್ಯದ ಅರಿವು ಮೂಡಿಸುತ್ತಾನೆ. ಗೋವರ್ಧನೋದ್ಧರಣದ ಸಂದರ್ಭದಲ್ಲಿ ಭೂಲೋಕ–ದೇವಲೋಕ, ಮನುಷ್ಯ–ಪ್ರಕೃತಿ, ಪಶುಗಳು, ದೇವತೆಗಳು ಸೃಷ್ಟಿ ಸಮಸ್ತವೂ, ಗೋವರ್ಧನಧಾರೀ ಕೃಷ್ಣಚೇತನದ ಅಭಯಛತ್ರದಡಿಯಲ್ಲಿ ಒಂದುಗೂಡುವ ಭೂಮ ಕಲ್ಪನೆ ಸಾಕ್ಷಾತ್ಕಾರಗೊಂಡಿದೆ.

ಹೀಗೆ ಆರಂಭವಾದ ಸಮಷ್ಟಿಯ ಸಾಮರಸ್ಯದ ಕಲ್ಪನೆ "ನವನಿರ್ಮಾಣ"ದಲ್ಲಿ ಮುಂದುವರೆಯುತ್ತದೆ. ಸತತ ವರ್ಷಧಾರೆ, ಚಂಡಮಾರುತಗಳಿಂದ ವಿನಾಶಗೊಂಡಿದ್ದ ಬೃಂದಾವನದ ನವನಿರ್ಮಾಣ, ಸೃಷ್ಟಿ, ಸ್ಥಿತಿ, ಲಯ ಮತ್ತೆ ಸೃಷ್ಟಿ ಈ ನಿಯಮದಂತೆ, ಮೊದಲು ಇದ್ದಿದ್ದಕ್ಕಿಂತಲೂ ಸುಂದರವಾಗಿ ಅಚ್ಚುಕಟ್ಟಾಗಿ ಬೃಂದಾವನದ ಮರುಸೃಷ್ಟಿಯಾಗುತ್ತದೆ. ಹೊಸದಾಗಿ ನಿರ್ಮಾಣಗೊಂಡ ಬೃಂದಾವನದ ಹಟ್ಟಿಗಳು, "ಚಳಿಗಾಲದೊಳು ಬೆಚ್ಚಗಿಹ, ದಗೆಗಾಲದೊಳು ತಣ್ಣಗಿಹ, ಬೇಕೆನಿಸದುದು ಹೊರಸದ್ದನೊಳಬಿಡದ" ಗ್ರಾಮೀಣ ತಾಂತ್ರಿಕ ವಿನ್ಯಾಸದಿಂದ ಹವಾನಿಯಂತ್ರಿತ ವಾದಂತಹವು. ಬಲರಾಮ, ಕೃಷ್ಣರೇ ಅಲ್ಲಿಯ ಅಭಿಯಂತರು, ತುರುದೊಡ್ಡಿ, ಕರುದೊಡ್ಡಿ, ಹರವಿನ ಬೀದಿ, ತಂಗದೆ ಹರಿವನೀರೋಟ, ಆಡುಂಬೊಲ, ದೇಗುಲ ಎಲ್ಲವೂ ಸಿದ್ಧವಾಗಿ ವಾಸ್ತು ಪುರುಷನ ಪೂಜೆ ಸಡಗರದಿ ನಡೆಯುತ್ತದೆ. ಬೃಂದಾವನದ ವಿನಾಶವಾಯಿತೆಂದು ಕೈಕಟ್ಟಿ ಕುಳಿತುಕೊಳ್ಳಲಿಲ್ಲ ಕೃಷ್ಣ. ಸಮಷ್ಟಿಯಲ್ಲಿ ಒಂದಾಗಿ, ಅವರಲ್ಲಿ ಚೈತನ್ಯ ತುಂಬಿ ಕ್ರಿಯಾಶಾಲಿಯನ್ನಾಗಿ ಮಾಡುವ ಅದ್ಭುತ ಸಾಮರ್ಥ್ಯ ಶ್ರೀಕೃಷ್ಣನದು.

ಗೋವ್ರಜದ ನವನಿರ್ಮಾಣದ ನಂತರ ಮತ್ತೆ ದೈನಂದಿಕ ಕ್ರಿಯೆಗಳು ಸಹಜ ಸ್ಥಿತಿಗೆ ಮರಳುತ್ತವೆ. ತನ್ನ ಗೆಳೆಯರಾದ ಗೋವಳರಿಗೆ ಕೃಷ್ಣ ಯಾವಾಗಲೂ ಆಪದ್ಬಾಂಧವನೇ ಆಗುತ್ತಾನೆ. ಕಾಡಿನಲ್ಲಿ ಹುಲ್ಲುಗಾವಲಿಗೆ ಬೆಂಕಿ ಹೊತ್ತಿಕೊಂಡು ಅದರ ನಡುವೆ ಸಿಕ್ಕಿಕೊಂಡಿದ್ದ ಗೋವುಗಳನ್ನು ಗೋಪಾಲಕರನ್ನು ರಕ್ಷಿಸುವವನು ಕೃಷ್ಣನೇ. ಬಲರಾಮನೊಡನೆ ಭಾಂಡೀರ ವೃಕ್ಷದರ್ಶನಕ್ಕಾಗಿ ಬಂದಿದ್ದಾಗ, ಕೃಷ್ಣನ ಬಳಿ ಬಂದ ಗೋವಳರು ಹಸಿವಿನಿಂದ ಕಂಗೆಟ್ಟಾಗ "ಜನ್ನಿಗವೆಂಡರಿಂದ" ಅನ್ನಾಹಾರ ಪಡೆಯಲು ತಿಳಿಸಿ, ಮಕ್ಕಳ ಬೇಡಿಕೆಯನ್ನು ಮನ್ನಿಸದ ಯಾಜ್ಞಿಕರಿಗಿಂತಲೂ, ಅವರ ಪತ್ನಿಯರೇ ಮಿಗಿಲು ದೈವೀ ಪ್ರೇಮದಲ್ಲಿ ಎನ್ನುತ್ತಾನೆ ಕೃಷ್ಣ, ಯಾಜ್ಞಿಕರನ್ನು "ಸ್ವಾರ್ಥದಿ ನಿಂತ ಕರ್ಮಠರಿಗೆ ಕನಿಕರವಿಲ್ಲ"ವೆಂದು ಟೀಕಿಸುತ್ತಾನೆ. 'ಜನ್ನಿಗವೆಂಡಿರೌತಣಂ'ನಲ್ಲಿ ಕೃಷ್ಣನಿಗೆ ಮಹಿಳೆಯರ ಬಗೆಗಿರುವ ಗೌರವ ಅಭಿಮಾನಿಗಳು ಅನಾವರಣಗೊಳ್ಳುತ್ತವೆ. ಕುಲಶೀಲ ಹಾಡು ಹಸೆ ಗೃಹಸಂಸ್ಕಾರ ಕಲ್ಪಂಗಳನ್ನು ಹೆಂಗಸರು ಒಲಿದು ಹಸೆಗೈಯದಿರೆ, ಮನೆಯಲ್ಲಿ? ಬಂಧು ಭಾವವೆಲ್ಲಿ? ದೇವರು ಸುಳಿವರೇ ನಲಿವರೇ ಮಹಿಳೆಯರಿಗವಮತಿ ಯಪ್ಪ ತಾಣದೊಳು? ಸದ್ಭಾವಮೆನಗವರೊಳದರಿಂ ಬಲ್ಲರವರುಂ ನನ್ನ" ಎಂದು ಮಹಿಳೆಯರ ಬಗೆಗೆ ತನ್ನ ಅಭಿಮಾನವನ್ನು ಕೃಷ್ಣ ತಿಳಿಸುತ್ತಾನೆ. ಆ ಯಾಜ್ಞಿಕರ ಪತ್ನಿಯರು ಕೃಷ್ಣ ಮೋಹಕ ರೂಪವನ್ನು ಕೇಳಿ ಅವನನ್ನು ನೋಡಲಿಚ್ಛಿಸಿದ್ದವರು, ಮುರಳಿಯ ಗಾನವನ್ನು ಕೇಳ ಬಯಸಿದ್ದವರು. ಹಾಗಾಗಿ ಕೃಷ್ಣ ಭಾಂಡೀರ ವೃಕ್ಷದ ಬಳಿ ಇರುವುದನ್ನು ತಿಳಿದು, ಭಕ್ಷ್ಯ, ಭೋಜ್ಯ, ಅನ್ನಾಹಾರಗಳನ್ನು ಹೊತ್ತು ತಂದು ಆ ಮಕ್ಕಳಿಗೆ ಉಣಿಸಿ ಧನ್ಯರಾಗುತ್ತಾರೆ. ಪ್ರತಿಯಾಗಿ ಕೃಷ್ಣ ಕೊಳಲನೂದಿ ಅವರ ಅಭಿಲಾಷೆ ಯನ್ನು ಪೂರೈಸುತ್ತಾನೆ. ಆ ಗಾನವಾದರೂ ಎಂತಹುದು? "ಷಡ್ವರ್ಗ ಹತಿಗತಿಯ।

ನಿನದಿಸಿ ಮೊದಲು ತಿಳಿಗೊಳಿಸುತಂತಃಕರಣವನು, ಬಿಡಿಸಿ । ಭವದಿಂ ಪ್ರಜ್ಞೆಯಂ, ಕೋಮಲ ಭಾವಕಾರಕವಾಗುವೊ । ಲದನುದ್ಧರಿಸಿ ರಸವಲಯದೊಳು ನಿಲ್ಲಿಸಿದನರೆಗಳಿಗೆ।" ಇದು "ಭವದ ಮಾಯೆಯ ತೊಲಗಿಸುವ ಶ್ರೀಹರಿಯ ಮುರಲಿಯ ಮಾಯೆ" ಕೇಳಿದ ಆ ಯಾಜ್ಞಿಕರ ಪತ್ನಿಯರಿಗೆ "ತಮ್ಮ ಜೀವಮೆಲ್ಲಿಗೋ ತೇಲಿಹೋದಂತೆ" ತೋರಿತಂತೆ. ಪ್ರತಿಯೊಂದು ಸನ್ನಿವೇಶದಲ್ಲಿಯೂ, ಕೃಷ್ಣನ ಸಂವೇದನಾಶೀಲತ್ವ, ಸಮಷ್ಟಿಯ ಒಳಿತಿಗಾಗಿ ಮಿಡಿವ ಹೃದಯದಿಂದ ಪರಿಚಯವಾಗುತ್ತದೆ.

❍

# ಪ್ರಲಂಭವಧಂ

'ಪ್ರಲಂಭವಧಂ'ನ ಆರಂಭದಲ್ಲಿ ಪು.ತಿ.ನ. ಒಳಿತು–ಕೆಡಕುಗಳ ಬಗೆಗೆ, ದುಷ್ಟ ಶಿಕ್ಷಣ– ಶಿಷ್ಟ ರಕ್ಷಣಗಳ ಬಗೆಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಾರೆ. ವಿಶಾಲ ದೃಷ್ಟಿಯಿಂದ ನೋಡಿದಾಗ ಒಳಿತು ಕೆಡಕುಗಳು ಒಂದರೊಳಗೊಂದು ಹೊಸೆದುಕೊಂಡಿರುವುದು ಅರಿವಾಗುತ್ತದೆ. ಪ್ರಾಕೃತಿಕ ನೆಲೆಯಿಂದ ಒಳಿತು–ಕೆಡಕು, ಮಲ–ಅಮಲಗಳ ಇರವನ್ನು ವಿಶ್ಲೇಷಿಸುತ್ತಾ ಪು.ತಿ.ನ. ಪ್ರಶ್ನಿಸುತ್ತಾರೆ: "ಪ್ರಕೃತಿಯಲಿ ಕೇಡಿತ್ತೆ, ಮಂಗಲವಿತ್ತೆ, ಮಲವಮಲವೆಂಬ ಸಹ್ಯಾಸಹ್ಯಭಾವವಿತ್ತೆ?" ಇಂದು ಜಗತ್ತಿನಲ್ಲಿ ವ್ಯವಸ್ಥಿತವಾಗಿ ರೂಪುಗೊಂಡಿರುವ ಆಹಾರ ಚಕ್ರದ ಪರಿಭ್ರಮಣೆಯನ್ನು "ತಾನುಂಡು । ಮಲವೆಂಬುದನು ನಾವುಂಬ ಫಲವೀಯುತಿದೆ ಸಸ್ಯಾಳಿ।" ಎನ್ನುತ್ತಾರೆ ಪು.ತಿ.ನ. ಇಂದು ಅಸಹ್ಯವಾದ ಮಲವೆನಿಸಿರುವುದು, ನಾಳೆ ಸಹ್ಯವಾದ, ದೇಹಪೋಷಣೆಗೆ ಅವಶ್ಯ ಫಲ–ಸಸ್ಯ ಆಹಾರ, ಇಂದು ಆಹಾರವಾದದ್ದು ನಾಳೆ ಮತ್ತೆ ಮಲ. ಹೀಗೆ ಮಲ–ಅಮಲ ಎನ್ನುವುದು ಎರಡು ಅವಸ್ಥಾಂತರಗಳು ಮಾತ್ರ, ಈ ಪ್ರಾಕೃತಿಕ ಪರಿಭ್ರಮಣದಲ್ಲಿ, ಆದರೆ ಮನುಜಸ್ತರದಲ್ಲಿ ಸಹ್ಯಾಸಹ್ಯದ ಭೇದ ಅಂಕುರಿಸಿ ನಮ್ಮನ್ನು ಕಾಡುವುದು ಎನ್ನುತ್ತಾರೆ ಪು.ತಿ.ನ. ಜಗದಾತ್ಮ ವಿಸ್ತಾರದ ವಿಶಾಲ ದೃಷ್ಟಿಯಲ್ಲಿ ಕೇಡು–ಒಳಿತುಗಳಿಗೆಡೆಯಿಲ್ಲ. "ಸಾಗರ ಸಮತಲದಿ ನಿಲಳೆಲಸಲು ತೆರೆಬಿದ್ದು ತೆರೆಯೆದ್ದು ಕುದಿವಂತೆ ಈ ದುಷ್ಟ, ಶಿಷ್ಟರ ಮೇಲ್ ಬೀಳ್ ಹೊಯ್ದಾಟ...." ಹರಿಯೂ ಅವನು ಕೊಂದಂಥ ಈ ಭೂಮಿಯ ದುರುಳರೂ ಸಮವಾಗಿ ಕಂಡರಂತೆ ಶುಕಮುನಿಗೆ. ಅಂತ್ಯದಲ್ಲಿ.... ಪರಮೇಶನಿಗೆ ಒಳಿತು–ಕೆಡಕು ಎರಡೂ ಸಮಾನವೆಂಬ ಕಾಣ್ಕೆಯನ್ನು ಪ್ರತಿಪಾದಿಸಿ ಪು.ತಿ.ನ. ಹೇಳುತ್ತಾರೆ: "ಸಮತೆಗೆಡೆ ತೋರಿಸಲು ಬರುವನವತಾರ ಪುರುಷಂ, ಹಗೆಯಿಲ್ಲ ಕಳೆಯಿಲ್ಲವಾತನಿಗೆ ...ಪ್ರೇಮದ ಹರವಿಗಡ್ಡ ಬಹುದೆಲ್ಲವ ತೊಡೆದು ಸರ್ವರಿಗು । ಸೊಗವನು ಹಂಚುವುದೆ ಗುರಿ. ಇದುವೆ ಶಿಷ್ಟ ಪರಿಪಾಲನಂ । ದುಷ್ಟಶಿಕ್ಷಣಮಿದುವೆ....।" ಇಂತಹ ಅವತಾರ ಪುರುಷರ ರೀತಿನೀತಿಗಳಿಗೂ ಭವಿಗಳ ರೀತಿ ನೀತಿಗೂ ಅಜಗಜಾಂತರ.

ಭವಿಗೂ ಅವತಾರ ಪುರುಷನಾದ ರಸಸ್ಥನಿಗೂ ಇರುವ ವ್ಯತಾಸವನ್ನು ಪು.ತಿ.ನ 'ರಸಪ್ರಜ್ಞೆ', ಎಂಬ ಲೇಖನದಲ್ಲಿ ಹೀಗೆ ವಿಶದೀಕರಿಸುತ್ತಾರೆ: "ಭವಜಾಗರದಲ್ಲಿ ಪುರುಷ ಸ್ವಭಾವಬದ್ಧ, ಜೀವಕಾಮ ನಿಯುಕ್ತ ಯೋಗಕ್ಷೇಮ ಚಿಂತಾಮಗ್ನ, ರಾಗದ್ವೇಷಗಳಿಂದ ಉದ್ರಿತ, ಅಹಂಕಾರ ಮಮಕಾರಗಳಿಂದ ಸೀಮಿತ, ಸತ್ಯ–ಶಿವ–ಸುಂದರವೆಂಬ ಶ್ರೇಯಸ್ಕರ ಮೌಲ್ಯಗಳಿಂದ ಆಗಾಗ ಸಬ್ರುಷ್ಟನಾದರೂ, ಅವುಗಳ ಸಾಕ್ಷಾತ್ಕಾರಕ್ಕಾಗಿ ಯಾವ ಗಾಢ ಪ್ರವೃತ್ತಿಯನ್ನೂ ತಳೆಯುವುದಿಲ್ಲ..... ರಸಸ್ತರದಲ್ಲಿ ಆತ ಸ್ವಭಾವ ಮುಕ್ತ, ಯೋಗಕ್ಷೇಮ ಕಾತರವಳಿದವನು, ಅರಿಷಡ್ವರ್ಗವನ್ನು ನಿಯಂತ್ರಿಸಬಲ್ಲ ಊರ್ಜಾವಂತ... ತಾರತಮ್ಯರಹಿತನಾಗಿ ಎಲ್ಲರಲ್ಲೂ ಸಹಜವಾಗಿ ವ್ಯವಹರಿಸಬಲ್ಲವನು.... ರಸಪ್ರಜ್ಞೆ ಯುಳ್ಳವನಿಗೆ ಯಾವುದೂ ನಿಕೃಷ್ಟವೆನಿಸುವುದಿಲ್ಲ. ಆತನಿಗೆ ಅಸ್ಪೃಶ್ಯರಿಲ್ಲ ಅಸಂಭವ ನೀಯರೂ ಅಲ್ಲ," "ಜಗದೊಡೆಯನು ಜೀವಾಂಶದಿಂದ ಇವುಗಳಲ್ಲಿ ಹೊಕ್ಕಿದ್ದಾನೆ ಎಂದು ನೆನೆಯುತ್ತಾ, ಕುದುರೆ, ಚಂಡಾಲ, ಹಸು, ಕತ್ತೆ ಮೊದಲಾದವೆಲ್ಲಕ್ಕು ಸಾಷ್ಟಾಂಗ ನಮಸ್ಕಾರ ಮಾಡಬೇಕೆನ್ನುತ್ತದೆ ಭಾಗವತ.... ಭವಸ್ತರದಲ್ಲಿ ವ್ಯಕ್ತಿ ಪಕ್ಷವರ್ತಿ, ಪ್ರತಿಷ್ಠಾ ಕಾಮಿಯಾದರೆ, ರಸಸ್ತರದಲ್ಲಿ ಅವನು ಸಾಕ್ಷಿ ಧರ್ಮದೃಕ್..." (ರಸಪ್ರಜ್ಞೆ ಪು.ತಿ.ನ. ಸಮಗ್ರ ಗದ್ಯ ಸಂಪುಟ, ಪುಟ. ೫೧೨). ಶ್ರೀಹರಿ ಇಂತಹ ರಸಪ್ರಜ್ಞೆಯನ್ನು ಸಿದ್ಧಿಸಿಕೊಂಡ ಅವತಾರ ಪುರುಷನೆನ್ನುವುದು ಪು.ತಿ.ನ. ಅವರ ನಂಬಿಕೆ.

ಶ್ರೀಕೃಷ್ಣ ಬಲರಾಮರು ಮಥುರೆಗೆ ಹೊರಡುವ ಮೊದಲು, ಕೃಷ್ಣನ ರಾಸಾರಂಭಕ್ಕೂ ಮೊದಲು ನಡೆಯುವ ದುಷ್ಟ ಶಿಕ್ಷಣದ ಘಟನೆಯೇ ಪ್ರಲಂಬ ವಧ, ಬೃಂದಾವನದ ಗೋವಳರು ಭಾಂಡೀರ ವೃಕ್ಷದಡಿಯಲ್ಲಿ, "ಸೋತವರು ಗೆದ್ದವರನ್ನು ಹೊತ್ತೋಡುವ" ಜನಪ್ರಿಯ ಗ್ರಾಮೀಣ ಕ್ರೀಡೆಯಲ್ಲಿ ಆನಂದಿಸುತ್ತಿರುವಾಗ 'ಗೋಪಾಲಕನ ಛದ್ಮವೇಷ' ಧರಿಸಿ ಮೆದು ಮಾತನಾಡುತ್ತಾ ಬಂದ 'ದುಷ್ಟಚಿತ್ತ'ನೇ ಪ್ರಲಂಭಾಸುರ. ಅವನು ಆಟದಲ್ಲಿ ಬಲರಾಮನಿಗೆ; ಸೋತಂತೆ ನಟಿಸಿ, ಬಲರಾಮನನ್ನು ಹೆಗಲ ಮೇಲೆತ್ತಿಕೊಂಡು ಓಡುತ್ತಿದ್ದಾಗ ಗೋವಳರು ಚಪ್ಪಾಳೆಯಿಕ್ಕಿ ನಗುತ್ತಾರೆ. ಆದರೆ ನೋಡನೋಡುತ್ತಿದ್ದಂತೆಯೇ ಆ ಪ್ರಲಂಭ ಅತಿದೂರಕ್ಕೆ ಬಲರಾಮನನ್ನೊಯ್ದುದಲ್ಲದೆ, ಭಯಂಕರವಾಗಿ ಬೆಳೆದು ರಕ್ಕಸ ರೂಪ ತಳೆದಾಗ ಗೋವಳರು ಹೆದರುತ್ತಾರೆ. ಆದರೆ ಬಲರಾಮ ವಜ್ರಮುಷ್ಠಿಯಿಂದ ಆ ದುಷ್ಟಚಿತ್ತನನ್ನು ಹೊಡೆಹೊಡೆದು ಧರೆಗುರುಳಿಸುತ್ತಾನೆ. ಕೃಷ್ಣ ಬಲರಾಮ ಗೋವಳಿರಿಗೆಲ್ಲ ಚಿಕ್ಕ ಬಾಲಕನಂತೆ ಸ್ನೇಹ ಬೆಳೆಸಿ ಬಂದವನಲ್ಲಿ ಇಂತಹ "ಬೂತು ರಕ್ಕಾಕ್ಷ ವಿಕೃತಾನನ" ಹೇಗೆ ಹುದುಗಿತ್ತೆಂದು ಅಚ್ಚರಿಯಾಗುತ್ತದೆ. ಕೃಷ್ಣನನ್ನು ಬಾಧಿಸುವ ಚಿಂತೆ, ಈ ದುಷ್ಟಚಿತ್ತನು ಬಲರಾಮನನ್ನು ಬಿಟ್ಟು ಬೇರೆ ಗೋವಳನನ್ನಾರಿಸಿಕೊಂಡಿದ್ದರೆ ಏನುಗತಿಯಾಗುತ್ತಿತ್ತು ಎಂಬುದು, ಬಲರಾಮ ತಾನು ಪ್ರಲಂಬನನ್ನು ಎದುರಿಸಿದ ಬಗೆಯನ್ನು ಗೋವಳರಿಗೆ ಕಥೆಯಾಗಿ ಬಿತ್ತರಿಸುತ್ತಾನೆ. ಈ ಸನ್ನಿವೇಶದಲ್ಲಿ ಕೃಷ್ಣ,

ಬಲರಾಮರ ದೃಷ್ಟಿಕೋನಗಳಲ್ಲಿರುವ ಭಿನ್ನತೆಯನ್ನು ಪು.ತಿ.ನ. ತೆರೆದಿಡುತ್ತಾರೆ. ಪ್ರಲಂಬಾಸುರನಂತಹ ರಕ್ಕಸದೇಹಿಗಳಂತಹವರ ಬಗೆಗೆ ಕೃಷ್ಣ ತನ್ನ ತೀರ್ಮಾನ ನೀಡುತ್ತಾನೆ. "ದೊಡ್ಡ ಮೈ ದೊಡ್ಡ ಜೀವಂ. ಗಾತ್ರಕ್ಕೆ ತಕ್ಕ ಮನವಿಲ್ಲ। ಅಲ್ಪಮದು, ಮದಜಡಂ, ತನ್ನ ಹೊರತನ್ಯವ ಕಾಣದಿಹ ಕುರುಡುಗರ್ವಂ।" ಇಷ್ಟು ಹೇಳುವುದಲ್ಲದೇ ಇಂತಹವರ ಛದ್ಮವೇಷ ಕೃತಿಮ ನಡವಳಿಕೆಗಳ ಬಗೆಗೆ "ನಾಗರೀಕರಿಗೆ ಸಹಜಮೋ ಈ ಕೃತ್ರಿಮಂ" ಎಂದು ನಾಗರೀಕ ಸಂಸ್ಕೃತಿಯ ಬಗೆಗೂ ಟೀಕಿಸಿ ಗ್ರಾಮೀಣ ಸರಳತೆ, ನಗರ ಸಂಸ್ಕೃತಿಯ ಕೃತ್ರಿಮತೆಯ ಬಗೆಗೆ ಎಚ್ಚರಿಸುತ್ತಾನೆ. ಪ್ರಲಂಬನಂತಹವರಿಗೆ ಹಳ್ಳಿಯವರನ್ನು ಗಾವಿಲರೆಂದು ಕಡೆಗಣಿಸಿ ಅವರಿಗೆ ಕೋಟಲೆ ನೀಡುವುದೇ ರೂಢಿಯಾಗಿದೆ ಎನಿಸಿದರೂ, ಅವನ ಕೇಡನ್ನು ಅರಿತರೂ, ಕೃಷ್ಣನಿಗೆ ಅವನ ಮೇಲೆ ಮರುಕ "ವೈರಿಯೊಳುಮೊಲುಮೆ ಯನು ಬಯಪೆನಾ" ಎನ್ನುವುದಲ್ಲದೆ "ತಿಳಿವಿಲಿತನವೆ ತವರು ಕೇಡಿಗತನಕೆ" ಎಂದು ತಿಳಿವಿನ ಅಭಾವವೆ ಕೇಡಿಗತನದ ಮೂಲವೆಂದು ಕೆಡುಕಿನ ವಿಶ್ಲೇಷಣೆ ಮಾಡುತ್ತಾನೆ. ಬಲರಾಮನ ನಿಲುವೇ ಬೇರೆ "ಒಲಿವರಿಗೆ ಒಲಿವುದಂ ಹಗೆವರಿಗೆ ಹಗೆವುದಂ ನೇರಂ। ಕೊಲ್ಲಬಹಗೇಕೆ ಮರುಕಂ?" ಎಂದು ಪ್ರಶ್ನಿಸಿ, ದುಷ್ಟಾತ್ಮರನ್ನು ಅಡಗಿಸುವ ಶಕ್ತಿಯಿದೆಯೆಂದು ತೋರ್ಪಡಿಸದಿದ್ದರೆ ಅಂತಹ ಬಲಪೌರುಷಗಳೇಕೆ ನನ್ನಂತಹವರಲ್ಲಿ ಎನ್ನುತ್ತಾನೆ, ಬಲರಾಮ.

❍

# ರಾಸಾರಂಭಂ–ಗೋಪಿಕಾವಿಲಾಸ–ರಾಸಕ್ರೀಡೆ

ಶ್ರೀಕೃಷ್ಣನ ಜೀವನದಲ್ಲಿ, ಬೃಂದಾವನದ ರಾಸಲೀಲೆ, ಸ್ನೇಹ, ಒಲುಮೆ, ಶೃಂಗಾರ ಭಕ್ತಿ ಪರಸ್ಪರ ಸಮರ್ಪಣಭಾವ, ಅಧ್ಯಾತ್ಮ ತತ್ವಗಳೆಲ್ಲ ತುಂಬಿರುವ ರಸಘಟ್ಟ. ತನ್ನ ಸಾನ್ನಿಧ್ಯಕ್ಕಾಗಿ, ತನ್ನ ಮುರಳಿಗಾನವನ್ನಾಲಿಸುವುದಕ್ಕಾಗಿ, ಪರಿತಪಿಸುತ್ತಿರುವ ಗೋಪಿಯರನ್ನು ಕೃಷ್ಣನು ತನ್ನ ಸ್ನೇಹ, ಒಲುಮೆ, ಶೃಂಗಾರಗಳಿಂದ ರಮಿಸುವ ಚಿತ್ರಣ 'ಶ್ರೀಹರಿಚರಿತೆ' ಯಲ್ಲಿ ಮನಮೋಹಕವಾಗಿ ಮೂಡಿಬಂದಿದೆ. ಶ್ರೀಹರಿಸಾನ್ನಿಧ್ಯಕ್ಕಾಗಿ ರಾಧೆಯ ದುಗುಡ ದುಃಖಗಳ ಜೊತೆಗೇ, ಅದೇ ಹರಿಗಾಗಿ ಗೋಪಿಯರ ಸಾಮೂಹಿಕ ಹಂಬಲ ಪ್ರಾರ್ಥನೆಗಳು, ಕೃಷ್ಣನ ಬಗೆಗೆ ಅವರಿಗಿರುವ ಅನನ್ಯ ಭಕ್ತಿ, ಪ್ರೀತಿಗಳ ದ್ಯೋತಕವಾಗಿ, ಭಕ್ತಿಯ ಇನ್ನೊಂದು ಮುಖವೇ ಪ್ರೀತಿ ಎಂಬುದನ್ನು ದೃಢಪಡಿಸುತ್ತದೆ "....ಕಣ್ ತುಂಬು, ಮನತುಂಬು, ಎದೆತುಂಬು। ನಿನ್ನೊಲವಲ್ಲದಿನ್ನಾವುದಕು ಎಡೆಯಿಲ್ಲವೆಂಬ ತೆರ । ಸಾಕ್ಷಾತ್ಕಾರ ಸುಲಭ ಸಾನ್ನಿಧ್ಯವನ್ನು ಬಯಸುವೆವು...." ಎಂದು ಪ್ರಾರ್ಥಿಸುವ ಗೋಪಿಯರು, ಭಕ್ತೆಯರೂ ಹೌದು, ಪ್ರೇಮಿಕೆಯರೂ ಹೌದು. ಇವರ ಬೇಡಿಕೆಗೊಲಿದ ಗೋವಿಂದ "ಬಿರುಬೆಂಕಿಯಿಂದ ಶೀತಲವಾರಿಯುಕ್ಕುವೊಲು ವಿರಹಗಳ । ನಡುವೆಯುದ್ಭವಿಸಿದನು ಮಂಗಳಮೂರ್ತಿ ಗೋಪಾಲ ಹರಿ"....ಎನ್ನುತ್ತಾರೆ ಪು.ತಿ.ನ. ಗೋಪಿಯರ ನಿಟ್ಟುಸಿರುಗಳೆಲ್ಲ ಸೇರಿ, ಅದರ ಬಲದಿಂದಲೇ ಕೃಷ್ಣನ ಮೂರ್ತಿ ರೂಪುಗೊಂಡಿತೋ ಅಥವಾ ಆ ನಿಟ್ಟುಸಿರು, ಆರ್ತತೆ ಬಯಕೆಯ ಪ್ರಗಾಢತೆಗಳು ತಮ್ಮ ಅನಿಸಿಕೆಗಳಿಗೆ ಮೂರ್ತರೂಪ ಕೊಡುವ ಸಾಮರ್ಥ್ಯ ಪಡೆದಿದ್ದವೋ ಎನ್ನುವಂತೆ ಹರಿಯ ಮೂರ್ತಿ ಉದ್ಭವವಾಗುತ್ತದೆ ಆ ವಿರಹಿಗಳ ನಡುವೆ. ಅದ್ಭುತ ಉಪಮೆ. ಆ ಗೋಪಿಯರ ಸೇವೆಯನ್ನು ಪ್ರೀತಿಯನ್ನೂ ಕೈಗೊಂಡ ಹರಿಯು ಅವರನ್ನು ತಕ್ಕೈಸಲು "ಅನ್ಯತೆಯಿನನ್ಯೋನ್ಯತೆಗೆಯದರಿಂದನನ್ಯತೆಗೆ ಸಂಚಲಿಪುದವಂ ಜೀವಂ ದ್ವೈತಾದ್ವೈತ ಸನಿಹದೊಳು...." ಇದು ಪು.ತಿ.ನ. ವಿವರಿಸಿರುವ ಕೃಷ್ಣ ಗೋಪಿಯರ ಸ್ನೇಹ ಸಮಾಗಮದ ಹಂತಗಳು, ಅನ್ಯತೆಯಿಂದ ಅನ್ಯೋನ್ಯತೆಗೆ ಗೋಪಿಯರು ಜೀವದೇಹಭಾವವಳಿದು ಹಸುಳೆಗಳಂತಾಗಿ ಸನಕಾದಿ ಶಿಶುಯೋಗಿಗಳ ಹದ ಮುಟ್ಟುವುದೇ ರಾಸಕ್ರೀಡೆಯ

ಅಂತರಾರ್ಥ ಎನ್ನುವುದನ್ನು ಪು.ತಿ.ನ. ಮನೋಜ್ಞವಾಗಿ, ವಿಸ್ತಾರವಾಗಿ ಚಿತ್ರಿಸಿದ್ದಾರೆ. ಕೃಷ್ಣನು ತಾನು ಗೋಪಿಯರ ಶ್ರೇಯಃ ಕಾಮಿಯೆಂದೂ ತನ್ನ ಊರ್ಜೆಯೇ ಗೋಪಿಯರ ಊರ್ಜೆಯೆಂದೂ, ಗೋಪಿಯರ ಊರ್ಜೆಯೇ ತನ್ನ ಊರ್ಜೆಯೆಂದೂ, ಈ ರಾಸಕ್ರೀಡೆಯು "ಚೇತಶ್ವೇತವೊಂದರೊಳಗೊಂದು, ಪರಿಚಲಿಸುತಾವಿಷ್ಕರಿಸುವಾತ್ಮಾನಂದ ಯೋಗ"ವೆಂದು ತಿಳಿಸಿ ವೇಣುವಾದನಕ್ಕಾರಂಭಿಸುತ್ತಾನೆ (ರಾಸಕ್ರೀಡೆ, ೮೪–೮೮ ಸಾಲುಗಳು).

ಶ್ರೀಹರಿಯ ವೇಣುಗಾನ ನಾದರಸವಾಗಿ ತುಂಬಿ ಹರಿದಾಗ "ಪ್ರಾಣದೊಳು ದಳದಳವರಳಿ" "ಪರಿಮಳಿಸಿತಂತಃಕರಣ । ಜೀವಾತ್ಮ ತಟ್ಟಿತು ತನ್ನ ತವರಿನ ಕದವನಾಕ್ಷಣದಿ । ವಿಶ್ವವ ಮಥಿಸಿ ತದ್ರಸವ ತನ್ನವರಿಗಿತ್ತಿತು ಗಾನ।" ಮೂರ್ತ ಅಮೂರ್ತ ಪ್ರತಿಮೆಗಳು, ಲೌಕಿಕ ಅಲೌಕಿಕಗಳನ್ನು ಬೆಸೆದು ಚಿತ್ರಾವತ್ತಾಗಿಸಿರುವ ಈ ವರ್ಣನೆ ಅದ್ಭುತ ಕಲ್ಪನೆಯನ್ನೊಳಗೊಂಡಿದೆ. ಪ್ರಾಣದಲ್ಲಿ ಹೂ ಅರಳಿ ಅಂತಃಕರಣ ಪರಿಮಳಿಸುವ ಪವಾಡವನ್ನುಂಟು ಮಾಡುವ ಶ್ರೀಹರಿಯ ಗಾನ, ಜೀವಾತ್ಮನನ್ನು ತನ್ನ ತವರಿನ ಕದ ತಟ್ಟುವಂತೆ ಮಾಡುತ್ತದಂತೆ! ಜೀವಿಗಳ ಮನಸ್ಸಿನಲ್ಲಿ ಪರಮಾತ್ಮನ ಹಂಬಲ ಮೂಡುವಂತೆ ಮಾಡಿ, ಅವನ ಮನೆಯ ಕದ ತಟ್ಟಲು ಹೋಗುವ ಜೀವಾತ್ಮನ ತವರು ಮನೆ ಪರಮಾತ್ಮ ಎನ್ನುವ ಕಲ್ಪನೆಯೇ ಚೇತೋಹಾರಿ. ಶ್ರೀಕೃಷ್ಣನ ವೇಣುಗಾನದಂತೆಯೇ ಅವನ ಶ್ರೀರೂಪವೂ ನಯನಮನೋಹರ, ಆ ರೂಪದಲ್ಲಿ "ಮೂರೆಡೆ ಕೊಂಕಿ ಹರಿನಿಂತ ಮೆಲುನಡೆಲಯವಡಗಿದ್ದು", ಕಣ್ಣುಗಳಿಗೆ ಆ ಶ್ರೀಮೂರ್ತಿಯ ಸ್ವರೂಪರಸವೂ ಇಂಬಾಗಿದ್ದು ಬೃಂದಾವನದಲ್ಲಿ ರಸಸ್ರೋತವೇ ಹರಿದಿತ್ತು. ಇಂತಹ ರಸೋತ್ಕಟತೆಯ ಸಮಯವೇ, ರಸಮೂಲವಾದ ತನ್ನ ವೇಣುವನ್ನು ಕೃಷ್ಣ ತ್ಯಾಗಮಾಡಬೇಕಾದ ಸಮಯವೂ ಆಗುವುದು, ಎಲ್ಲರ ಬದುಕಿನಲ್ಲಿಯೂ ಕಂಡುಬರುವ ವ್ಯಂಗ್ಯ ವಿಪರ್ಯಾಸಗಳಿಗೆ ನಿದರ್ಶನ.

# ವೇಣುತ್ಯಾಗ

ಬೃಂದಾವನದ ಕೃಷ್ಣ ಬಲರಾಮರನ್ನು ಮಧುರೆಯ ಅಕ್ರೂರ ಕರೆದುಕೊಂಡು ಹೋಗಲು ಬಂದಾಗ, ಕೃಷ್ಣ ಬಲರಾಮರು ತಮ್ಮ ಜೀವನ ಶೈಲಿಯನ್ನೇ ಬದಲಾಯಿಸಿಕೊಳ್ಳ ಬೇಕಾಗುತ್ತದೆ. ಗ್ರಾಮೀಣ ಸಂಸ್ಕೃತಿಯು, ನಗರ ನಾಗರೀಕತೆ, ಸಂಸ್ಕೃತಿಯೊಡನೆ ಮುಖಾಮುಖಿಯಾಗುತ್ತದೆ. ಕ್ರಮೇಣ ವೇಣುವನ್ನು ಹಿಡಿದ ಕೈಗಳು ಪಾಂಚಜನ್ಯವನ್ನು ಹಿಡಿದು ತೂರ್ಯನಾದ ಮಾಡಬೇಕಾಗುತ್ತದೆ. ವೇಣುತ್ಯಾಗ, ಕೃಷ್ಣನ ಮುಂದಿನ ಸಂಘರ್ಷಮಯ ಜೀವನದ ಸಿದ್ಧತೆಯಾಗುತ್ತದೆ.

'ವೇಣುತ್ಯಾಗ' ಉಲ್ಲಾಸಂನಲ್ಲಿ ಪು.ತಿ.ನ ಕೃಷ್ಣನ ಮಹಿಮೆಯನ್ನು ಹಾಡಿ ಹೊಗಳಿ ತನ್ನ ವೇಣುನಾದದಿಂದ ಗೊಲ್ಲರ ಕುಲವನ್ನು ಪ್ರೇಮಾನಂದದ ಉತ್ಕಟತೆಗೆ ಏರಿಸಿ, ಮರುದಿನವೆ ಮುರಳಿಯನ್ನು ತೊರೆದು ಮಧುರೆಗೆ ಹೊರಡುವ "ನಿನ್ನ ಮಾನಸಗತಿಯನ್ನು ನಮ್ಮಂಥ ಭವಿಗಳಿಗೆ ಊಹಿಸಲು ಸಾಧ್ಯವೆ?" ಎಂದು ಕೇಳುವ ಕವಿಗೆ, ನಡುರಾತ್ರಿ ಎಲ್ಲರೂ ಮಲಗಿರುವ ಸಮಯದಲ್ಲಿ ಕೃಷ್ಣ ಉತ್ತರಿಸುವ ರೀತಿಯಲ್ಲಿ "ವೇಣುತ್ಯಾಗ"ದ ಆರಂಭ ವಿನ್ಯಾಸಗೊಂಡಿದೆ. ಕೃಷ್ಣನೇ ತನ್ನ ಮಾತುಗಳ ಮೂಲಕ ತನ್ನ ಜೀವನದ ಘಟನೆಗಳನ್ನು ನೆನಪಿಸಿ, ಕಥನವನ್ನು ಮುಂದುವರೆಸುವಂತೆ ಆದೇಶಿಸಿದಂತೆ ರೂಪಿಸಿದ್ದಾರೆ, ಹಾಗೂ ಕೃಷ್ಣನು ತಾನು ಅವತಾರ ಪುರುಷನೆಂಬುದನ್ನು ಮರೆಯದಿರುವಂತೆ ಹೇಳಿದುದನ್ನೂ ಪು.ತಿ.ನ. ಹೀಗೆ ಬರೆದಿದ್ದಾರೆ "....ಮನ್ಮನನಾಗೆ ಮರೆಯದಿರು ತಳುಗದಿರು। ಜಡಜೀವ ಜೀವಾತ್ಮರೊಳು ಸಚ್ಚಿದಾನಂದದೂರ್ಜಾ । ಪರಿಚಲನವೆಡರಳಿದು ನಡೆವಂತೆ ನೇರ್ಪಡಿಸೆ ಬಂದೆಂ।ಮಾನವದೇಹಿ ಆದಿಮೂಲ ಬ್ರಹ್ಮರಸಚಾಲಿತಂ...."

ನಿದ್ದೆ ಕಳೆದು ಎದ್ದು ಬೆಳಗಾದಾಗ ಕವಿಗೆ "ಈ ಬೆಳಕೆಲ್ಲಿ ಆ ಬೆಳಕೆಲ್ಲಿ!" ಎನಿಸುತ್ತದೆ. ರಾಸಕ್ರೀಡೆ ನಡೆಯುತ್ತಿರುವಾಗಲೇ ಅಕ್ರೂರ ಬಂದು ಕುಳಿತಿರುತ್ತಾನೆ. ಕೃಷ್ಣ ಬಲರಾಮರು ಮಧುರೆಯಲ್ಲಿ ನಡೆಯುವ ಉತ್ಸವಕ್ಕೆ ಬರಬೇಕೆಂದು ಕಂಸನ ಆದೇಶ, ಆಹ್ವಾನ. ಬಲರಾಮನಿಗೆ ಮಧುರೆಗೆ ಹೋಗಲು ಉತ್ಸಾಹ. ಆದರೆ ಕೃಷ್ಣನಿಗೆ ಬೃಂದಾವನವನ್ನು

ಬಿಟ್ಟು ಹೊರಡುವ ಇಚ್ಛೆಯೆ ಇಲ್ಲ. "ಮಿಣಿ, ಕವಣಿ, ಕುಡುಗೋಲುಗಳನಾಡುವ" ಹಳ್ಳಿಗರಿಗೆ ರಾಜರ ಸಹವಾಸವೇಕೆ ಎನ್ನುವುದು ಕೃಷ್ಣನ ಪ್ರಶ್ನೆ, ಜೊತೆಗೆ, "ಹಸುಳೆಗುಲಿ" ಕಂಸನೊಡನೆ ನಮಗೇನು ಕೆಲಸ? ಎಳೆಮಕ್ಕಳಿಗೇ ಅಂಜುವ ಕಂಸ ಎಂತಹ ದೊರೆ? ಅಲ್ಲದೆ ಕ್ರೂರನೂ ದುಷ್ಕೀರ್ತಿಯವನೂ ಆಗಿರುವ ಈ ಕಂಸನ ಆಹ್ವಾನ ಶಂಕಾಸ್ಪದ. ನಮ್ಮನ್ನು ಆಕ್ರಮಿಸಲು ಬಂದ ಕೇಡನ್ನು ಜಯಿಸುವುದು ಧೀರರಿಗೆ ಒಳ್ಳೆಯದು. ಅದರೆ ಕೇಡನ್ನು ಅರಸಿಕೊಂಡು ಹೋಗುವುದು ಬುದ್ಧಿವಂತಿಕೆಯಲ್ಲ ಎನ್ನುವುದು ಕೃಷ್ಣನ ಅಭಿಮತ. ಕೃಷ್ಣನ ಈ ಮಾತುಗಳು ಅವನಲ್ಲಿ ಈಗಾಗಲೇ ಜಾಗ್ರತವಾಗಿರುವ ರಾಜಕೀಯ ಪ್ರಜ್ಞೆಯನ್ನು, ಒಳಿತು ಕೆಡಕುಗಳ ಸೂಕ್ಷ್ಮ ಚಿತ್ರಣವನ್ನೂ ನೀಡುತ್ತದೆ. ಬೃಂದಾವನಕ್ಕೆ ಬಂದ ಅಕ್ರೂರ ಮಧುರೆಯ ನಗರ ಸೌಂದರ್ಯವನ್ನು ಅಲ್ಲಿನ ಸುಖ ಸಮೃದ್ಧಿಯನ್ನು ವಿವರಿಸುವಲ್ಲಿ, ಗ್ರಾಮ ನಾಗರೀಕತೆ, ನಗರನಾಗರೀಕತೆಗಳ ತುಲನೆಯಾಗುತ್ತವೆ. ಕೃಷ್ಣ ಬಲರಾಮರು ಮಧುರೆಗೆ ಬಂದಾಗ ಈ ಎರಡೂ ಸಂಸ್ಕೃತಿಗಳು ಮುಖಾಮುಖಿ ಯಾಗುತ್ತವೆ. ಗೋಕುಲ ಬೃಂದಾವನದ ಗ್ರಾಮಸ್ಥರಿಗೆ ನಗರದವರೆಂದು ಇದುವರೆಗೂ ಪರಿಚಯವಾಗಿರುವವರು, ಶಿಶು ಕೃಷ್ಣನನ್ನು ಕೊಲ್ಲಲು ಬಂದ ರಾಕ್ಷಸ ಸಮೂಹ ಮಾತ್ರ. ಆ ಸಂಸ್ಕೃತಿ ಶಿಶುಹತ್ಯಾಸಂಸ್ಕೃತಿ.

ಅಕ್ರೂರ ನಗರದವನಾದರೂ ಕೃಷ್ಣನ ನಿಜಸತ್ಯವನ್ನು ಸರಿಯಾಗಿಯೇ ಗ್ರಹಿಸುತ್ತಾನೆ. ಅವನ ಪಾಲಿಗೆ ಕೃಷ್ಣ "ಹಳ್ಳಿಗನೆ, ಅಲ್ಲಲ್ಲ, ಹೊಳಲವನಲ್ಲ ಇಳೆಯವನಲ್ಲ| ಬಾನವನಿವಂ ವಿಶ್ವವಿಕ್ರಮಿಯಾಗ ತಕ್ಕವನೀತ । ಮೋಡದೊಳು ಮಿಂಚಂತೆ ಮೈಯೊಳಗಾಡುತಿದೆ ಜೀವಕಳೆ|" ಎಂದು ಭಾವಿಸುತ್ತಾನೆ. ವೀರರ ಪರಿಸೆಯಾದ ಧನುರ್ಯಾಗಕ್ಕೆ ಬಲರಾಮ ಕೃಷ್ಣರನ್ನು ಆಹ್ವಾನಿಸಿ ನಗರ ಸೌಂದರ್ಯ ನೋಡಲರ್ಹವಾದದ್ದೆಂದು ಹೇಳಿ ಅವರ ಮನ ಒಲಿಸುತ್ತಾನೆ. "ನೈಸರ್ಗ ಸೃಷ್ಟಿಯಿಂ ಸೊಗಗಳ । ಬಿಡಿಬಿಡಿಸಿ ಎತ್ತೆತ್ತಿ ಮನುಜಮನ ಮಾನವಗೆ ನೀಡುವ । ಕೌಶಲವ ಕಾಂಬಿರಿ ಅಲ್ಲಿ, ಹಳುವಿನಿದು ಹಳ್ಳಿಯಿನಿದೈ । ಇನಿದಕು ಇನಿದು ಪೌರರ ಬದುಕು..." "ಪರ್ವದಲಿ ಬೀರವ ಮೆರಸಲನುವುಂಟು", ಎಂದು ಹೇಳಿದರೂ ಕೃಷ್ಣ ಸುಲಭವಾಗಿ ಒಪ್ಪುವುದಿಲ್ಲ, "ನಾಂ ಗೊಲ್ಲ, ನನಗೇಕೆ ಹೊಳಲಿಗರಾಟ?| ಬಿಲ್ಲರಿಯೆ ಬಾಣವನರಿಯೆ, ಮಲ್ಲರ ಸೆಣಸೆ ಪಟ್ಟುಗಳ ನಾನರಿಯೆ ರಾಜಾಸ್ಥಾನ ಮರ್ಯಾದೆಗಳನೇಂಬಲ್ಲೆ? । ಆಟವೆಂತಹುದೋ ಕೂಟವೆಂತಹುದೊ ಮಂದಿಯೆಂಥವರೊ..." ಎಂದು ಮೀನಮೇಷ ಎಣಿಸುವ ಕೃಷ್ಣನನ್ನು ಕಂಡು ಬಲರಾಮ ".......ನಿನಗಿನಿದೆ ಹೆಂಗಳಗೊಂತು ಕೊಳಲಿನ ಗೂಟ ಕೊಟ್ಟಿಗೆಯ । ಕಾರಾವಾಸ, ಪುರುಷಷರ್ಭನೆ? ಮೋಹಕೂ ಮಿತಿಯುಂಟು । ತೆಗೆತೆಗೆ ಒಗೆಯಿದನು ಮದ್ದಾನೆ ಸರಪಣಿಯನೆಂತಂತೆ ಈ ಕೊಳಲ..." ಎಂದು ಕೃಷ್ಣನ ಸೊಂಟದಲ್ಲಿದ್ದ ಕೊಳಲನ್ನು ಸೆಳೆದು ಬಿಸಾಡುತ್ತಾನೆ. ಬಲರಾಮನ ಈ ಕೃತ್ಯ ಅಕ್ರೂರನನ್ನು ಒಳಗೊಂಡು, ಗೋಪಿಯರಿಗೆ ಮತ್ತು ಬೃಂದಾವನದ ಮಂದಿಗೆ ಕೋಪ ಸಂಕಟವನ್ನುಂಟು ಮಾಡುತ್ತದೆ.

“ಹರಿ ಪರಿತ್ಯಕ್ತ, ಅಮೃತ ಚೆಲ್ಲಿದ ಬರಿಕಳಸ, ಒಣಬಿದಿರಿನ ನಳಿಗೆ”ಯಾಗುತ್ತದೆ ಈಗ ಆ ಕೊಳಲು. ಬಲರಾಮ ತನ್ನ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟು, ಕೊಳಲನ್ನು ಮತ್ತೆ ಪರಿಗ್ರಹಿಸುವಂತೆ ಕೃಷ್ಣನನ್ನು ಒತ್ತಾಯಿಸಿದರೂ, ಕೃಷ್ಣ ನಿರಾಕರಿಸುತ್ತಾನೆ. ತನ್ನ ಬೃಂದಾವನ ಗೋಕುಲಗಳ ಬದುಕನ್ನು ಮನದೊಳಗೆ ಸಂಸ್ಮರಿಸುತ್ತ “...ನಾನೀದ್ವಯವ ಮೀರುವುದೆ ದೈವೇಚ್ಛೆಯೋ, ನನಗದರ ಸಂಸ್ಮರಣಿಕೆಯೊ ಕಂಸಾಹ್ವಾನ, ವೇಣುಪತನಂ? ದೈವಾನುವರ್ತಿನಾಂ” ಎಂದು ಮನಸ್ಸಿನಲ್ಲಿ ಆಲೋಚಿಸುತ್ತಾ “ಅಣ್ಣಾ ಪುರದೊಳಗೇಕೆ ಈ ಕೊಳಲು....ಹೊರಡುವೆನು ನಿನ್ನೊಡನೆ...” ಎಂದು ಕೊಳಲನ್ನು ಗೋಪಿಯರಿಗಿತ್ತು ಮನೆಗೆ ಹಿಂದಿರುಗುತ್ತಾನೆ. ಬಲರಾಮನು ಕೊಳಲನ್ನು ಕಿತ್ತೆಸೆದರೂ, ಒಂದಿನಿತೂ ಕೋಪಗೊಳ್ಳದ ಕೃಷ್ಣನ ಶಾಂತಿ ಸಮಾಧಾನಗಳು, ಹದಿಹರೆಯದಲ್ಲಿಯೇ ಅವನು ಸಾಧಿಸಿದ್ದ ಸಂಯಮದ ನಡವಳಿಕೆಗೆ ನಿದರ್ಶನವಾಗುತ್ತದೆ.

ಈ ಸಂದರ್ಭದಲ್ಲಿ ಎಲ್ಲಿಯೋ ಕುಳಿತು ಕೃಷ್ಣನ ಬಗೆಗೆ ಚಿಂತಿಸುತ್ತಿರುವ ರಾಧೆಯ ಬಳಿಗೆ ಬಂದ ಸಖಿಯರು ಕೃಷ್ಣ ಮಧುರೆಗೆ ಹೋಗುವ ಸುದ್ದಿ ತಿಳಿಸಿದಾಗ ರಾಧೆ ತಲ್ಲಣಿಸುತ್ತಾಳೆ. ಹರಿಯನ್ನು ನೆನೆನೆನೆದು ಮೂರ್ಛೆ ಹೋದ ರಾಧೆಯನ್ನು ಉಪಚರಿಸಿ ಸಂತೈಸುತ್ತಾರೆ. ನೊಂದ ಗೋಪಿಯರು ದುಃಖದಿಂದ ಮನೆ ಸೇರುತ್ತಾರೆ.

ಮೂವತ್ತೊಂದನೆಯ 'ಉಲ್ಲಾಸಂ' 'ಗೋಕುಲ ಪ್ರಸ್ಥಾನಂ' ಹಲವು ದೃಷ್ಟಿಯಿಂದ ಮಹತ್ವ ಪೂರ್ಣವಾಗಿದೆ. ಮೊದಲನೆಯದಾಗಿ, ದೃಶ್ಯಕಾವ್ಯ ಅಥವಾ ಚಿತ್ರಶಿಲ್ಪದಂತೆ ಘಟನೆಗಳನ್ನು ಕಣ್ಣೆದುರು ಕಟ್ಟಿಕೊಡುವ ಕಲೆಗಾರಿಕೆ ಹಾಗೂ ಕಾವ್ಯಮಯತೆ. ಉದಾಹರಣೆಗೆ, ಕೃಷ್ಣ ಬಲರಾಮರು ಅಕ್ರೂರನೊಡನೆ ಹೊರಡುವ ದಿನದ ಘಟನೆಗಳು. ಕೃಷ್ಣ ಬಲರಾಮನನ್ನು ಬೃಂದಾವನದ ಜನರು ಆರತಿ, ಅಕ್ಷತೆಗಳೊಡನೆ ಬೀಳ್ಕೊಳ್ಳುವ ರೀತಿ, ಸಾರಥಿಗೆ ಬೆನ್ನು ಮಾಡಿ ಕುಳಿತ ಮಾಧವ ತನ್ನ ನವನಿರ್ಮಿತಿಯ ಗೋಕುಲವ ನೋಡುತ್ತ ಕೂಡುವುದು, ರಾಧೆ ಓಡುತ್ತ ಬಂದು ಹವಳದ ಹಾರವನ್ನು ಕೊರಳಿನಿಂದ ತೆಗೆದು ರಥದಲ್ಲಿ ಕುಳಿತಿರುವ ಕೃಷ್ಣನತ್ತ ಎಸೆಯುವುದು, ಕೃಷ್ಣ ತನ್ನ ಮುತ್ತಿನೇಕಾವಳಿಯನ್ನು ರಾಧೆಯತ್ತ ಎಸೆಯುವುದು ಇಂತಹ ಚಿತ್ರ ಶಿಲ್ಪದಂತಹ, ದೃಶ್ಯಗಳು ಹಲವಾರು ಈ ‘ಉಲ್ಲಾಸಂ’ನಲ್ಲಿ ಕಂಡು ಬರುತ್ತದೆ. ಹಾಗೆ ನೋಡಿದರೆ ಇಡಿಯ ‘ಶ್ರೀಹರಿಚರಿತೆ’ ಯೇ ಒಂದು ಶಬ್ದಚಿತ್ರದಂತಿದೆಯೆನ್ನಬಹುದು.

ಎರಡನೆಯದಾಗಿ, ಬೃಂದಾವನದ ಮುಗ್ಧ ಗ್ರಾಮಸ್ಥರ ದೃಷ್ಟಿಯಲ್ಲಿ ನಗರಗಳ ಬಗೆಗೆ ನಗರದ ಜನರ ಬಗೆಗೆ ಇರುವ ಭಯ, ಆತಂಕಗಳು ಹಲವು ವ್ಯಕ್ತಿಗಳ ಮೂಲಕ ಇಲ್ಲಿ ಅಭಿವ್ಯಕ್ತಗೊಂಡಿದೆ. ಕೃಷ್ಣ ಬಲರಾಮರು, ಬೃಂದಾವನವನ್ನು ಬಿಟ್ಟು ಎಂದೂ ಬೇರೆ ಊರುಗಳಿಗೆ ಹೋಗಿರದಿದ್ದವರು, ತಮ್ಮವರಿಂದ ಎಂದೂ ದೂರ ಹೋಗಿರದಿದ್ದವರು, ತಮ್ಮ ನಾಯಕತ್ವದಲ್ಲಿ ನವನಿರ್ಮಾಣಗೊಂಡಿದ್ದ ಬೃಂದಾವನವನ್ನು

ಬಿಟ್ಟು ಹೋಗುವಾಗ ಅವರು ತೋರುವ ಮಮತೆ, ಮಧುರೆಯ ಕರೆಯನ್ನು ಮನ್ನಿಸಿ ಅಲ್ಲಿಗೆ ಹೊರಡುವ ಅವರ ಮನೋಸ್ಥೈರ್ಯದ ಬಗೆಗೆ ಆಶ್ಚರ್ಯ ಮೆಚ್ಚುಗೆಗಳು ಮೂಡುತ್ತವೆ. ಕೃಷ್ಣ, ರಾಧೆಯ ಬಗೆಗೆ ಅಪರಿಮಿತ ಪ್ರೀತಿಯುಳ್ಳವನು, ಬೃಂದಾವನ, ಗೋಪಿಯರು, ಎಲ್ಲಕ್ಕಿಂತಲೂ ಮಿಗಿಲಾಗಿ ಆ ಯಶೋದಾ ತಾಯಿಯ ಪ್ರೇಮ ವಾತ್ಸಲ್ಯಗಳನ್ನು ತೊರೆದು ಹೊರಡುತ್ತಾನೆ. ಈ ಬಿಡುವ ಕ್ರಿಯೆ ಮುಂದೆ ಅವನ ಬಾಳಿನಲ್ಲಿ ಜರುಗುವ ಅನಂತ ಘಟನೆಗಳ ಮೊದಲ ಹೆಜ್ಜೆಯಾಗುತ್ತದೆ ಹಾಗೂ ಮುಂದೆ ಗೀತಾಚಾರ್ಯನಾಗಿ ಅವನು ಬೋಧಿಸುವ ನಿರ್ಲಿಪ್ತಿಯ ಸಾಧನೆಗೆ ಮೊದಲ ಮೆಟ್ಟಿಲಾಗುತ್ತದೆ ಈ ಗೋಕುಲ ಪ್ರಸ್ಥಾನ. ಈ 'ಉಲ್ಲಾಸಂ'ನ ಆರಂಭದಲ್ಲಿ ಕವಿ, ತಮ್ಮ ಆರಾಧ್ಯದೈವ ಕೃಷ್ಣನನ್ನೇ ಪ್ರಶ್ನಿಸುತ್ತಾರೆ: "ಓ ಕೃಷ್ಣ ಮಧುರಾಪುರಕ್ಕೆ ಹೊರಟಿಹೆಯಾ? ಹಿಂದಿರುಗೆಯಾ । ಗೋಕುಲಕೆ ಹಳ್ಳಿಗರ ಕಳೆಗೊಳಿಸುವೆಸಕಂ ಮುಗಿದುದೆ?। ನೀ ತೊರೆಯೆ ಕೊರೆ ಕಾರ್ಪಣ್ಯದಾಕ್ರಮಣವೆದುರಿಪರಾರು?।" ಗೋಕುಲವನ್ನು ಬಿಟ್ಟು ಹೊರಟ ಕೃಷ್ಣ ಮತ್ತೆ ಅಲ್ಲಿಗೆ ಹಿಂದಿರುಗುವುದಿಲ್ಲವೆಂಬ ಭಯ ಆಶಂಕೆಗಳು ಕವಿಯ ಮನಸ್ಸಿನಲ್ಲಿರುವಂತೆಯೇ, ಯಶೋದೆ ಮತ್ತು ಉಳಿದ ಎಲ್ಲ ಗೋಪಗೋಪಿಯರಲ್ಲಿಯೂ, ಅವ್ಯಕ್ತವಾಗಿ ನೆಲೆಸಿರುತ್ತವೆ. ಗೋಕುಲದಂತಹ ಗ್ರಾಮದಲ್ಲಿ ಹಳ್ಳಿಗರನ್ನು ಕಳೆಗೊಳಿಸುವ ಕಾರ್ಯಮಾತ್ರವೇ ಕೃಷ್ಣನಿಗಿರುವುದು, ಜೊತೆಗೆ ಕೃಷ್ಣನಿರುವ ಸ್ಥಳದಲ್ಲಿ ಕಷ್ಟ ಕಾರ್ಪಣ್ಯ, ಕೊರತೆಯಿಲ್ಲ, ಗೋಕುಲದ ಮನೆಮನೆಯಲ್ಲಿಯೂ ಹಾಲ್ಕೋಡಿ ಹರಿಸಿದವನು ಅವನು; "ಕರೆಯುವ ಮುನ್ನ ಕರುಗಳ ಬಿಟ್ಟು । ಅವುಗಳ ಜೊತೆಗೆ ಚೀಪುವನು ಅವುಗಳು ಬಿಟ್ಟ ಮೊಲೆದೊಟ್ಟ। ತಾನುಂ ಕರು ತಣಿದು, ತಾ ತಣಿದು ಕರೆಹಕೂ ಕೊರೆಯಿನಿತು । ಮಾಗದೊಳು ಗೊಟ್ಟಿಯೇ ನೆನೆಯುವೊಲು ಕರೆಹರಿಸುರಿವುದೌ"। ಅಂತಹ ಸಮೃದ್ಧಿಯ ಸ್ಪರ್ಶ ಕೃಷ್ಣನ ಕರಗಳಿಗೆ, ತುಟಿಗಳಿಗೆ. ಹೀಗೆ ಗ್ರಾಮ ಜೀವನದಲ್ಲಿ ಒಂದಾಗಿ ಹೋಗಿ, ಗೋವುಗಳ ಪರಿಚಾರಿಕೆ, ಮುರಳೀವಾದನಗಳಲ್ಲಿ ನಿರತನಾಗಿದ್ದ ಕೃಷ್ಣ ಹೊರಟಿರುವು ದಾದರೂ ಎಲ್ಲಿಗೆ? ಏತಕ್ಕೆ? ಕವಿವಾಣಿ ಕೇಳುತ್ತದೆ; "ಕಾಮ ಕ್ರೋಧ ಲೋಭಂಗಳೆಂಬ ನರಕದ್ವಾರಗಳ । ತೆರೆಯುತುಜ್ಜೃಂಭಿಸುವಮಾಪಟ್ಟಣಗಳಟ್ಟಹಾಸಂ । ಕೆಣಕಿತೆ ನಿನ್ನ ಹರಿ? ಆ ಕದಗಳನು ಮುಚ್ಚಲು ಬಯಸಿ । ಪಯಣಿಪೆಯ? ಸಿಗುವುದೆ ಪಂಚಾಯುಧಕೆ ನಗರದ ಕೇಡು?। ಅರಿತಗ್ಗಿ ತ್ರೈಮೌಲ್ಯಕಡೆಗೊಡುವವರೆಗು ಮಾನವಚಿತ್ತ । ಉಜ್ಜುಗಿಪೆಯಾ ಕೊನೆಗೆ ತ್ರಿಪುರಾಂತಕಗೆ ವಹಿಸುವ ತನಕ?।"

ಬೃಂದಾವನದ ಸ್ವಾಸ್ಥ್ಯಪೂರ್ಣ ಪರಿಸರದಲ್ಲಿ ದೇಹಬಲ, ಮನೋಬಲ ಸಾತ್ವಿಕ ಧೈರ್ಯ ಸಾಹಸಗಳನ್ನು ಮೈಗೂಡಿಸಿಕೊಂಡಿರುವ ಕೃಷ್ಣ ಈಗ ಕಾಮ ಕ್ರೋಧ ಲೋಭಗಳು ವಿಜೃಂಭಿಸುತ್ತಿರುವ ಪಟ್ಟಣಗಳೆಂಬ ನರಕದ್ವಾರಗಳತ್ತ ಹೊರಡಬೇಕಾಗಿದೆ. ನಗರಗಳಲ್ಲಿ ಮನೆಮಾಡಿರುವ ಕೇಡು, ಈ ಸಾತ್ವಿಕ ಶಕ್ತಿಗೆ ಮಣಿಯುವುದೆ ಎಂಬ

ಅತಂಕ ಕವಿಯನ್ನು ಕಾಡುತ್ತದೆ. ಅರಿಷಡ್ವರ್ಗಗಳನ್ನು ದೂರಮಾಡಿ, ಈ ಮಾನವಚಿತ್ತ ಸತ್–ಚಿತ್–ಆನಂದವೆಂಬ ತ್ರೈಮೌಲ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವ ತನಕ, ಈ ರಸಚೇತನ ಪರಮಾತ್ಮನ ಪ್ರಯತ್ನ ಸಾಗುವುದೆ? ಅಥವಾ ಎಲ್ಲವನ್ನೂ ಕಡೆಗೆ ಲಯಕಾರಿ ತ್ರಿಪುರಾಂತಕನಿಗೆ ವಹಿಸಿ, ಹೊಸಸೃಷ್ಟಿಗೆ ಎಡೆಮಾಡುವನೇ? ಆಶಂಕೆ, ಚಿಂತೆಯಿಂದ ವ್ಯಸ್ತವಾದ ಕವಿ ಮನಸ್ಸು, ಆ ಗೋಕುಲಾನಂದನಿಗೆ ಶುಭ ಹಾರೈಸುತ್ತದೆ.

ಕವಿಯ ಮನಸ್ಸಿನ ಈ ಶಂಕೆ ಚಿಂತೆಗಳು, ಬೃಂದಾವನದ ಎಲ್ಲರ ಮನಸ್ಸನ್ನೂ ಕಾಡುತ್ತವೆ. ಯಶೋದೆಗೆ ಕೃಷ್ಣನನ್ನು ಒಂದೇ ಒಂದು ದಿನವೂ ಬಿಟ್ಟಿರುವ ಅನುಭವವೇ ಇಲ್ಲ. ಆದರೂ "ಇದೆ ಕೊನೆ ನೋಟವೆಂದರಿಯಳಾಮುಗುದೆ", ತನ್ನೆತ್ತರಕ್ಕೂ ಬೆಳೆದು ನಿಂತಿರುವ ಮಗನನ್ನು ಅವನ ಗಲ್ಲ ಹಿಡಿದೆತ್ತಿ ನೋಡುತ್ತಾ ತನ್ನ ಭಯ ಶಂಕೆಗಳಿಗೆ ರೂಪ ಕೊಡುತ್ತಾಳೆ "...ನಗರವೆನೆ ಭಯವೆನಗೆ, ಕಳವಳವೆನಗೆ। ಕಂಸನೆನೆ, ಪಟ್ಟಣಿಗರೇಗೈವರೋ ಹಳ್ಳಿಯ ಜನಕೆ।ಬಲ್ಲವರಾರು...." ಇಷ್ಟು ಹೇಳುವುದಲ್ಲದೇ ತನ್ನ ಮಗನಿಗೂ ಬುದ್ಧಿವಾದ ಹೇಳುತ್ತಾಳೆ. "ಬೆಚ್ಚರಗೆಡದೆ ಕ್ಷೇಮದೊಳು ಬೇಗನೆ ಮರಳಿ ಬಾರೈ .... ಕೆಣಕದಿರು ಸುಮ್ಮನೆ ಯಾರನೂ..." ಗ್ರಾಮೀಣ ಪರಿಸರದ ಮುಗ್ಧ ಮಾತೆಯೊಬ್ಬಳು ತನ್ನ ಮಗನ ಬಗೆಗೆ ತಾಳುವ ಭಯ ಆತಂಕಗಳು ಯಶೋದೆಯ ಮಾತುಗಳಲ್ಲಿ ಅಭಿವ್ಯಕ್ತಗೊಂಡಿವೆ. ಇದಲ್ಲದೆ ಬಲರಾಮನನ್ನೂ ಆಶೀರ್ವದಿಸಿ, ತಮ್ಮನನ್ನು ಎಚ್ಚರದಿಂದ ನೋಡಿಕೊಳ್ಳುವಂತೆ ಹೇಳುತ್ತಾ ನಗರದ ಭಯವನ್ನು ಪುನರುಚ್ಚರಿಸುತ್ತಾಳೆ: "....ನಗರದಿ ಕೇಡು ಬಹಳುಂಟು ಇವನೋ ತುಂಟ। ಒಂಟಿಯೊಳು ಬಿಡದಿರೈ, ಪರವೂರವಗೆ; ನಿನಗಲ್ಲಿಹಳು ನಿನ್ನವ್ವೆ..." ಎಂದು ಬಲರಾಮನು ದೇವಕಿ–ವಸುದೇವನ ಮಗನೆಂಬುದನ್ನು ನೆನಪಿಸುತ್ತಾಳೆ ಮತ್ತು ಬಲರಾಮನ ತಾಯಿಯನ್ನು ವಸುದೇವ ಕರೆಸಿಕೊಂಡಾಗಿನಿಂದ ಅವಳ ವಿವರ ತಮಗೆ ತಿಳಿದಿಲ್ಲವೆಂದೂ ತಿಳಿಸುತ್ತಾಳೆ. ತಾಯಿ ಹೃದಯದ ವೈಯಕ್ತಿಕ ಭಯ ಶಂಕೆಗಳು, ಸ್ವಲ್ಪ ಕಾಲದಲ್ಲಿಯೇ ಸಾಮೂಹಿಕ ಭಯ ಆತಂಕಗಳಾಗಿ, ಗೋಕುಲದ ಜನಸಮೂಹದ ಮಾತುಗಳಲ್ಲಿ ಪ್ರತಿಧ್ವನಿಸುತ್ತವೆ: "...ಗೋಕುಲದ ಪುಣ್ಯಂ ಯಶೋದೆಯ । ಭಾಗ್ಯಂ ಮಧುರೆಗೆ ಹೊರಟಿಹರು, ಕಂಸದೊರೆ ಏಗೆಯ್ಯನೋ । ನಾವು ಪೂಜಿಸಿದೆಲ್ಲದೇವರ ರಕ್ಷೆ ಹುದುಳದಿ ಬೇಗ । ಹಿಂದಿರುಗಲೌ" ಎಂದು ಪ್ರಾರ್ಥಿಸುತ್ತಾರೆ ಗೋಕುಲದ ಮಂದಿ. ಗೋಪಿಯರ ಆತಂಕ, ಮುಗ್ಧ ಹೃದಯದ ಹೆಣ್ಣುಗಳಿಗೆ ಸಹಜವಾದದ್ದು. ತಾವು ಒಲಿದ ಗೋಪಾಲನಿಗೆ ಮಧುರೆಯಲ್ಲಿ ಯಾವ ಅಪಾಯ ಕಾದಿದೆಯೋ ಎಂಬ ಭಯ ಜೊತೆಗೆ ನಗರದ ನಾಗರೀಕ ಹೆಣ್ಣುಗಳು, ಹರಿಯನ್ನು ವಶಮಾಡಿಕೊಳ್ಳದೇ ಇರುವರೇ ಎಂಬ ಕಳವಳ, ಅಸೂಯಾಭಾವ, ಪ್ರೀತಿ ತುಂಬಿದ ಆತಂಕ ಒಕ್ಕೊರಲಿನಲ್ಲಿ ಹೇಳುತ್ತಾರೆ ಗೋಪಿಕಾ ಸ್ತ್ರೀಯರು! "ಹೋಗದಿರು ಗೋಪಾಲ ಹೋಗದಿರು ನುಂಗುವುದು ನಿನ್ನನ್ನು। ಮಥುರೆ,

ಮನಮೋಹನನೆ ಹೋಗದಿರು... ಹೊಗುವೊಡೆ ನಗರದ ಹೆಂಗಳಾ ಬಿನ್ನಾಣಗಿತ್ತಿಯರು ಬಿಡುವರೆ ನಿನ್ನ ಹರಿ?।" ಹೀಗೆ ಬೃಂದಾವನದ ಜನಸಮೂಹದಲ್ಲಿ ಕೃಷ್ಣ ಮಥುರೆಗೆ ಹೋಗುವ ಬಗೆಗೆ ಭಯ, ಆತಂಕಗಳು ವೈಯಕ್ತಿಕ ಸ್ತರದಿಂದ ಸಾಮೂಹಿಕ ಸ್ತರಕ್ಕೇರುತ್ತವೆ. ಆದರೂ ಕೃಷ್ಣವಿರಹ ಗೋವ್ರಜಕ್ಕೆ ಅನಿವಾರ್ಯ. ಎಲ್ಲರ ಹರಕೆ, ಆಶೀರ್ವಾದಗಳನ್ನು ಪಡೆದು ರಥವೇರಿದ ಕೃಷ್ಣ ರಾಧಾದರ್ಶನಕ್ಕಾಗಿ ವಿಚಲಿತನಾಗುತ್ತಾನೆ.

ಬೃಂದಾವನದ ಜೀವಜೀವಾಳವಾಗಿದ್ದ ಕೃಷ್ಣ, ರಥದೊಳಗೆ, ಸಾರಥಿಗೆ ಬೆನ್ನು ಮಾಡಿ ಕುಳಿತನಂತೆ। "ಸಾರಥಿಗೆ ಬೆನ್ನನು ಮಾಡಿಕುಳಿತನು ಮಾಧವ ತನ್ನ। ನವನಿರ್ಮಿತಿಯ ಗೋಕುಲವ ನೆರೆನೋಡಿ ತನ್ನೆದೆಯೊಳಗೆ। ನೆಡುವಂತೆ, ಹಿಮ್ಮೊಗನಾದ ರಾಮನಿಗೂ ಒದ್ದೆಯಾದವು ನಯನಗಳು....।" ಇದು ಪು.ತಿ.ನ. ಅವರು ಶಬ್ದದ ಮೋಡಿಯಲ್ಲಿ ಸೆರೆ ಹಿಡಿದಿಟ್ಟಿರುವ ದೃಶ್ಯಕಾವ್ಯ. ರಥ ಮುಂದೆ ಸಾಗುತ್ತಿರುವಾಗ ಹಳ್ಳಿಯ ತೋಪಿನಲ್ಲಿ ಕೇಳಿ ಬಂದ ರಾಧೆಯ ಆರ್ತನಾದದಿಂದ ಕಳವಳಿಸಿದ ಕೃಷ್ಣ 'ರಾಧೇ' ಎಂದು ಚೀರಿ ರಥದಿಂದ ಧುಮುಕಲೆತ್ನಿಸಿದಾಗ, ಬಲರಾಮ ಅವನನ್ನು ತಡೆಯುತ್ತಾನೆ. ಓಡಿಬಂದ ರಾಧೆ ತನ್ನ ಹವಳದ ಹಾರವನ್ನು ಸ್ಮರಣಿಕೆಯಾಗಿ ಹರಿಯ ವಕ್ಷಕ್ಕೆ ಎಸೆಯುತ್ತಾಳೆ. ಕೃಷ್ಣ ತನ್ನ ಮುತ್ತಿನ ಏಕಾವಳಿಯನ್ನೂ, ವನಮಾಲೆಯನ್ನೂ ರಾಧೆಯತ್ತ ಎಸೆಯುತ್ತಾನೆ. ಪು.ತಿ.ನ. ಅವರ ಕಲ್ಪನೆ, ಬೃಂದಾವನದ ಚಿರಪ್ರೇಮಿಗಳಾದ ರಾಧಾಕೃಷ್ಣರನ್ನು ಈ ರೀತಿ ಬೇರ್ಪಡಿಸುತ್ತದೆ. ಬೃಂದಾವನದಲ್ಲಿ ಇನ್ನು ರಾಧೆ ಚಿರವಿರಹಿ, ವೇಣು ಬರಿ ನಳಿಗೆ, ಯಮುನೆ, ಭಾಂಡೀರ, ಹೊನಲಕರೆ, ನುಣ್ಮರಳು, ರಾಸಲೀಲೆಯ ಕುಣಿತ ಎಲ್ಲವು ಬರಿಯ ಮಧುರ ನೆನಪಾಗುಳಿದು ಮತ್ತೆ "ಕವಿದುದು ರೂಢಿ ಆ ಬಾಳುವೆಯ."

ಕೃಷ್ಣ ಬಲರಾಮರು ಗೋಕುಲಕ್ಕೆ ಹೊರಟ ನಂತರ, ಪು.ತಿ.ನ. ಅವರ ಕವಿ ಹೃದಯ ಯಶೋದಾ ತಾಯಿಯ ಬಗೆಗೆ ಚಿಂತಿಸುತ್ತದೆ. ತನ್ನ ಕಂದಗೋವಿಂದ ಇನ್ನು ಗೋಕುಲಕ್ಕೆ ಹಿಂದಿರುಗುವುದಿಲ್ಲ, ಅವನು ತಾನು ಹಡೆದವನಲ್ಲ, ಮಥುರೆಯ ದೇವಕಿ ಅವನನ್ನು ಹಡೆದ ತಾಯಿ ಎಂಬ ಸತ್ಯವನ್ನರಿತಾಗ ಆ ಮುಗ್ಧ ಹೃದಯಕ್ಕಾದ ವೇದನೆಯೆಷ್ಟು? ತಾನು ನಿಜವಾಗಿಯೂ ಹಡೆದಿದ್ದ ಕೂಸೇನಾಯಿತು ಎಂದು ತಳಮಳಿಸಿದಳೇ? ವಸುದೇವ ವಂಚಿಸಿದನೆಂದು ನಂದಗೋಪನೇನಾದರೂ ನೊಂದನೆ? ಎಂದು ಪ್ರಶ್ನಿಸುವ ಪು.ತಿ.ನ. ಹಳ್ಳಿಗರ ಬಾಳಿನಲ್ಲಿ ನಂಬಿಕೆಗಿರುವ ಸ್ಥಾನವನ್ನು ವಿಶದೀಕರಿಸುತ್ತಾರೆ, "....ಬಂದುದ ಪಡುವ । ಮಂದಿಗಳವರು ಹಳ್ಳಿಗರು; ದೈವವನು ಪ್ರಶ್ನಿಸಿದವರಲ್ಲ । ಹಗಲಿರಳು ಉದಯಾಸ್ತ ಅಂಬರ ತಾರೆ ತೇಲುದೀಪಂ। ಮಳೆಗಾಳಿ ಬೆಳೆಬದುಕು ಸೊಗದುಚ್ಚಳಿಕೆ ದುಕ್ಕದಯಿಳಿಕೆ । ದೇವರದಿದೇನಾಟಮೋ ಎಂದೆನುತ ಸೈರಿಪರಿವರು...." ಎನ್ನುತ್ತಾ ದೇವಕಿಗೂ ದೊರೆಯದಿದ್ದ ಭಾಗ್ಯ ಯಶೋದೆಗೆ ದೊರಕಿ, "ಹಡೆದವ್ವನಿಗೂ ಪೊರೆದವಳೆ ಮಿಗಿಲೆಂದು ಬಲ್ಲವರೊರೆದ ಮಾತಿಗೆ" ಯಶೋದೆ

ಸಾಕ್ಷಿಯೆಂದು, ಅವಳಿಗೂ ಯಶೋದಾವತ್ಸನಿಗೂ ಮಂಗಳ ಕೋರುತ್ತಾರೆ. ಗೋಕುಲದ ತಾಯಂದಿರಿಂದಾಗಿ ಭಾರತದ ಮಕ್ಕಳಿಗೆ ಅಮಿತ ಭಾಗ್ಯ ದೊರಕಿದ್ದರೆ, ರಾಧೆಯ ಪ್ರೇಮವನ್ನು ಕಲೆಗಳಲ್ಲಿ ಸಾಕ್ಷಾತ್ಕರಿಸಲು ನಾವಿಂದೂ ಕೂಡಾ ಹೆಣಗುತ್ತಿದ್ದೇವೆ ಎನ್ನುತ್ತಾರೆ ಪು.ತಿ.ನ. ಹಾಗೂ ಗೋಕುಲದ ಮಹಿಮೆಯನ್ನು ಹೀಗೆ ವರ್ಣಿಸುತ್ತಾರೆ, "ಇಂದೆಮಗೆ ವಾತ್ಸಲ್ಯ ಶಿಕ್ಷಾಗುರುಕುಲಂ ಗೋಕುಲಂ। ಸ್ತ್ರೀಗು ಪುರುಷಗುಮೊಲುಮೆಗಲಿಸುವ ಗರಡಿ ಬೃಂದಾವನಂ."

ಲೋಕೋದ್ಧಾರಕ್ಕೆ ಅವಶ್ಯಕವಾದ ಸದ್ಗುಣಗಳಾದ "ಒಲಿವರೊಳು ಹಿತವರಿ ತೊಲಿವುದು, ಹಗೆವರೊಳು ನಿರ್ವೈರ ಬೀಜವಂ", ಬೃಂದಾವನದಲ್ಲಿ ಹೊರತು ಮತ್ತೆಲ್ಲಿ ಕಲಿತ ಹರಿ? ಹಾಗೆಯೇ ಮುಂದೆ ಗೀತಾಚಾರ್ಯನಾದ ಶ್ರೀಕೃಷ್ಣ ಕರ್ಮಯೋಗ ಸಿದ್ಧಾಂತದ ಬೀಜಾಂಕುರವನ್ನು ಬೃಂದಾವನದ ಜನರಬದುಕಿನ ರೀತಿಯಿಂದಲೇ ಅಲ್ಲವೆ ಕಲಿತಿದ್ದು ಎನ್ನುತ್ತಾರೆ ಪು.ತಿ.ನ. ಕಾಮ, ಕ್ರೋಧ, ಲೋಭ, ಮೋಹಗಳು ತುಂಬಿದ ನಗರ ಜೀವನದಲ್ಲಿ, ಕರ್ಮಯೋಗದ ಸಾರವನ್ನಾಗಲೀ, ರಹಸ್ಯವನ್ನಾಗಲೀ ಅರಿಯ ಲಾಗುವುದಿಲ್ಲವೆಂಬುದು ಪು.ತಿ.ನ. ಅವರ ಅಭಿಪ್ರಾಯ.

ಈ ಸಂದರ್ಭದಲ್ಲಿ ಶ್ರೀ ಕೃಷ್ಣನು ಗೀತೆಯಲ್ಲಿ ಉಪದೇಶಿಸಿರುವ ಕರ್ಮಯೋಗ ಸಿದ್ಧಾಂತವನ್ನು ಪು.ತಿ.ನ. ವಿಶಿಷ್ಟ ರೀತಿಯಲ್ಲಿ ವಿಶ್ಲೇಷಿಸುತ್ತಾರೆ, ನಿಷ್ಕಾಮ ಕರ್ಮಯೋಗದ ಸಾರವನ್ನು ಶ್ರೀ ಕೃಷ್ಣ ತನ್ನ ಗೋಕುಲವಾಸದ ಸಮಯದಲ್ಲಿಯೇ ಮೈಗೂಡಿಸಿಕೊಂಡಿದ್ದ ಎನ್ನುವ ಪು.ತಿ.ನ., ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿರುವ ದುಷ್ಟರನ್ನು ಶಿಕ್ಷಿಸಿ ಸಾಧುಜನರನ್ನು ಸಂರಕ್ಷಿಸುವ ಸಲುವಾಗಿ ಯುಗಯುಗಗಳಲ್ಲಿಯೂ ನಾನು ಹುಟ್ಟಿ ಬರುತ್ತೇನೆ ಎನ್ನುವುದನ್ನೂ, ನನ್ನಲ್ಲಿ ಯಾರು ಶರಣು ಬರುತ್ತಾರೋ ಎಲ್ಲಾ ಧರ್ಮಗಳನ್ನೂ ತ್ಯಜಿಸಿ ಯಾರು ತಮ್ಮನ್ನು ತಾವು ಸಂಪೂರ್ಣವಾಗಿ ನನಗೆ ಒಪ್ಪಿಸಿಕೊಳ್ಳುತ್ತಾರೋ ಅಂತಹವರ ಯೋಗಕ್ಷೇಮವನ್ನು ನಾನು ವಹಿಸಿಕೊಳ್ಳುತ್ತೇನೆ ಎನ್ನುವ ವಾಕ್ಯಗಳನ್ನು ಉದ್ಗರಿಸುತ್ತಾರೆ. ಇಂತಹ ಮಹಾವಾಕ್ಯಗಳಲ್ಲಿ ಪು.ತಿ.ನ ಎರಡು ರೀತಿಯ ಅಹಂಗಳನ್ನು ಗುರುತಿಸುತ್ತಾರೆ; "ಒಂದು ನರನದು ಅಂದರೆ ವ್ಯಕ್ತಿಯದು – ಮತ್ತೊಂದು ನಾರಾಯಣನದು, ಸಮಷ್ಟಿ ತತ್ವದ್ದು. ಶ್ರೀ ಕೃಷ್ಣನ ಈ ಸೂತ್ರಗಳು ವ್ಯಕ್ತಿಗೂ, ಸಮಷ್ಟಿಗೂ ಇರಬೇಕಾದ ಅನ್ಯೋನ್ಯ ಸಂಬಂಧವನ್ನು ಕುರಿತದ್ದಾಗಿವೆ. ಶ್ರೀಕೃಷ್ಣೋಪದಿಷ್ಟ ಸನಾತನ ಜಗನ್ನಿರ್ವಾಹಕ ಕರ್ಮಯೋಗ, 'ಕರ್ಮಣ್ಯೇವಾಧಿಕಾರಸ್ತೆ' ಎಂಬುದರಲ್ಲಿ ವ್ಯಕ್ತಿಗಿರುವ ಕರ್ಮಸ್ವಾತಂತ್ರ್ಯ ಉಕ್ತವಾಗಿದೆ; 'ಮಾಫಲೇಷು ಕದಾಚನ' ಎಂಬಲ್ಲಿ ವ್ಯಕ್ತಿಯ ಅಧಿಕಾರ ವ್ಯಾಪ್ತಿ ಫಲದಲ್ಲಿ ಎಂದಿಗೂ ಇಲ್ಲ ಎಂಬುದು ನಿರ್ದಿಷ್ಟವಾಗಿದೆ, ಆದರೆ ಕರ್ಮಕ್ಕೆ ಫಲ ಉಂಟೆ ಉಂಟಲ್ಲ, ಅದು ಯಾರ ಸ್ವತ್ತು, ಅದರ ವಿತರಣೆ ಹೇಗೆ? ಅದು ಸಮಷ್ಟಿಗೆ ಸೇರಿದುದು, ಅದರ ವಿತರಣೆಯೂ ಸಮಷ್ಟಿಯ ಕೆಲಸ; ಈ ಮಾತು "ಯೋಗಕ್ಷೇಮಂ

ವಹಾಮ್ಯಹಂ" ಎಂಬಲ್ಲಿ ಪ್ರಕಾಶಗೊಂಡಿದೆ, ಹೀಗೆ ವ್ಯಕ್ತಿಗೂ ಸಮಷ್ಟಿಗೂ ಇರುವ ಸಂಬಂಧ ಆದಾನ ಪ್ರದಾನ ರೂಪವಾದ ಅನ್ಯೋನ್ಯತೆ, ಪಡೆಯುವುದು ಮತ್ತು ಪಡೆದುದನ್ನು ಹಂಚುವುದು ಇದು ಕರ್ಮಯೋಗದ ಪ್ರಕ್ರಿಯೆ, ವ್ಯಕ್ತಿಗೆ ಸಮರ್ಪಣರೂಪವಾದ ಫಲವಿರಕ್ತಿ; ಸಮಷ್ಟಿಗೆ ವಿತರಣರೂಪವಾದ ಸಂಚಿತಫಲವಿರಕ್ತಿ. ಇಬ್ಬರಿಗೂ ಕೊಡುವುದೇ ಕರ್ತವ್ಯ. ಅದರಿಂದಲೆ ತೃಪ್ತಿ, ಸಂತೋಷ, ಪುಷ್ಟಿ. (ಪು.ತಿ.ನ. 'ಅರಿಕೆ', 'ಅಹಂಕಾರ', ಪುಟ ೮–೯).

ಕರ್ಮಯೋಗ ಸಿದ್ಧಾಂತದ ಬಗೆಗಿನ ಪು.ತಿ.ನ. ಅವರ ಈ ವಿಶಿಷ್ಟ ಗ್ರಹಿಕೆಯನ್ನು ಸಾಮಾಜಿಕ ಜೀವನದ ಹಲವಾರು ಕ್ಷೇತ್ರಗಳಿಗೆ, ಕ್ರಿಯೆಗಳಿಗೆ ಅನ್ವಯಿಸಬಹುದು. ಉದಾಹರಣೆಗೆ, ವ್ಯಕ್ತಿಯಿಂದ ಸರ್ಕಾರಕ್ಕೆ (ಸಮಷ್ಟಿರೂಪದ ಆಡಳಿತ ಕೇಂದ್ರಕ್ಕೆ ಎಂದುಕೊಳ್ಳಬಹುದು) ಸಂದಾಯವಾದ ತೆರಿಗೆಗಳನ್ನು ಸಾರ್ವಜನಿಕರ ಹಿತರಕ್ಷಣೆಯಾಗುವಂತೆ ವಿತರಿಸದಿದ್ದರೆ ಉಂಟಾಗುವ ಅನನುಕೂಲ ಅಸಂತೋಷಗಳನ್ನು ಹೆಸರಿಸಬಹುದು. ತೆರಿಗೆ ಸಲ್ಲಿಸುವುದು ವ್ಯಕ್ತಿಯ ಕರ್ಮ, ಅದರ ಸಮರ್ಪಕ ವಿತರಣೆ ಆಡಳಿತದ್ದು. ಹಾಗೆಯೇ ಒಬ್ಬ ಬೌಲರ್‌ಗೆ ಚೆಂಡನ್ನು ಎಸೆಯುವ ಕ್ರಿಯೆಯ ಸ್ವಾತಂತ್ರ್ಯ ಮಾತ್ರ ಇರುತ್ತದೆ. ಅದರೆ ಆ ಎಸೆತದ ಫಲ ಅವನ ಅಧಿಕಾರದ ವ್ಯಾಪ್ತಿಯಲ್ಲಿರುವುದಿಲ್ಲ. ಅದರ ಪರಿಣಾಮ ಏನಾದರೂ ಆಗಬಹುದು. ಆ ಪರಿಣಾಮ ಎರಡೂ ತಂಡಗಳ ಮೇಲೂ ಉಂಟಾಗುತ್ತದೆನ್ನುವುದನ್ನೂ ಅಲ್ಲಗೆಳೆಯಲಾಗುವುದಿಲ್ಲ.

ಫಲಾಸಕ್ತಿಯ ಬಗೆಗೆ ಪು.ತಿ.ನ. ಅವರ ಈ ಮಾತುಗಳು ಗಮನಾರ್ಹ. "ಕರ್ಮಯೋಗದ ದೃಷ್ಟಿಯಲ್ಲಿ, ವ್ಯಕ್ತಿಯ ಫಲಾಸಕ್ತಿ ಆತ ಸಮಷ್ಟಿಗೆಸಗುವ ದ್ರೋಹ; ಸಮಷ್ಟಿಯ ಫಲವಿತರಣೆಯಲ್ಲಿ ಅನ್ಯಾಯ, ಅದಕ್ಷತೆ, ಪಕ್ಷಪಾತ ತಲೆದೋರಿದರೆ, ಅದು ವ್ಯಕ್ತಿಗೆಸಗುವ ದ್ರೋಹ. ಈ ದ್ರೋಹ ಬುದ್ಧಿಗಳು ಉಭಯರಿಗೂ ಲೋಭ ಪ್ರವೃತ್ತನಾದ ಫಲಾಸಕ್ತಿಯಿಂದ ಹುಟ್ಟುತ್ತದೆ. ಕಾಮ ಕ್ರೋಧಗಳು ಲೋಭದ ಮುಖಗಳೇ ಎನ್ನಬಹುದು. ಇದನ್ನೇ ಶ್ರೀಕೃಷ್ಣ ಆತ್ಮನಾಶಕಗಳಾದ ಮೂರು ನರಕ ದ್ವಾರಗಳೆಂದು ಕರೆದು, ಅವನ್ನು ತೊರೆಯಬೇಕೆಂದು ತನ್ನ ಆಪ್ತಮಿತ್ರನಿಗೆ ಉಪದೇಶಿಸುತ್ತಾನೆ."

ಹೀಗೆ ಪು.ತಿ.ನ. 'ಶ್ರೀಹರಿಚರಿತೆ'ಯ 'ಅರಿಕೆ'ಯಲ್ಲಿ ಮತ್ತು "ಯಶೋದಾ ವತ್ಸನಿಗೆ ಜಯಮಂಗಳಂ" "ಉಲ್ಲಾಸಂ"ನಲ್ಲಿ ಕರ್ಮಯೋಗದ ಸಿದ್ಧಾಂತವನ್ನು, ಸಾಮಾಜಿಕ, ರಾಜಕೀಯ, ಆಧ್ಯಾತ್ಮಿಕ ಹಾಗೂ ಮನೋವೈಜ್ಞಾನಿಕ ನೆಲೆಗಟ್ಟುಗಳಿಂದ ಅತ್ಯಂತ ನಿಖರವಾಗಿ ವಿಶ್ಲೇಷಿಸಿದ್ದಾರೆ. ಸಮಷ್ಟಿ ಪ್ರತಿನಿಧಿಗಳಲ್ಲಿ ನಾವು ಕಾಣಬಯಸುವ ಅನೇಕ ಗುಣಗಳು ಗೀತೆಯಲ್ಲಿ ಸೂಕ್ತಿರೂಪದಲ್ಲಿರುವುದನ್ನು ಉದಾಹರಿಸುತ್ತಾರೆ: "ಸಹೃದಂ ಸರ್ವಭೂತಾನಾಂ", "ನಿರ್ವೈರಸ್ಸರ್ವಭೂತೇಷು", "ಯೋಗಯುಕ್ತಾತ್ಮ ಸರ್ವತ್ರ ಸಮದರ್ಶನ" ಮುಂತಾದ ಕೆಲವನ್ನು ಇಲ್ಲಿ ಸ್ಮರಿಸಬಹುದು.

ಯಶೋದಾವತ್ಸನಿಗೆ ಜಯಮಂಗಳಂ, ಉಲ್ಲಾಸಂನಲ್ಲಿ ಅರವತ್ತನೆಯ ಸಾಲಿನಿಂದ ನೂರಹತ್ತನೆಯ ಸಾಲಿನ ತನಕ ಕರ್ಮಯೋಗದ ಬಗೆಗಿನ ತಮ್ಮ ವಿಶಿಷ್ಟವಾದ ನಿಲುವನ್ನು ವಿಶದಪಡಿಸಿ, ಈ ಸಿದ್ಧಾಂತ ಕೇವಲ ದ್ವಾಪರ ಯುಗದ ಜನರಿಗೆ ಮಾತ್ರ ಸೀಮಿತವಾದದ್ದಲ್ಲ, ಆದರೆ ಈ "ಇದೆ ಹರಿಯುಪದಿಷ್ಟ! ನಿರ್ದುಷ್ಟ ಕರ್ಮಯೋಗಂ, ಗಾಂಧಿ, ಮಾರ್ಕ್ಸ್, ಚಾಣಕ್ಯ ಮತ್ತನಿಬರಂ ತಾನೊಳಕೊಂಡು ಮೆರೆವ ಯೋಗೀಶ್ವರ ಗೀತೋದಿತಂ" ಎಂದು ಈ ಸಿದ್ಧಾಂತದ ಮೂಲಕ ದ್ವಾಪರ ಮತ್ತು ಕಲಿಯುಗಗಳನ್ನು ಒಂದುಗೂಡಿಸುವುದಲ್ಲದೇ ಅದರ ಸಾರ್ವಕಾಲಿಕತೆ ಮತ್ತು ಸಾರ್ವತ್ರಿಕತೆಗಳನ್ನು ಪ್ರತಿಪಾದಿಸುತ್ತಾರೆ.

ಭಕ್ತಿ, ಜ್ಞಾನ, ವೈರಾಗ್ಯ ಸಂಪನ್ನನಾದ ಕರ್ತವ್ಯಶಾಲಿ ಚಲಿಸುವ ಈ ಮಾರ್ಗ ಸರ್ವೋದಯಕೆ ದಾರಿ ಎಂದು, ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಪು.ತಿ.ನ. ಹೀಗೆ ವಿಶದೀಕರಿಸುತ್ತಾರೆ: "ಭಕ್ತಿಯೆನೆ ಕರ್ಮಾಸಕ್ತಿ, ಫಲದಿ ವಿರಕ್ತಿ: ಜ್ಞಾನಮೆನೆ । ಸಮಷ್ಟಿಯ ನಲ್ ತಿಳಿವು: ವೈರಾಗ್ಯಮೆನೆ ಸ್ವಂತಹಿತವನು । ಸಮಷ್ಟಿಯ ಹಿತದೊಳಗೆ ಲಯಗೊಳಿಸುವಿಕೆ.... ಪ್ರಪದನಮಿದೇ । ಕೂಪದೊಳು ಕೊಳೆಯದೆಯೆ ಕಡಲ ತರಂಗವೆನಲಾಗುವಿಕೆ....", ಫಲದಲ್ಲಿ ವಿರಕ್ತಿ ಇರಬೇಕೆ ವಿನ: ಕರ್ಮದಲ್ಲಿ ಆಸಕ್ತಿ. ಇಲ್ಲದಿರಬಾರದು ಎಂಬುದೇ ಭಕ್ತಿಯ ಲಕ್ಷಣವೆನ್ನುತ್ತಾರೆ. ಸಮಷ್ಟಿಯ ಬಗೆಗೆ ಒಳ್ಳೆಯ ಅರಿವಿರುವುದೇ ಜ್ಞಾನ, ಸ್ವಂತಹಿತವನ್ನು ಸಮಷ್ಟಿಯಲ್ಲಿ, ಲಯಗೊಳಿಸುವುದೇ ವೈರಾಗ್ಯ–ಎಲ್ಲವನ್ನೂ ಬಿಟ್ಟು ಹೋಗುವುದಲ್ಲ ಎಂದು ಸರಳಸೂತ್ರಗಳಲ್ಲಿ ಮನದಟ್ಟು ಮಾಡುತ್ತಾರೆ, ಪು.ತಿ.ನ. ಇಂತಹದೊಂದು ಯೋಗಕ್ಷೇಮ ಸಂವಹನ ಪ್ರಕ್ರಿಯೆಯನ್ನು, ಯೋಗಕ್ಷೇಮ ಸಂವಹನವನ್ನು "ಫಲಪರಿಚಲನಚಕ್ರ" ಎಂದು ಹೆಸರಿಸುತ್ತಾರೆ. ಇದು ನಮಗೆ ಅಪರಿಚಿತವೇನಲ್ಲ, ಈ "ಫಲಪರಿಚಲನಚಕ್ರ". ಪ್ರಕೃತಿಯಲ್ಲಿಯೂ, ನಮ್ಮ ದೇಹದಲ್ಲಿಯೂ ಕಂಡುಬರುವಂತಹ ಪ್ರಕ್ರಿಯೆ ಅಥವಾ ನೈಸರ್ಗಿಕ ಕರ್ಮಯೋಗ ಇದು ಎನ್ನುತ್ತಾರೆ ಪು.ತಿ.ನ. ಇಂತಹ ನೈಸರ್ಗಿಕ ಕರ್ಮಯೋಗದ ಪ್ರಕ್ರಿಯೆಯಿಂದಾಗಿ ನಾವು ಸೇವಿಸಿದ ಆಹಾರ "ರುಧಿರಾನ್ನರಸವಾಗಿ, ವಿದ್ಯುದೂರ್ಜೆ"ಯಾಗಿ ಪರಿವಹಿಸಿ, ದೇಹದ ಸರ್ವಾಂಗದಲ್ಲಿಯೂ ಪುಷ್ಟಿಯನ್ನು ತಂದುಕೊಡುವ ಪವಾಡ ನಡೆಯುತ್ತದೆ.

ಇದು ಸಮರ್ಪಕವಾಗಿ ನಡೆಯಲು ಅನುವು ಮಾಡಿ ಕೊಡಬೇಕಾದವನು 'ನಾನ್' ಎಂಬ ಈ ವ್ಯಕ್ತಿ ಚೇತನ. ಈ ನಾನ್ ಎಂಬ ಚೇತನ–ವ್ಯಕ್ತಿ, ಅಜ್ಞ, ಅದಕ್ಷ, ಅಸಂಯಮ, ಅತಿಭೋಗಿ, ಇತ್ಯಾದಿ ದುರ್ಗುಣಗಳಿಂದ ಕೂಡಿದ್ದರೆ, ದೇಹದಲ್ಲಿನ ನೈಸರ್ಗಿಕ ಕರ್ಮಯೋಗ ಪ್ರಕ್ರಿಯೆ ಸಮರ್ಪಕವಾಗಿ ನಡೆಯಲಾರದು. ಆಗ ಆ ವ್ಯಕ್ತಿ 'ಶಿವ'ದಿಂದ ಭ್ರಷ್ಟನಾಗಿ, ದತ್ತಾಧಿಕಾರದಿಂದ ನಿವೃತ್ತನಾಗುತ್ತಾನೆ. ಹಾಗೆಯೇ ಜಗತ್ತೆಂಬ ದೇಹದಲ್ಲಿ "ಫಲಪರಿಚಲನ ಸರ್ವಯೋಗಕ್ಷೇಮ ಚಕ್ರ" ನಡೆಗೆಟ್ಟರೆ, ದಾರಿತಪ್ಪಿದರೆ, ಅದನ್ನು

ಸರಿಪಡಿಸಲು ಪ್ರಕ್ಷುಬ್ಧ ಜಲಧಿಯಿಂದ ಅಮೃತಧರನಂತೆ, "ಸರ್ವಭೂತ ಹಿತ ರತ ಲೋಕೋತ್ತರ"ನೊಬ್ಬ ಉದ್ಭವಿಸುತ್ತಾನೆ. ಲೋಕವನ್ನು ನೆಮ್ಮದಿಗೊಳಿಸುವ ತನ್ನ ಉದ್ಯೋಗಕ್ಕೆ ಅಡ್ಡಿ ಬರುವವರನ್ನು ನಿಗ್ರಹಿಸುವುದೇ ದುಷ್ಟ ಶಿಕ್ಷಣ, ಆ ಕಾರ್ಯಕ್ಕೆ ಅನುಕೂಲ ಮಾಡುವವರನ್ನು ರಕ್ಷಿಸುವುದೇ ಶಿಷ್ಟರಕ್ಷಣ... ಇದೇ ಧರ್ಮ ಸಂಸ್ಥಾಪನ, ಇದನ್ನು ಗೋಕುಲ ಪ್ರಸ್ಥಾನದ ನಂತರ ಕೃಷ್ಣನ ಉತ್ತರೋತ್ತರ ಚರಿತೆಯಲ್ಲಿ ನಾವು ಕಾಣುತ್ತೇವೆ ಎಂದಿದ್ದಾರೆ ಪು.ತಿ.ನ.

ಮೂವತ್ತಮೂರನೆಯ ಹಾಗೂ ಕಡೆಯ ಉಲ್ಲಾಸಂ, ನಿವೇದನಂ, ಪು.ತಿ.ನ. ತಾವು ತಮ್ಮ ಕೃಷ್ಣ ಭಕ್ತಿ ಹಾಗೂ ಹರಿಸ್ಮರಣೆಯಿಂದಾಗಿಯೇ "ಈ ನಾಡಿನ ಜಿತಾಜೇಯ ವಿಷಯ ರಾಷ್ಟ್ರಕನೂ, ದಿವ್ಯಾತ್ಮದಿಂದುದಿಸಿರುವ ಚಿತ್ ಕ್ಷೇತ್ರ ಯಾತ್ರಿಕನೂ" ಆಗಿರುವುದನ್ನು ಸ್ಮರಿಸುತ್ತಾರೆ. ಶ್ರೀ ಕೃಷ್ಣನ ಉಪದೇಶ ಗಾಂಧಿಯಲ್ಲಿ ಮೂರ್ತೀಭವಿಸಿ, ನಮ್ಮ ನಾಡಿನ ಪರಾಕ್ರಮಣದ ಶಾಪವನ್ನೇನೋ ತೊಡೆಯಿತು. ಆದರೆ ನಮ್ಮ ಮನಸ್ಸುಗಳು "ಪರಮಾನಸಾಕ್ರಮಣ"ದಿಂದ ಇನ್ನೂ ಸ್ವಾತಂತ್ರ್ಯ ಪಡೆಯಲಿಲ್ಲವೆಂಬುದು ಪು.ತಿ.ನ. ಅವರ ಮನಸ್ಸನ್ನು ಬಾಧಿಸುತ್ತದೆ. "....ಪರಮಾನಸಾಕ್ರಮಣದಿಂದೆಮ್ಮಮನ । ಸ್ವಾತಂತ್ರ್ಯವನು ಪಡೆದು ಸ್ವಂತಿಕೆ ಗಳಿಸಿ ಕಂಗೊಳಿಸುವಂ । ತೆಸಗದೇ ಕರ್ಮಯೋಗೋಪದೇಶಂ ಶುದ್ಧಾತ್ಮರಿಂ । ಪ್ರಸ್ತುತಂ...." ಎನ್ನುತ್ತಾ "ಸತತಮಿರಲಿ ನಿನ್ನ ಸ್ಮರಣೆ ಭಾರತಕೆ" ಎಂದು ಶ್ರೀಹರಿಯನ್ನು ಕೋರುತ್ತಾ 'ಶ್ರೀಹರಿಚರಿತೆ'ಯ ಮುಕ್ತಾಯ ಮಾಡುತ್ತಾರೆ. 'ಶ್ರೀಹರಿಚರಿತೆ'ಯ ಛಂದ ಮತ್ತು ಭಾಷಾ ಪ್ರಯೋಗದ ಬಗೆಗೆ "ಆದಿ, ನಡು, ಹೊಸಗನ್ನಡದ ಸಕ್ಕದದ ಬೆರಕೆಯ ರೀತಿ । ಹೊಸಬಗೆ ನಡೆಯ ತೊಂತೊನ್ನ ತಾನಗತಿ ಛಂದ"ದಲ್ಲಿ ತಾವು ಈ 'ಶ್ರೀಹರಿಚರಿತೆ'ಯನ್ನು ರಚಿಸಿದ್ದು ಪಂಡಿತರು ಇದನ್ನು ಮನ್ನಿಸುವರೆ ಎಂದು ತಮ್ಮನ್ನು ಪ್ರಶ್ನಿಸಿಕೊಳ್ಳುತ್ತಾರೆ.

ವ್ಯಕ್ತಿ ಮತ್ತು ಸಮಷ್ಟಿ, ವ್ಯಕ್ತಿ ಮತ್ತು ಸಮಸ್ತ ಸೃಷ್ಟಿ ಇವುಗಳ ಪರಸ್ಪರ ಬಾಂಧವ್ಯ ಕೊಡು ಕೊಳ್ಳುವಿಕೆಗಳನ್ನು, ವೈಯಕ್ತಿಕ, ಸಾಮಾಜಿಕ, ಆಧ್ಯಾತ್ಮಿಕ ಮತ್ತು ರಾಜಕೀಯ ನೆಲೆಗಳಿಂದ ದ್ವಾಪರದ ಕೃಷ್ಣನ ಬದುಕಿನ ಮೂಲಕ, ವಿಶ್ಲೇಷಿಸಿ ಸ್ವಾಸ್ಥ್ಯಪೂರ್ಣ ಬದುಕಿಗೆ ಸರ್ವಕಾಲದಲ್ಲಿಯೂ ಅವಶ್ಯಕವಾದ ಮೌಲ್ಯಗಳನ್ನು ಅನನ್ಯವಾಗಿ ಕಟ್ಟಿ ಕೊಟ್ಟಿರುವ ಕಾವ್ಯ 'ಶ್ರೀಹರಿಚರಿತೆ'. ಶ್ರೀಹರಿಯ ಸಮಗ್ರ ಬದುಕನ್ನೂ ಹೀಗೆ ಕಾವ್ಯಮಯವಾಗಿ ಪು.ತಿ.ನ. ಚಿತ್ರಿಸಬಾರದಿತ್ತೇ ಎನಿಸುತ್ತದೆ. "ಶ್ರೀಹರಿಚರಿತೆ ಕಾವ್ಯಮಿದಕೆ ಸುಮನೋಲ್ಲಾಸಕಂ। ಶ್ರೀಹರಿಕೃಷ್ಣ ಪಾರಿತೋಷಕಂ."

**[ಭದ್ರಂ ಶುಭಂ ಮಂಗಳಂ]**